विश्वविद्याग्रन्थमाला-५

श्रीवेदव्यासप्रणीतं

# श्रीमद्भागवतम्

स्कन्धः-2

श्रीराघವೇಂದ್ರದಾಸಕೃತ

ವಿಜಯಧ್ವಜೀಯವ್ಯಾಖ್ಯಾನಾನುಸಾರಿ ಕನ್ನಡಾನುವಾದ

# ಶ್ರೀಮದ್ಭಾಗವತ ಸುಧಾಸೌರಭ

सम्पादकः

सि. आर् प्रदीपसिंहाचार्यः चतुर्वेदः

प्रकाशनम्

वेदवेदान्ताध्यनशोधसंसस्थानम्

नवदेहली, वसन्तकुञ्ज

२०१९

विश्वविद्याग्रन्थमाला-५

**श्रीवेदव्यासप्रणीतं श्रीमद्भागवतम्, स्कन्धः-2**

ಶ್ರೀರಾಘವೇಂದ್ರದಾಸಕೃತ ವಿಜಯಧ್ವಜೀಯವ್ಯಾಖ್ಯಾನಾನುಸಾರಿ

**ಕನ್ನಡಾನುವಾದ ಶ್ರೀಮದ್ಭಾಗವತ ಸುಧಾಸೌರಭ**

सम्पादकः -

सि. आर् प्रदीपसिंहाचार्यः चतुर्वेदः

प्रकाशनम्

वेदवेदान्ताध्यनशोधसंसस्थानम्

नवदेहली, वसन्तकुञ्ज

पत्राणि - 128 peges

प्रथममुद्रणम् 2019

मुद्रितप्रतयः 250

मूल्यम्- 80

जगद्गुरुश्रीमन्मध्वाचार्यमूलमहासंस्थानम्-

श्रीपेजावरअधोक्षजमठः-उडुपि

## श्रीविश्वप्रसन्नतीर्थश्रीपादानाम्

## अनुग्रहसन्देशः

श्रीपेजावरमठाधीशैः यतिकुलचक्रवर्तीत्यादिबिरुदाङ्कितैः अस्मद्गुरुचरणैः श्रीविश्वेशतीर्थश्रीपादैः उत्तरभारतक्षेत्रे माध्वतत्वप्रसारणाय राजधान्यां नवदेहलीप्रदेशे श्रीरामविठ्ठलशिक्षणसेवासमितिमुखेन संस्थापितं वेदवेदान्ताध्ययनशोधसंस्थानम् । महान्तमिमं भारमुदूह्य वेद-वेदान्त-इतिहास-पुराण-काव्यादीनां भाषान्तर-संशोधन-ग्रन्थप्रकाशन-प्रसारणादिनानाकर्मणा श्रीमन्मध्ववेदव्याससेवां कुर्वदिदं संशोधनमन्दिरं माध्वततेर्महान्तम् उपकारं विदधत् अस्मदादरपात्रं वर्तते । संशोधनादिकर्मणि नियुक्ता अस्मच्छिष्या विपश्चितः यावच्छक्ति ग्रन्थादि संशोध्य अनूद्य च व्यास-मध्वसेवां व्यदधुः । तमिमं ग्रन्थवरं संशोधयित्रे विदुषे, प्रकाशयित्रे वेदवेदान्ताध्ययनशोधसंस्थान-कार्यकारिसमित्यै, निदेशकाय च अस्मदुपास्यचरणौ श्रीरामविट्ठलौ श्रेयो दत्तामिति सम्प्रार्थयामहे ।

इति नारायणस्मृतयः

# निदेशकवाचांसि

मानवानां परमपुरुषार्थसाधनायाध्यात्मतत्वज्ञानमावश्यकम् । तच्चोत्तरभारते बहुन्यूनमिति तत्रापि माध्वतत्वज्ञानप्रसारणाय नवदेहलीप्रान्ते श्रीपेजावरमठाधीशैः श्रीविश्वेशतीर्थ-श्रीमच्चरणैः स्थापितमिदं वेद-वेदान्ताध्ययनशोधसंस्थानम् । परमपूज्यानां पमहंसप्रवराणां यतिकुल-चक्रवर्तिनां श्रीविश्वेशतीर्थश्रीमच्चरणानां तथा तच्छिष्याणां श्रीविश्वप्रसन्न तीर्थश्रीपादानां परमानुग्रहेण मार्गदर्शनेन च वरीवर्धमानमिदं श्रीचरणानां प्रेरणया विश्वविद्याग्रन्थमालानाम्ना विश्वतोमुखतया वेद-वेदान्त-इतिहास-काव्य-व्याकरणादिग्रन्थानां भाषान्तर-प्रकाशन-प्रसरणादि-महत्कर्मणि सहर्षं सोत्साहं समुद्यतम् । अध्येतृसुजनवृन्दश्चानेन ग्रन्थप्रकटनेन समुत्कट-प्रयोजनजातमभिसम्पद्यतामित्यभिकामये ।

विश्वविद्याग्रन्थमालायाः पञ्चमकुसुमत्वेन ग्रन्थमिमं सारस्वतलोकं प्रति समर्प्यते । शास्त्रज्ञाः सहृदयाः अस्य ग्रन्थस्य स्वागतं व्याहरन्तीति मन्ये । महति कार्येस्मिन् भागभाग्भ्यः सर्वेभ्यः, ग्रन्थस्य सम्पादन-संशोधनकर्मणि सहकृतवद्भ्यः विद्वद्भ्यः, मुद्रकेभ्यश्च अधमर्णोहम् ।

निदेशकः

## ಸಂಪಾದಕೀಯ

ಶ್ರೀಮದ್ಭಾಗವತವು ಪುರಾಣರಾಜ. ಇದರ ಮೊಟ್ಟ ಮೊದಲನೆಯ ಕನ್ನಡೀಕರಣವು ಶ್ರೀವರದಪ್ರಲ್ಹಾದ-ಹರಿವಿಠಲಾಂಕಿತರಾದ ಮೈಸೂರುರಾಘವೇಂದ್ರದಾಸರಿಂದ ಆಗಿರತಕ್ಕಂತದ್ದು. ಶ್ರೀವಿಜಯಧ್ವಜತೀರ್ಥರ ಪದರತ್ನಾವಲೀ ಟೀಕೆಯ ಅಭಿಪ್ರಾಯಗಳನ್ನೊಳಗೊಂಡಂತೆ ಅನೇಕ ಟಿಪ್ಪಣಿಗಳ ವಿಷಯಗಳನ್ನೂ ಸಹ ಇಲ್ಲಿ ಅನುವಾದ ಮಾಡಿದ್ದಾರೆ. ಮೂಲಗ್ರಂಥ ಹಾಗೂ ಕನ್ನಡಾನುವಾದವನ್ನು ಬರೆದ ಇವರ ಹಸ್ತಪ್ರತಿಯಲ್ಲಿ ಎಲ್ಲೂ ಸಹ ತಪ್ಪುಬರೆದು ನಂತರ ತಿದ್ದಿದ ಚಿಹ್ನೆ ಕಾಣಿಸುವುದಿಲ್ಲ. ವಿದ್ವಾಂಸರೂ ಸಹ ಇದನ್ನು ಅಧ್ಯಯನ ಮಾಡಿದರೆ ಭಾಗವತದ ಸರಿಯಾದ ಭಾವವು ಸ್ಪಷ್ಟವಾಗುವುದರಲ್ಲಿ ಸಂದೇಹವಿಲ್ಲ ಕೆಲವು ಕಡೆ ವ್ಯಾಖ್ಯಾನಗಳಲ್ಲಿ ಕಂಡುಬರದಿರುವ ಅರ್ಥಗಳನ್ನು ಬರೆದಿರುವುದೂ ಕಂಡುಬರುತ್ತದೆ. ಈ ಅನುವಾದದ ಕೆಲವು ವಿಶೇಷಅಂಶಗಳನ್ನು ಹೀಗಿವೆ. ತೃತೀಯಸ್ಕಂಧದಲ್ಲಿ ವರಾಹಾವತಾರಕಥೆಯನ್ನು ನಿರೂಪಿಸುವಾಗ ವಿಶೇಷಾಂಶ ಎಂದು ಭಾಗವತತಾತ್ಪರ್ಯದ ವಿಷಯವನ್ನು ವಿವರಿಸಿದ್ದಾರೆ. ಚತುರ್ಥಸ್ಕಂಧದಲ್ಲಿ ರುದ್ರಗೀತೆಯ ತ್ರೈಲೋಕ್ಯಪಾಲಕ ಎಂಬ ಶಬ್ದಕ್ಕೆ ನೂತವಾದ ಅರ್ಥವನ್ನು ವಿವರಿಸಿ ಇದು ತತ್ವದೇವತೆಗಳು ಸೂಚಿಸಿದ ಅರ್ಥ ಎಂದು ಬರೆದಿದ್ದಾರೆ. ಅಷ್ಟಮಸ್ಕಂಧದಲ್ಲಿ ವಾಮನದೇವರ ಮೂರುಹೆಜ್ಜೆ ಬೇಡಿದ್ದರ ರಹಸ್ಯಾರ್ಥವನ್ನು ವಿಶೇಷಾಂಶದಲ್ಲಿ ತಿಳಿಸಿದ್ದಾರೆ. ಹನ್ನೊಂದನೇ ಸ್ಕಂಧದಲ್ಲಿ ಪ್ರಮಾಣವಾಕ್ಯಗಳನ್ನು ವಿವರಿಸುವಾಗ ಶ್ರೀನಿವಾಸತೀರ್ಥರ ಟಿಪ್ಪಣಿಯ ವಿಶೇಶಾಂಶಗಳು, ಸತ್ಯಧರ್ಮತೀರ್ಥರ ಟಿಪ್ಪಣಿಯ ವಿಸ್ತಾರವಾಗಿ ಹೇಳಿರುವುದು ಅತ್ಯಂತ ಗಮನೀಯವಾದ ಅಂಶ. ಇಷ್ಟೆಲ್ಲ ವಿಶೇಷಾಂಶಗಳನ್ನು ಬರೆದಿದ್ದರೂ ಸಹ ಇವೆಲ್ಲವೂ ತಮ್ಮೊಳಗೆ ನಿಂತು ಬರೆಸಿದ ತತ್ವಾಭಿಮಾನಿದೇವತೆಗಳ ಅನುಗ್ರಹ ಎಂದು ಹೇಳಿಕೊಂಡಿರುವುದು ಇವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ.

ಈ ಗ್ರಂಥವನ್ನು ಸಂಪಾದನೆ ಮಾಡಲು ಹರಿ-ಗುರುಗಳ ಅನುಗ್ರಹವೇ ಬಲ. ಇದಕ್ಕೆ ಬೆನ್ನೆಲುಬಾದ ನನ್ನ ವಿದ್ಯಾಗುರುಗಳಾದ ಶ್ರೀವಿಶ್ವೇಶತೀರ್ಥಶ್ರೀಪಾದರಿಗೆ ಸಾಷ್ಟಾಂಗಪ್ರಣಾಮಗಳು. ಹಾಗೂ ನನಗೆ ಮೂರು ವೇದಗಳನ್ನು ಉಪದೇಶಿಸಿ ಅನುಗ್ರಹಿಸಿದ ಶ್ರೀವಿಶ್ವಪ್ರಸನ್ನತೀರ್ಥರಿಗೆ ಸಾಷ್ಟಾಂಗಪ್ರಣಾಮಗಳು. ಹಾಗೂ ನನಗೆ ಭಾಗವತಗ್ರಂಥವನ್ನು ವಿಜಯಧ್ವಜೀಯಟೀಕಾ ಸಹಿತ ಪಾಠ ಮಾಡಿದ ಶ್ರೀವಿಶ್ವನಂದನತೀರ್ಥರಿಗೆ ಸಾಷ್ಟಾಂಗಪ್ರಣಾಮಗಳು.

ಈ ಗ್ರಂಥವನ್ನು ದೆಹಲಿಯ ವೇದವೇದಾಂತ ಅಧ್ಯಯನಶೋಧಸಂಸ್ಥಾನವು ಓದುಗರ ದೃಷ್ಟಿಯಿಂದ ಅನೇಕ ಭಾಗಗಳಲ್ಲಿ ಪ್ರಕಾಶನ ಪಡಿಸುತ್ತಿದೆ. ಇದನ್ನು ಮುದ್ರಣ ಮಾಡಲು ಅವಕಾಶ ನೀಡಿದ ಸಂಸ್ಥೆಯ ನಿರ್ದೇಶಕರು, ಆಡಳಿತ ಮಂಡಲಿ, ಮುದ್ರಕರು ಎಲ್ಲರಿಗೂ ಧನ್ಯವಾದಗಳು.

श्रीमन्मध्वमहाचार्यपदपद्मैकसद्मनाम्
अणूनां महतां चापि भवतात् करुणा मयि ।।

तवैवेदं मने वस्तु तुभ्यमेव समर्पये ।
श्रद्धया परयाविष्ठः प्रणिपातपुरस्सरम् ।।

प्रसरीसर्तु लोकेस्मिन् पावनी ते सरस्वती ।
प्राकृतोपि च तं विद्यादेतदर्था कृतिर्मम ।।

# श्रीवेद्व्यासप्रणीतं

# श्रीमद्भागवतम्

## द्वितीयस्कन्धः

### अथ प्रथमोऽध्यायः

**शुक उवाच**

वरीयानेष ते प्रश्नः कृतो लोकहितं नृप।
आत्मवित्सम्मतः पुंसां श्रोतव्यादिषु यः परः ॥ १ ॥

श्रोतव्यानीह राजेन्द्र नृणां सन्ति सहस्रशः।
अपश्यतामात्मतत्वं गृहेषु गृहमेधिनाम् ॥ २ ॥

निद्रया ह्रियते नक्तं व्यवायेन नवं वयः।
दिवा चार्थेहया राजन्कुटुम्बभरणेन वा ॥ ३ ॥

देहापत्यकलत्रादिष्वात्मदैन्येष्वसत्स्वपि।
तेषु प्रसक्तो निधनं पश्यन्नपि न पश्यति ॥ ४ ॥

तस्माद्भारत सर्वात्मा भगवान् हरिरीश्वरः।
श्रोतव्यः कीर्तितव्यश्च स्मर्तव्यश्चेच्छताऽभयम् ॥ ५ ॥

एतावान्साङ्ख्ययोगाभ्यां स्वधर्मपरिनिष्ठया।
जन्मलाभः परः पुंसामन्ते नारायणस्मृतिः ॥ ६ ॥

प्रायेण मुनयो राजन्निवृत्ता विधिनिषेधतः।
नैर्गुण्यस्था रमन्ते स्म गुणानुकथने हरेः ॥ ७ ॥

इदं भागवतं नाम पुराणं ब्रह्मसम्मितम्।
अधीतवान् द्वापरादौ पितुर्द्वैपायनादहम् ॥ ८ ॥

परिनिष्ठितोऽपि नैर्गुण्य उत्तमश्लोकलीलया।

## अथ प्रथमोऽध्यायः

गृहीतचेता राजर्ष आख्यानं यदधीतवान् ॥ ९ ॥

तदहं तेऽभिधास्यामि महापूरुषिको भवान् ।
यत्र श्रद्दधतामाशु स्यान्मुकुन्दे मतिः सती ॥ १० ॥

एतन्निर्विद्यमानानामिच्छतामकुतोभयम् ।
योगिनां नृप निर्णीतं हरेर्नामानुकीर्तनम् ॥ ११ ॥

किं प्रमत्तस्य बहुभिः परोक्षैर्हायनैरिह ।
परं मुहूर्तं विदितं घटते श्रेयसे यतः ॥ १२ ॥

खवाङ्गो नाम राजर्षिः ज्ञात्वेयत्तामिहायुषः ।
मुहूर्तात्सङ्गमुत्सृज्य गतवानभयं हरिम् ॥ १३ ॥

तवाप्येतर्हि कौरव्य सप्ताहं जीवितावधिः ।
उपकल्पय तत्सर्वं यत्तावत्साम्परायिकम् ॥ १४ ॥

अन्तकाले तु पुरुष आगते गतसाध्वसः ।
छिन्द्यादसङ्गशस्त्रेण स्पृहां देहेऽनु ये च तम् ॥ १५ ॥

गृहात्प्रव्रजितो धीरः पुण्यतीर्थजलाप्लुतः ।
शुचौ विविक्त आसीनो विधिवत्कल्पितासने ॥ १६ ॥

अभ्यसेन्मनसा शुद्धं त्रिवृद्ब्रह्माक्षरं परम् ।
मनो यच्छेज्जितश्वासो ब्रह्मबीजमनुस्मरन् ॥ १७ ॥

नियच्छेद्विषयेभ्योऽक्षान्मनसा बुद्धिसारथिः ।
मनः कर्मभिराक्षिप्तं शुभार्थे धारयेद्धिया ॥ १८ ॥

तत्रैकावयवं ध्यायेदव्युच्छिन्नेन चेतसा ।
मनो निर्विषयं युंक्त्वा ततः किञ्चिन्न संस्मरेत् ।
पदं तत्परमं विष्णोः मनो यत्र प्रसीदति ॥ १९ ॥

रजस्तमोभ्यामाक्षिप्तं विमूढं मन आत्मनः ।
यच्छेद्धारणया धीरो हन्ति या तत्कृतं मलम् ॥ २० ॥

## अथ प्रथमोऽध्यायः

यस्यां सन्धार्यमाणायां योगिनो भक्तिलक्षणः ।
आशु सम्पद्यते योग आश्रयं भद्रमीक्षतः ॥ २१ ॥

राजोवाचयथा सन्धार्यते ब्रह्मन् धारणा यत्र संमता ।
यादृशी वा हरेदाशु पुरुषस्य मनो मलम् ॥ २२ ॥

**श्रीशुक उवाच**

जितासनो जितश्वासो जितसङ्गो जितेन्द्रियः ।
स्थूले भगवतो रूपे मनः सन्धारयेद्धिया ॥ २३ ॥

विशेषस्तस्य देहोऽयं स्थविष्ठश्च स्थवीयसाम् ।
यत्रेदं दृश्यते विश्वं भूतं भव्यं भवच्च यत् ॥ २४ ॥

आण्डकोशे शरीरेऽस्मिन् सप्तावरणसंयुते ।
वैराजः पुरुषो योऽसौ भगवान् धारणाश्रयः ॥ २५ ॥

पातालमेतस्य हि पादमूलं पठन्ति पार्ष्णिप्रपदे रसातलम् ।
महातलं विश्वसृजस्सुगुल्फौ तलातलं वै पुरुषस्य जङ्घे ॥ २६ ॥

द्वे जानुनी सुतलं विश्वमूर्तेरूरुद्वयं वितलञ्चातलञ्च ।
महीतलं तज्जघनं महीपते नभस्तलं नाभिसरो गृणन्ति ॥ २७ ॥

ऊरुस्थलं ज्योतिरनीकमस्य ग्रीवा महर्वदनं वै जनोऽस्य ।
तपो रराटिं विदुरादिपुंसः सत्यं तु शीर्षाणि सहस्रशीर्ष्णः ॥ २८ ॥

इन्द्रादयो बाहव आहुरस्य कर्णौ दिशः श्रोत्रममुष्य शब्दः ।
नासत्यदस्रौ परमस्य नासे घ्राणञ्च गन्धो मुखमग्निरिद्धः ॥ २९ ॥

द्यौरक्षिणी चक्षुरभूत्पतङ्गः पक्ष्माणि विष्णोरहनी उभे च ।
तद्भ्रूविजृम्भः परमेष्ठिधिष्ण्यमापोऽस्य तालू रस एव जिह्वा ॥ ३० ॥

छन्दांस्यनन्तस्य गिरो गृणन्ति दंष्ट्रार्यमेन्दूडुगणा द्विजानि ।
हासो जनोन्मादकरी च माया दुरन्तसर्गो यदपाङ्गमोक्षः ॥ ३१ ॥

व्रीडोत्तरोष्ठोऽधर एव लोभो धर्मः स्तनोऽधर्मपथश्च पृष्ठः ।
कस्तस्य मेढ्रं वृषणौ च मित्रः कुक्षिः समुद्रा गिरयोऽस्थिसङ्घाः ॥ ३२ ॥

नद्योऽस्य नाड्योऽथ तनूरुहाणि महीरुहा विश्वतनोर्नृपेन्द्र ।
अन्नञ्च वीर्यं श्वसितं मातरिश्वा गतिर्वयः कर्म गुणप्रवाहः ॥ ३३ ॥

ईशस्य केशान्विदुरम्बुवाहान् वासस्तु सन्ध्ये कुरुवर्य भूम्नः ।
अव्यक्तमाहुर्हृदयं मनस्तु स चन्द्रमाः सर्वविकारकोशः ॥ ३४ ॥

विज्ञानशक्तिं मतिमामनन्ति सर्वात्मनोऽन्तः करणं गिरित्रः ।
अश्वाश्वतर्युष्ट्रगजा नखानि सर्वे मृगाः पशवः श्रोणिदेशे ॥ ३५ ॥

वचांसि तद्व्याहरणं विचित्रं मनुर्मनीषा मनुजो निवासः ।
गन्धर्वविद्याधरचारणाप्सरः स्वरस्मृतिर्ह्यसुरानीकवीर्यः ॥ ३६ ॥

ब्रह्माननः क्षत्रभुजो महात्मा विडूरुरङ्घ्रिश्रितकृष्णवर्णः ।
स्वाहास्वधावीर्यगुणोपपन्नो हव्यात्मकः कर्मवितानयोगः ॥ ३७ ॥

इयानसावीश्वरविग्रहस्य यः सन्निवेशः कथितो मया ते ।
सन्धार्यतेऽस्मिन् वपुषि स्थविष्ठे मनः स्वबुध्या न यतोऽस्ति किञ्चित् ॥ ३८ ॥

**॥ इति श्रीमद्भागवते (द्वितीयस्कन्धे(*2) प्रथमोऽध्यायः ॥**

# ॥ ಶ್ರೀಮದ್ಭಾಗವತೇ ದ್ವಿತೀಯ ಸ್ಕಂಧಃ ॥

## ॥ ಅಥ ಪ್ರಥಮೋಧ್ಯಾಯಃ ॥

ಶ್ರೀ ವಿಜಯಧ್ವಜೀಯ ವ್ಯಾಖ್ಯಾನದಂತೆ ಅಭಿಪ್ರಾಯವು ನಿರೂಪಿಸಲ್ಪಡುತ್ತೆ.ಶ್ರೀಶುಕರು ಪರೀಕ್ಷಿದ್ರಾಜನನ್ನು ಕುರಿತು, ಎಲೈ ಪರೀಕ್ಷಿದ್ರಾಜನೇ, ನೀನು ಯಾರ ಚರಿತ್ರೆಯು ಕೇಳಲರ್ಹವಾದದ್ದು? ಇವೇ ಮುಂತಾದ ಪ್ರಶ್ನೆಗಳಿಂದ ಲೋಕೋದ್ಧಾರಕಗಳಾದ ಭಗವನ್ಮಹಿಮೆಗಳನ್ನು ಕೇಳಿದ್ದು ಸ್ತೋತ್ರಾರ್ಹಗಳಾಗಿವೆ.

ಲೋಕದಲ್ಲಿ ಗೃಹಸ್ಥಾಶ್ರಮವನ್ನು ಕೈಕೊಂಡು, ಆ ಆಶ್ರಮ ಧರ್ಮವಾದ ಪಂಚ ಮಹಾಯಜ್ಞಗಳನ್ನು ಆಚರಿಸದೆ, ಜ್ಞಾನ ಸಂಪಾದಿಸಿ ಬ್ರಹ್ಮಾದಿ ತೃಣಪರ್ಯಂತ ತಾರತಮ್ಯವನ್ನೂ, ರಮಾದೇವಿಯರಿಂದ ಮನಗಾಣದ ಮಹಾಮಹಿಮೆಯುಳ್ಳ ಶ್ರೀಮನ್ನಾರಾಯಣನ ಸರ್ವೋತ್ತಮತ್ವವನ್ನೂ ತಿಳಿಯಲೂ

ಅಪೇಕ್ಷಿಸದೆ, ಕೇವಲ ಗೃಹಕುಟುಂಬಾದಿಗಳಿಂದ ಕೂಡಿ ಉದರಪೋಷಣೆ ಮಾತ್ರ ಮಾಡುವ ಜನರು ದೇವರ ಮಹಾತ್ಮೆಗಳನ್ನು ಹೇಗೆ ತಾನೇ ತಿಳಿದಾರು? ಅಂಥವರು ರಾತ್ರಿಯನ್ನು ನಿದ್ರೆ, ಸ್ತ್ರೀಸಂಭೋಗಾದಿಗಳಲ್ಲಿ ಕಾಲ ಕಳೆಯುವರು. ಹಗಲನ್ನು ಹೆಂಡತಿ ಮಕ್ಕಳನ್ನು ಸಾಕುವುದಕ್ಕಾಗಿ ದ್ರವ್ಯಾರ್ಜನೆಗಾಗಿ ದುಡಿಯುವುದರಲ್ಲಿಯೇ ಕಳೆಯುವರು. ಅಂತಹವರು ದೀನರಾಗಿಯೂ, ಮಲಿನರಾಗಿಯೂ ಇದ್ದು ಸನ್ನಿಹಿತವಾದ ನಾಶವನ್ನು, ಅಂದರೆ ಈಗಲೋ ಆಗಲೋ ಪ್ರಾಪ್ತವಾಗುವ ಮೃತ್ಯುವನ್ನು ತಿಳಿದೂ ತಿಳಿಯದಂತೆ ಇರುವರು.

## ಸಂಸಾರ ಮಮತೆ ಬಿಟ್ಟು ಹರಿಕಥಾಶ್ರವಣ ಮಾಡಿ

ಇಂತಹ ಪಾಮರರನ್ನು ಪವಿತ್ರಮಾಡುವವನೂ, ಸರ್ವಾಪತ್ತುಗಳನ್ನೂ ಪರಿಹರಿಸಿ ಸಂರಕ್ಷಿಸುವವನೂ, ಶ್ರೀಹರಿಯೊಬ್ಬನೇ ಆದುದರಿಂದ, ಜೀವರು ಅಸಾರವಾದ ಸಂಸಾರ ನಿರ್ವಹಣೆಯೇ ಮುಖ್ಯವೆಂಬ ಅಜ್ಞಾನವನ್ನು ಬಿಟ್ಟು, ಶ್ರೀಪರಮಾತ್ಮನ ಮಂಗಳ ಚರಿತ್ರೆಗಳನ್ನು ಕೇಳಿ, ಸ್ಮರಿಸಿ, ಸರ್ವಭಯ ಪರಿಹಾರವನ್ನು ಹೊಂದತಕ್ಕದ್ದು. ಪರಮಾತ್ಮನ ಚರಿತ್ರೆಗಳನ್ನು ಕೇಳುವುದರಿಂದ ಜ್ಞಾನವೂ, ಮನನದಿಂದ ಸಮಸ್ತ ದುಷ್ಟಸಂಶಯಗಳ ಪರಿಹಾರವೂ, ಧ್ಯಾನದಿಂದ ಭಗವದ್ದರ್ಶನವೂ ಉಂಟಾಗುತ್ತವೆ. ಇದನ್ನೇ ಸರ್ವವೇದ, ಇತಿಹಾಸ, ಪುರಾಣಗಳ ಉಪದೇಶವೆಂದು ತಿಳಿಯತಕ್ಕದ್ದು. ಇದರಿಂದ ಸಾಂಖ್ಯಯೋಗವೆಂಬ ಭಗವದ್ಭಕ್ತಿ ಜ್ಞಾನಯೋಗವು ಉಂಟಾಗಿ ದೇಹತ್ಯಾಗ ಕಾಲದಲ್ಲಿ ಪರಮಾತ್ಮನ ಸ್ಮರಣೆಯುಂಟಾಗುತ್ತದೆ. ಇದೇ ಜೀವಿಸಿದ್ದಕ್ಕೆ ಫಲ.

ಮುನಿಗಳು ಪರಮಾತ್ಮನನ್ನು ಸತ್ವಾದಿಪ್ರಾಕೃತಗುಣರಹಿತನಾದುದರಿಂದಲೂ, ಸದ್ಗುಣಪೂರ್ಣನಾದುದರಿಂದಲೂ, ನಿರ್ಗುಣನೆಂದುಪಾಸಿಸಿ, ಸಕಲ ಸುಖದುಃಖಾದಿಗಳೂ, ವಿಧಿನಿಷೇಧಾದಿ ಕಾರ್ಯಗಳೂ ಶ್ರಿಪರಮಾತ್ಮಾಧೀನ ವಾದವುಗಳೆಂದು ತಿಳಿದು ಉಪಾಸಿಸುತ್ತಾ ದೇವರ ಗುಣಗಾನ, ಧ್ಯಾನ, ಸೇವಾದಿಗಳಲ್ಲಿಯೇ ನಿರತರಾಗಿರುತ್ತಾರೆ. ನಾನೂ ನಿರ್ಗುಣೋಪಾಸಕನಾದಾಗ್ಯೂ, ಅಂದರೆ ಪ್ರಾಕೃತ ಸತ್ವಾದಿ ಗುಣಗಳಿಂದ ನಿರ್ಲೇಪ ಮನೋವೃತ್ತಿ ವುಳ್ಳವನಾದಾಗ್ಯೂ, ಬ್ರಹ್ಮದೇವರಿಂದ ಮೊದಲು ಉಪದೇಶಮಾಡಲ್ಪಟ್ಟ ಭಾಗವತವೆಂಬ ಪುರಾಣವನ್ನು, ಪುಣ್ಯಶ್ಲೋಕನಾದ ನಾರಾಯಣನ ಲೀಲೆಗಳಿಂದ ಅದು ತುಂಬಿರುವುದರಿಂದ ಮೋಹಿತನಾಗಿ, ದ್ವಾಪರ ಯುಗದ ಆದಿ ಭಾಗದಲ್ಲಿ ನಮ್ಮ ತಂದೆಗಳಾದ ವೇದವ್ಯಾಸ ದೇವರಿಂದ ಅಧ್ಯಯನ ಮಾಡಿದೆನು. ಅದನ್ನೇ ನಿನಗೆ ಈಗ ಹೇಳುತ್ತೇನೆ. ಶ್ರದ್ಧೆಯಿಂದ ಕೇಳಿದರೆ ದೇವರಲ್ಲಿ ಜಾಗ್ರತೆಯಾಗಿ ಸನ್ಮತಿಯು ಉಂಟಾಗುತ್ತದೆ.

## अथ प्रथमोऽध्यायः

## ಸಾಧಕನಿಗೆ ಅಲ್ಪಕಾಲವೂ ಸಾಕು

ಭಾಗವತವನ್ನು ತಿಳಿಯಲಪೇಕ್ಷಿಸುವವರಿಗೆ ಎಲ್ಲಿಯೂ ಯಾವ ಭಯವೂ ಉಂಟಾಗುವುದಿಲ್ಲ. ಯೋಗಿಗಳು ಭಗವನ್ನಾಮ ಸಂಕೀರ್ತನೆಯನ್ನೇ ಪರಮಸಾಧನವನ್ನಾಗಿ ಹೇಳುತ್ತಾರೆ. ಸಾಧನಸಂಪತ್ತಿಯುಳ್ಳವರಿಗೆ ಒಂದು ಮುಹೂರ್ತಕಾಲ ಆಯಸ್ಸಿದ್ದರೂ, ಸಾಕು-ಅಷ್ಟರಲ್ಲೇ ಸರ್ವಸಂಗ ಪರಿತ್ಯಾಗ ಮಾಡಿ ಏಕಾಂತಧ್ಯಾನದಿಂದ  ಹಿಂದೆ ಖಟ್ವಾಂಗರಾಜನು ಹೇಗೆ ಒಂದು ಘಂಟೆಯೇ ತನಗೆ ಆಯಸ್ಸೆಂದು ತಿಳಿದು ಅಷ್ಟರಲ್ಲೇ ಪರಮಾತ್ಮನಲ್ಲಿ ಭಕ್ತಿಯೋಗ ಮಾಡಿ ಮೋಕ್ಷ ಪಡೆದನೋ, ಅದರಂತೆಯೇ ಪಡೆಯಬಹುದು.

ಎಲೈ! ಪರೀಕ್ಷಿದ್ರಾಜನೆ ನಿನಗೆ ಇನ್ನೂ ಏಳು ದಿನಗಳ ಜೀವಿತ ಕಾಲಾವಧಿ ಇರುತ್ತದೆ. ಅಷ್ಟರಲ್ಲಿ, ಮರಣಕಾಲವು ಪ್ರಾಪ್ತವಾಗುತ್ತಿರಲಾಗಿ, ಸಾಧಕ ಜೀವರು ಹೇಗೆ ಉಪಾಸನೆ ಮಾಡಬೇಕೋ  ನಿನಗೆ ಉಪದೇಶಿಸುತ್ತೇನೆ ಅದನ್ನು ತಿಳಿದು ನೀನೂ ಆಚರಿಸಿ ನಿನ್ನ ಜನ್ಮಸಾರ್ಥಕ್ಯವನ್ನು ಮಾಡಿಕೊ. ಬಾಲ್ಯದಲ್ಲಿಯೇ ಶ್ರೀಕೃಷ್ಣನ ಅನುಗ್ರಹ ಪಡೆದಿರುವುದರಿಂದ ಮಹಾಪುರುಷನಾಗಿದ್ದೀಯೆ, ಅಂತಹ ನೀನು ಪುರುಷಾರ್ಥವನ್ನು ಹೊಂದಿಯೇ ಹೊಂದುತ್ತೀಯೆ  ಎಂದರು. ಆವಾಗ ಪರೀಕ್ಷಿದ್ರಾಜನು, ಎಲೈ! ಶುಕಮಹರ್ಷಿಗಳೇ! ಮನಸ್ಸಿನ ಸಕಲ ಕಲ್ಮಷಗಳೂ ನಿವಾರಣೆಯಾಗಿ, ಶುದ್ಧಾಂತಃಕರಣದಿಂದ, ಶ್ರೀಪರಮಾತ್ಮನ ಧಾರಣಾ ಯೋಗವು ಹೇಗೆ ಪ್ರಾಪ್ತವಾಗುತ್ತೆಂಬುದನ್ನೂ, ಆ ಧಾರಣಾಯೋಗ ಸ್ವರೂಪವನ್ನೂ ತಿಳಿಸಬೇಕೆಂದು ಪ್ರಾರ್ಥಿಸಿದನು.

## ವಿರಾಡ್ರೂಪ ಚಿಂತನೆಯ ಕ್ರಮ

ಅದಕ್ಕೆ ಶುಕಋಷಿಗಳು, ಎಲೈ! ಪರೀಕ್ಷಿದ್ರಾಜನೇ! ಮೊದಲು ಆಸನ ಜಯ, ಶ್ವಾಸನಿರೋಧನ ಶಕ್ತಿ ಎಂಬ ಶ್ವಾಸಜಯ, ಅಹಮ್ಮಮತಾದಿಗಳೆಂಬ ಸ್ನೇಹರೂಪ ಸಂಗಜಯ, ಇಂದ್ರಿಯಜಯಗಳನ್ನು ಅಭ್ಯಾಸದಿಂದ ಹೊಂದಿ, ಬುದ್ಧಿಯನ್ನು ಸ್ಥಿರವಾಗಿ ಮಾಡಿಕೊಂಡು, ಪರಮಾತ್ಮನ ಸ್ಥೂಲರೂಪ ಚಿಂತನೆಯನ್ನು ಈ ರೀತಿ ಮಾಡಬೇಕು.

ಹಿಂದೆ, ಇಂದು, ಮುಂದೆ ಅಂದರೆ ತ್ರಿಕಾಲಗಳಲ್ಲಿಯೂ ಯಾವ ಜಡಚೇತನ, ಚತುರ್ದಶ ಲೋಕಾತ್ಮಕ, ಪಂಚಭೂತಾತ್ಮಕ ಈ ಪ್ರಪಂಚವು ಹೊರಗಿನ ಸಪ್ತಾವರಣಗಳೂ ಸೇರಿ, ಬ್ರಹ್ಮಾಂಡವೆನಿಸುವುದೋ, ಅದು ಪುರುಷನಾಮಕ ಶ್ರೀಪರಮಾತ್ಮನಿಗೆ ಸ್ಥೂಲದೇಹದಂತೆ, ಪ್ರತಿಮಾ ಎಂದರೆ ವಾಸಸ್ಥಾನವಾಗಿರುತ್ತದೆ. ಅಂದರೆ ದೇವರು ಅಪರಿಚ್ಛಿನ್ನನಾಗೇ ಸರ್ವದರಲ್ಲಿಯೂ ಆ

## अथ प्रथमोऽध्यायः

ಆಕಾರಗಳಿಂದ ಪ್ರವೇಶಿಸಿ ನಿಯಾಮಕನಾಗಿ ಅವುಗಳನ್ನು ಧರಿಸುತ್ತಾನೆ. ಈ ಪುರುಷನಿಗೆ ವೈರಾಜಪುರುಶ, ವಿರಾಟ್ಪು ರುಷನೆಂದು ಹೆಸರು. ಈ ವಿರಾಡ್ರೂಪವೇ ಮೊದಲು ಧ್ಯಾನಿಸಿ ಧರಿಸಬೇಕಾದ್ದು.

ಈ ವಿರಾಟ್ಪುರುಷನ ಪಾದವನ್ನಾಶ್ರಯಿಸಿ ಪಾದದ ಕೆಳಗೆ ಪಾತಾಳಲೋಕವಿದೆ. ಹೆಜ್ಜೆಯ ಹಿಂಭಾಗದಲ್ಲಿ ರಸಾತಳವೂ, ಮುಂಭಾಗದಲ್ಲಿ ಮಹಾತಳವೂ, ಮಳಕಾಲಿನಲ್ಲಿ ತಳಾತಳವೂ, ಮಂಡಿಯಲ್ಲಿ ಸುತಳಲೋಕವೂ, ತೊಡೆಗಳ ಭಾಗದಲ್ಲಿ ವಿತಳ, ಅತಳಲೋಕಗಳು, ಸೊಂಟಭಾಗದಲ್ಲಿ ಮಹೀತಲವೂ ಅಂದರೆ ಭೂಲೋಕವೂ, ನಾಭಿಯ ಹತ್ತಿರ ಭುವರ್ಲೋಕವೆಂಬ ನಭಸ್ತಳವೂ, ಎದೆಯ ಸಮೀಪದಲ್ಲಿ ಜ್ಯೋತಿರ್ಲೋಕವಾದ ಸ್ವರ್ಗಲೋಕವೂ, ಕಂಠಪ್ರದೇಶದಲ್ಲಿ ಮಹರ್ಲೋಕವೂ, ಮುಖಪ್ರದೇಶದಲ್ಲಿ ಜನೋಲೋಕವೂ, ಹಣೆಯ ಸಮೀಪದಲ್ಲಿ ತಪೋಲೋಕವೂ, ಸಹಸ್ರಶಿರೋಭಾಗಗಳಲ್ಲಿ ಸತ್ಯಲೋಕವೂ ಧರಿಸಲ್ಪಟ್ಟು, ಆಯಾ ಅವಯವಗಳಿಂದ ಅತ್ಯಂತ ಭಿನ್ನಗಳಾಗಿರುತ್ತವೆ ಎಂದು ಧ್ಯಾನಿಸಬೇಕು. ಪ್ರತಿಯೊಂದು ಲೋಕವೂ ಪರಮಾತ್ಮನ ಆಯಾಯಾ ಅವಯವಗಳಿಂದ ಭಿನ್ನವೂ, ಜನ್ಯವೂ ಮತ್ತು ಆಶ್ರಿತವೂ ಆಗಿದೆಯೆಂದು ಧ್ಯಾನಿಸಬೇಕು.

ನಂತರ ಅಂಗಾಶ್ರಿತದೇವತೆಗಳ ಚಿಂತನಾಪ್ರಕಾರಗಳನ್ನು ನಿರೂಪಿಸುತ್ತಾರೆ:

ಇಂದ್ರಾದಿ ದೇವತೆಗಳು ವಿರಾಟ್ಪು ರುಷನ ಕೈಗಳೆಂದೂ, ದಿಗ್ದೇವತೆಗಳು ಕಿವಿಗಳೆಂದೂ, ನಾಸತ್ಯದಸ್ರರೆಂಬ ಅಶ್ವಿನೀ ದೇವತೆಗಳು ಮೂಗೆಂದೂ, ಗಂಧಕ್ಕಾಶ್ರಯವಾದ ಪೃಥ್ವಿಯು ಘ್ರಾಣವೆಂದೂ, ಮುಖವು ಅಗ್ನಿ ಎಂದೂ, ದ್ಯುಲೋಕವೂ ಸೂರ್ಯನೂ ಕಣ್ಣುಗಳೆಂದೂ, ಮನುಷ್ಯರ, ದೇವತೆಗಳ ದಿನಗಳೂ ದೇವರ ಕಣ್ಣಿನರೆಪ್ಪೆಗಳು, ಹುಬ್ಬು ಚಲಿಸುವ ಮಾತ್ರ ವ್ಯಾಪಾರವೇ ಬ್ರಹ್ಮಾದಿಗಳಿಗೆ ಅವರ ಪದವಿಗಳನ್ನು ಕೊಡತಕ್ಕದ್ದು;

ಕಾಲುಪ್ರದೇಶವೇ ಸರ್ವಉದಕಗಳು, ನಾಲಿಗೆಯು ಮಧುರಾದಿ ರಸಗಳು, ಗಾಯಿತ್ರ್ಯಾದಿ ಛಂದಸ್ಸುಗಳು, ಸಾಂಗವೇದಗಳೂ ಮಾತುಗಳು. ಕೋರೆಹಲ್ಲುಗಳು ಚಂದ್ರ, ನಕ್ಷತ್ರಗಳು, ಮಂದಹಾಸವು ಜನಗಳನ್ನು ಉನ್ಮಾದಗೊಳಿಸುವ ಮಾಯೆಯು ಪ್ರವಾಹರೂಪವಾದ ಜಗತ್ಸೃಷ್ಟ್ಯಾದಿರೂಪವಾದದ್ದು, ಕೃಪಾನೋಟವೇ ಮೋಕ್ಷ, ಲಜ್ಜೆಯು ಮೇಲ್ತುಟಿ. ಕೆಳಗಿನ ತುಟಿಯು ಲೋಭ, ಸ್ತನಗಳು ಧರ್ಮಗಳು. ಪೃಷ್ಠಭಾಗವು ಅಧರ್ಮ ಮೇಢ್ರದಲ್ಲಿ ಪ್ರಜಾಪತಿ. ಬೀಜಗಳಲ್ಲಿ, ವೃಷಣಗಳಲ್ಲಿ ಮಿತ್ರನಾಮಕ ಸೂರ್ಯ. ಹೊಟ್ಟೆಯಲ್ಲಿ ಸಮುದ್ರಗಳು. ಮೂಳೆಗಳಲ್ಲಿ ಪರ್ವತಗಳು, ನಾಡಿಗಳೇ ನದಿಗಳು, ರೋಮಗಳೇ ಮಹಾವೃಕ್ಷಗಳು.

ವೀರ್ಯದಿಂದ ಅನ್ನ. ಶ್ವಾಸದಿಂದ ಮಾತರಿಶ್ವನಾಮಕ ಪ್ರಧಾನ ಪ್ರಾಣದೇವರು. ಗಮನದಿಂದ ಆಯಸ್ಸು, ವರ್ಷಗಳು. ಕರ್ಮದಿಂದ ಗುಣಸಮೂಹಗಳು. ತಲೆಯ ಕೂದಲಿಂದ ಮೇಘಗಳು. ಬಟ್ಟೆಗಳೇ ಸಂಧ್ಯೆಗಳು. ಹೃದಯವೇ ಅವ್ಯಕ್ತತತ್ವ. ಮನಸ್ಸೇ ಸರ್ವ ವಿಕಾರಗಳಿಗೆ ಕಾರಣಗಳಾದ, ಪ್ರಕೃತ್ಯಾತ್ಮಕ ಷೋಡಶ ಕಳಾಭಿಮಾನಿಯಾದ ಚಂದ್ರನು. ಬುದ್ಧಿಯೇ ವಿಜ್ಞಾನಶಕ್ತಿ. ಸರ್ವಾತ್ಮಕನಾದ ಪರಮಾತ್ಮನ ಅಂತಃಕರಣವೇ ರುದ್ರದೇವರು.

ಶ್ರೋಣಿದೇಶವು ಕುದುರೆಗಳು ಮತ್ತು ಮೃಗಗಳು. ಉಗುರುಗಳು ಒಂಟೆ ಆನೆಗಳು. ಸಕಲ ಲೌಕಿಕವೈದಿಕ ಶಬ್ದಗಳೂ ಪರಮಾತ್ಮನ ಮಾತುಗಳು. ವಾಯುದೇವರು ಇಚ್ಛಾಸ್ವರೂಪರು. ಮನುಷ್ಯರು, ಗಂಧರ್ವರು, ವಿದ್ಯಾಧರರು, ಚಾರಣ ಅಪ್ಸರರು, ಗಾನಾದಿ ವಿದ್ಯೆಗಳೂ, ಪರಮಾತ್ಮವಿಷಯಕ ಜ್ಞಾನವೂ, ಮನನ ಧ್ಯಾನ ರೂಪ ಸ್ಮರಣೆಗಳೂ, ದೇವತೆಗಳೂ, ಅಸುರರೂ ವಾಸಕ್ಕೆ ಯೋಗ್ಯರಾದ ಪರಮಾತ್ಮನ ಅಧಿಷ್ಠಾನಗಳು.

ಈ ಮಹಾಪುರುಷನ ಮುಖದಿಂದ ಬ್ರಾಹ್ಮಣರೂ, ಭುಜಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ, ಪಾದಗಳಿಂದ ಕಪ್ಪುವರ್ಣರಾದ ಶೂದ್ರರೂ ಉತ್ಪನ್ನರಾಗಿ ತದ್ಭಿನ್ನ, ತತಕ್ತಾಪ್ರದ, ತನ್ನಾಮಕ, ತದಾಶ್ರಯರಾಗಿರುತ್ತಾರೆಂದು ಚಿಂತಿಸಬೇಕು. ದೇವ ಪಿತೃಗಳನ್ನುದ್ದೇಶಿಸಿ ಮಾಡುವ ಹವ್ಯ ಕವ್ಯಗಳೆಂಬ ಹೋಮಗಳನ್ನು ಸ್ವೀಕರಿಸಿ, ಲೋಕವನ್ನು ವೀರ್ಯವತ್ತಾಗಿ ಮಾಡುವ ಸರ್ವ ಯಜ್ಞಮಯನಾದ ವಿರಾಟ್ಪುರುಷನು, ಜೀವರ ಹೃತ್ಕಮಲದಲ್ಲಿ ವಾಸಿಸುವನೆಂದು ಧ್ಯಾನಿಸತಕ್ಕದ್ದು. ಈ ರೀತಿ ಚಿಂತಿಸಿ ಧ್ಯಾನಿಸುವುದಕ್ಕಿಂತ ಶ್ರೇಯಸ್ಕರವಾದದ್ದು ಏನೂ ಇರುವುದಿಲ್ಲ.

**ಇತಿ ಶ್ರೀಮದ್ಭಾಗವತ ದ್ವಿತೀಯಸ್ಕಂಧದ ಪ್ರಥಮಾಧ್ಯಾಯ ಮುಗಿಯಿತು॥ ಶ್ರೀಕೃಷ್ಣಾರ್ಪಣಮಸ್ತು ॥**

## अथ प्रथमोऽध्यायः

## ಶ್ರೀಗುರುಭ್ಯೋ ನಮಃ

## ॥ ಶ್ರೀರಾಘವೇಂದ್ರದಾಸವಿರಚಿತ ಭಾಮಿನೀ ಷಟ್ಪದಿರೂಪ, ವಿರಾಡ್ರೂಪ ವರ್ಣನಂ ॥

ಒರೆವೆ ತೋರಿದ ತೆರದಿ ದೇವನ। ಪರಮವಿರಾಡ್ರೂಪದಿರುವನು ।

ನಿರುತಚಿಂತಿಸೆ ಮನದಿ ಭಾವಿಸಿ ಪರಮಮಹಿಮನನೂ ॥ಪ॥

ಸಿರಿಚರಣ ಮೊದಲಾಗಿ ಶಿರಪರಿಯಂತದಲಿ ।

ಇರುತಿಹ ಸರುವ ಅವಯವಗಳಲಿ ಧರಿಸಿಹ ।

ಹರಿಯು ಹದಿನಾಲ್ಕು ಲೋಕಗಳಾ ॥

ಪದತಳದಿ ಪಾತಾಳವನು ಧರಿಸಿಹ ॥

ನದಕೆ ಆಶ್ರಯನಾಗಿ ಪದಮೂಲದಲಿ ।

ಸೃಷ್ಟಿಸಿ ನಿಯಮಿಸುತ ತತ್ಸಂಬಂಧವಿಲ್ಲದಲೇ ॥

ಆದರೊಳಗೆ ವಾಸಿಪರು ವಾಸುಕಿ।ಮೊದಲು ಶಂಖ ಧನಂಜಯಾದಿಗ ।

ಳೆನಿಪ ಸರ್ಪಗಳ ಶಿರದಿ ಸುಪ್ರಭೆ ಮಣಿಯ ಧರಿಸಿರುತ್ತಾ ॥೧॥

ನಿರುತಜಾತಿಸಮೇತರೊಪ್ಪುವ।ರುರುತರದ ಕೋಪಪ್ರಕಾಶರು।

ಮೆರೆವ ವಜ್ರದಕಾಂತಿಯುತ ದೇಹಪ್ರಕಾಶದಲಿ॥

ಹರಿಯನರ್ಚಿಪರರುಣಕಾಂತಿಯ। ವರಸುಕಾಯನ ಚಕ್ರಶಂಖವ ।

ಧರಿಸಿ ಗದೆಪದುಮಗಳ ಕರದಲಿ ಪಿಡಿದಮೂರ್ತಿಯನು ॥೨॥

ರಸತಳವ ಸೃಷ್ಟಿಸಿದುಧರಿಸಿಹ । ಬಿಸಜಪಾದದ ಪೃಷ್ಠಭಾಗದ ।

ಲೆಸೆವರದರೊಳು ಚತುರವರ್ಣದ ಭಕುತಜನರುಗಳು ॥

ಸಹಸಯುಕ್ತರು ಎನಿಪ ದೈತ್ಯರು । ಝಸೆವಡೆದು ಹರಿನಾಮಮಂತ್ರದ ।

ಅಸಮಶೌರ್ಯಕೆ ಬೆಚ್ಚಿ ಅಡಗಿಹರೊಂದು ಬಿಲದೊಳಗೆ ॥೩॥

ರತುನಕಾಂತಿಯ ತೆರದಿ ಹೊಳೆಯುತ। ತತುವದೇವತೆಗಳನು ಕೂಡಿದು।

ಅತುಳಮಹಿಮನು ತಾನೆ ಪೂಜೆಯಗೊಳುವನಿದರೊಳಗೆ॥

## अथ प्रथमोऽध्यायः

ಅತಿಶಯದ ಕರಿ ಉಷ್ಟ್ರ ಅಶ್ವವು ಸಕಲ। ಜಾತಿಯಪ್ರಾಣಿಗಳ ತಾ।
ನತಿಶಯದಿ ಸೃಷ್ಟಿಸಿ ಹನೀರಸತಳದಿ ಹರಿಯೂ ॥೪॥
ಮಹತಳವು ಮುಂಗಾಲನಾಶ್ರಯಿ। ಸಿಹುದು ತದ್ಭಿನ್ನದಲಿ ಇದರೊಳು।
ಬಹುಶಿರದ ಉರಗಗಳು ನಾಯಕಸಹಿತವಿರುತಿಹವೂ ॥
ಮಹದೆನಿಪ ಕ್ರೋಧಕ್ಕೆ ವಶರಾಗಿಹರು ಉರಗಾಳಿಗಳು ಇವರೊಳ ।
ಗಿಹನು ನಾರಾಯಣ ಮಹೋದಧಿಶಯನ ರೂಪದಲಿ ॥೫॥
ತ್ರಿಪುರದಹನದ ನಂತರದಿ ಬಹು। ತಪದಿ ಹರಿಕರುಣವನೆ ಹೊಂದುತ।
ತ್ರಿಪುರವೈರಿಯ ಕರುಣೆಯ ತಾ ಪಡೆದು ಮೋದದಲಿ॥
ನಿಪುಣನೆನಿಸಿದ ಬಡಗಿಮಯ ತಾ। ನಪರಿಮಿತ ಕೌತುಕದಿ ರಚಿಸಿದು।
ಪುರವ ತಳತಳ ಲೋಕದಲಿ ತಾನಿರ್ಪಸುಖದಿಂದಾ ॥೬॥
ಇದಕೆ ಆಶ್ರಯವೆನಿಸುತಿಪ್ಪ ದು। ಅದುಭುತದ ವೈಭವದಿ ಮ।
ಹದೇವನನು ಅರ್ಚಿಸಿ ಮೆಚ್ಚಿ ಸಿದುಮಯಸಹಿತ ದನುಜರು ಮೋದಿಪರು ಇಲ್ಲಿ ॥೭॥
ಸುತಳಲೋಕದಿ ಬಲಿಯು ಮೋದದೊ। ಳತುಳ ಐಶ್ವರ್ಯದಲಿ ಶೋಭಿಪ ।
ರತುನಕಾಂಚನದಿಂದ ರಚಿಸಿದ ಅತಿಶಯದ ಪುರದೀ॥
ಸತತವಾಮನರೂಪದೇವನ। ಅತಿಶಯದ ಭಕುತಿಯಲಿ ಸೇವಿಪ।
ನತಿಥಿಗಳ ಆದರಿಸಿ ಸತ್ಕೀರ್ತಿಯನು ತಾ ಪಡೆದೂ ॥೮॥
ಪರಮಪುಣ್ಯಶ್ಲೋಕನೆನಿಸಿದ। ಅರಸುಬಲಿ ಧನ್ಯನುಕಣಾ ತಾ।
ಹರಿಪದಕೆ ಶಿರವಿತ್ತು ಹರಿಕರುಣವನೆ ತಾ ಪಡೆದಾ॥
ಪರಮಮಹಿಮನು ಎನಿಪ ಈತನು। ಇರುವಸ್ವಜನರುಸಹಿತ ಸುತಳವ।
ಧರಿಸಿಹನು ಹರಿ ತನ್ನ ಜಾನುವಿನೊಳಗೆ ಮೋದದಲಿ ॥೯॥
ಊರುಗಳ ಸರಿಸದಲಿ ಧರಿಸಿಹ। ಚಾರುವಿತಳದ ಲೋಕವನು।
ಸಿರಿಸೇರಿಹುದು ಇದರಲ್ಲಿ ಮಾಯದ ಬಲದಿ ಬಲನೆಂಬಾ॥
ವೀರರಕ್ಕಸನಿಂದ ಪುಟ್ಟಿದ, ಆರುತೊಂಭತ್ತೆನಿಪಮಾಯದ।

## अथ प्रथमोऽध्यायः

ಸಾರವೆನಿಪೀ ಸಿರಿಯ ಮೇರೆಯನರಿವಾರಾರಿನ್ನು ॥೧೦॥
ಬಲನು ಆಕಳಿಸಿದರೆ ಮುಖ।ದಲಿ ಜನಿಸುವರು ನಾರಿಯರು।
ಬಲು ಸೌಂದರ್ಯದಲಿ ಒಪ್ಪು ತ ಪುರುಷರ ಕೂಡೆ ಮನಬಂದ ॥
ಹಲವು ತೆರದಲಿ ಕ್ರೀಡಿಸುತಹ । ಗಲಿರುಳು ಎನ್ನದೆ ಎಲ್ಲಕಾಲ ।
ದಲತಿಶಯದ ಸುಖದಿಂದ ಕಾಲವ ಕಳೆವರೊಗ್ಗಿನಲಿ ॥೧೧॥
ವಿಮಲರೂಪನು ಇಂದು ಮೌಳಿಯು । ಉಮೆಸಹಿತತಾನಿದ್ದು ಮೋದದಿ ।
ಅಮರವೈರಿಗಳಿಂದ ಪರಿವೃತನಾಗಿ ನಿರುತದಲೆ ॥
ಅಮಿತಸೇವೆಯ ಕೈಕೊಳುತ ತಾ । ನುಮೆಯೊಡನೆ ಕ್ರೀಡಿಸುವ ತನ್ನಯ ।
ಮನವನುರಾಗದೆ ನಿಯೋಗಿಸಿ ಮಂದಹಾಸದಲಿ ॥೧೨॥
ಅಸಮನೆನಿಸುವ ಬಲನಮಾಯೆಯಿಂ । ದೆಸೆವ ಹೇಮದ ಭೂಷಣಾದಿಗಳ।
ತಿಶಯದಿ ಪುಟ್ಟಿಹವು ಅವುಗಳ ಧರಿಸಿ ನಾರಿಯರೂ ॥
ಹೊಸತೆನಿಪ ಸೊಬಗಿನಲಿ ರಾ । ಜಿಸಿ ವಿಟರೆನಿಪ ರಕ್ಕಸರ ಮೋ ।
ಹಿಸಿ  ಕುಸುಮಶರನನು ಧ್ಯಾನಿಸುವರವರೆಲ್ಲ ಬೇಸರದೆ ॥೧೩॥
ಅತಳಲೋಕವು ಶ್ರೋಣಿದೇಶದೆ । ಅತಿಶಯದಿ ಪುಟ್ಟಿಹುದು ಇದರಲಿ ।
ಪ್ರತಿಯು ಇಲ್ಲದ ಮಯನ ಮಾಯದಿ ರಚಿತವೆಂದೆನಿಪ ॥
ರತುನಕೆತ್ತಿದ ಭಿತ್ತಿಗೋಪುರ । ವತಿಶಯದ ಉಪ್ಪರಿಗೆ ಬೀದಿಗಳ ।
ಳಿತರ ನಾನಾ ಬಗೆಯ ಶೋಭಿತ ಪುರವರವು ಇಹುದು ॥೧೪॥
ಇಲ್ಲಿ ಉತ್ಪತ್ತಿಯಾಗಿಹವು  ತಾ । ವೆಲ್ಲಾ ಮೃಗ ಪಶು ಪಕ್ಷಿ ಜಾತಿಗ ।
ಳೆಲ್ಲು ಇಲ್ಲದ ಮಿಥುನದಾಕೃತಿಯಲ್ಲಿ ರಾಜಿಸುತಾ ॥
ಮಲ್ಲಿಗೆಯು ಶತಪತ್ರ ಮೊದಲಾ । ದೆಲ್ಲಾ ಜಾತಿಯ ಪುಷ್ಪ ಗಳು ತಾ ।
ವಿಲ್ಲಿ ಪಲ್ಲೈಸುವವು ನೋಳ್ಪ ರ ಮನವನಪಹರಿಸಿ ॥೧೫॥
ಧನ್ಯರೆನಿಸುವ ಜೀವಿಗಳಿಗಿದು । ಉನ್ನತದಕ್ರೀಡಾವಿನೋದದ ।
ಉನ್ನತೋನ್ನತ ಸುಖವನೀಯುವ ಸ್ಥಳವು ಎನಿಸುವುದೂ ॥

ಮಾನದೆನಿಸಿದ ದನುಜಸಂತತಿ । ಉನ್ನತದ ಕದ್ರುವಿನ ಸುತರುಗಳನ್ನು ।
ಅನ್ಯದ ಭಾವದಲಿ ವಾಸಿಪರು ಅತಳದಲಿ ॥೧೬॥
ಚಿನ್ಮಯದ ಆನಂದರೂಪ ಶರಣ್ಯನೆನಿಸುವ ದೇವದೇವನು ।
ಇಲ್ಲಿಗಾತ್ಮಸ್ವರೂಪನೆನಿಸುವನೆಲ್ಲ ಕಾಲದಲಿ ॥
ಸನ್ಮನದಿ ಸಜ್ಜನರು ಭಾವಿಸಿ । ತಮ್ಮ ಮನದಲಿ ನಿರುತ ಪರಮೋ
ನ್ನತದ ಲೋಕಗಳನೇಳನು ಚಿಂತಿಪುದು ಹರಿಯಾ ॥೧೭॥
ಪರಮಗಹನ ವಿರಾಟ್ಸ್ವರೂಪನ । ಶಿರಿಪದವು ಮೊದಲಾಗಿ ಶ್ರೇಣಿಯ ।
ಪರಿಮಿತದ ದೇಹದಲಿ ಇವುಗಳ ಧರಿಸಿರುವನೆಂದು ॥
ನಿರುತ ಊರ್ಧ್ವಗಳೆನಿಪ ಲೋಕಗಳಿರುವ ವರ್ಣಿಪೆನಿನ್ನು ಜಘನವು ।
ಶಿರದ ಪರಿಯಂತದಲೆ ಇರುವವು ಏಳು ಲೋಕಗಳು ॥೧೮॥
ಮೆರೆವಜಘನ ಪ್ರದೇಶದಿಂದಲಿ । ಧರಣಿಯುತ್ಪತ್ತಿಯು ದಾದುದು ।
ನಿರುತ ಜಘನವನಾಶ್ರಯಿಸಿ ತದ್ಭಿನ್ನದಲಿ ಇರುತಿಹುದು ॥
ಮೆರೆವ ನವಖಂಡಗಳು ದ್ವೀಪಗಳಿರುವ ಭುವನದರಾಶಿಗಳು ತಾ ।
ವಿರುವವಾವರಿಸಿರುವ ಶರಧಿಯ ವಾರಿಯೊಪ್ಪುತಲಿ ॥ ೧೯ ॥
ಪರಿಪರಿಯ ನದಿನದವು ಪರಿವವು ಉದಧಿ । ಪರಿಯಂತದಲಿ ಮೆರೆಯುವ ।
ತರುಲತಾದಿಗಳಿಂದ ಪರಿವೃತವೆನಿಸಿ ರಂಜಿಸುತಾ ॥
ಇರುವ ಧರಣಿಯೊಳುದಿಸುವರು । ಕರ್ಮಗಳ ಸಾಧನಗೈವ ಮೃಗ ಪಶು, ॥
ನರರು ನಾನಾ ತೆರದ ಪಕ್ಷಿಸುಕೀಟರಾಶಿಗಳೂ ॥೨೦॥
ದಿವಿಜದಾನವರಲ್ಲಿ ಅವತಾರಗಳ ಮಾ।ಡುವರವರು ತವಕದಿ ಹರಿಯೆ ।
ಅವತಾರಗಳ ಮಾಡುವ ಧರ್ಮಉದ್ಧರಿಸೇ ॥
ಪವನಮಧ್ಯಗನೆನಿಸಿ ದೇವನು । ಅವಿರಳದ ಪೂಜೆಯನು ಕೊಳ್ಳುತ ।
ತವಕದಲಿ ಮಹಪುಣ್ಯಸಾಧವನೀವ ಭಜಕರಿಗೆ ॥೨೧॥
ಗಗನದಲಿ ರಾಜಿಸುವ ಸೂರಿಯ । ಗಗನಮಣಿ ಚಂದ್ರಮನು ದಿನದಿನ ।

## अथ प्रथमोऽध्यायः

ಹಗಲುರಾತ್ರಿಗಳಲ್ಲಿ ಬೆಳಗುವರಗಲದಲೆ ನಿರುತಾ ॥
ಸೊಗಸು ತೋರುವ ಪರಿಮಳದ । ಮಘಿಮಘಿಪ ಪುಷ್ಪಾ ವಳಿಗಳು ತ್ವರೆ ।
ಜಗದಜೀವರ ಆಹರಗಳು ಪುಟ್ಟುವವು ವಿವಿಧದಲೀ ॥೨೨॥
ಈ ಪರಿಯ ವಿಧವಿಧದ ಸಾಧನ । ರೂಪವಹ ವಸ್ತುಗಳ ಸೃಷ್ಟಿಸಿ ।
ತಾಪವರ್ಜಿತನಾಗಿ ಸಾಧಕರೊಳಗೆ ನೆಲೆಸಿದ್ದೂ ॥
ಔಪಚಾರಿಕ ಯುಕುತಪ್ರಜೆಯ । ತಾ ಪರಮದಯದಿಂದ ಕೊಳ್ಳುತ ।
ಶ್ರೀಪ ತೋರುವ ತನ್ನ ಇರುವನು ಮುಕುತ ಜೀವರಿಗೆ ॥೨೩॥
ಪೊಕ್ಕಳಿಂದಲಿ ಉದುಭವವು ತಾ । ರಕ್ಕಿಯೊಡಗೊಂಡಿರುವ ಆಗಸ ।
ದಿಕ್ಕುಪಾಲಕರೆಲ್ಲರಿಗೆ ವಾಸವಿದಕ್ಕು ನಾಲ್ಕೆರಡು ॥
ದಿಕ್ಕುಗಳು ನಾಮಪ್ರಭೇದದಿ । ವ್ಯಕ್ಕುತವು ತಾವಾಗಿ ನಿರುತದಿ ।
ಲಕ್ಕುಮೀರಮಣನಿಗೆ ವಾಲಗವಕ್ಕು ಇದರೊಳಗೆ ॥೨೪॥
ಋಕ್ಕುಸಾಮಾದಿಗಳ ಧರಿಸಿಹ । ಶಕ್ಕುತನು ಹರಿಶಿಂಶುಮಾರನು ।
ವೃಶ್ಚಿಕಾಕಾರದಲ್ಲಿ ಆಗಸವೆಲ್ಲವಾಕ್ರಮಿಸಿ ॥
ಲೆಖ್ಖವಿಲ್ಲದದೇವನಿಕರವ । ಲೆಖ್ಖವಿಲ್ಲದ ತಾರಕಿಗಳೊಳು ತಾ ।
ನಿಕ್ಕಿ ಪೊರೆಯುವನವರ ಲೇಶಾಯಾಸವಿಲ್ಲದಲೆ ॥೨೫॥
ವೃಶ್ಚಿಕದ ಬಾಲಾಗ್ರದಲಿ ತಾ । ಶಿಕ್ಕಿಹುದು ಧೃವನಾಮ ತಾರಕಿ ।
ಪುಚ್ಛಮೂಲದಿ ಇಂದ್ರಧರ್ಮರು ಪ್ರಜಪತಿಯು ಇಹರು ॥
ಕುಕ್ಷಿಯಲಿ ಸಪ್ತರ್ಷಿಮಂಡಲ । ಶುಕ್ಕರನು ನಾಭಿಯಲಿ ಮನಸಿಲಿ ।
ಶಿಕ್ಕಿಕೊಂಡಿಹ ಚಂದ್ರಮನು ಅರ್ಕನು ವಕ್ಷಸ್ಥಳದಲ್ಲೀ ॥೨೬॥
ವರಬೃಹಸ್ಪತಿಮುಖದಿ । ಮರೆಯುವ ಶನಿ ಉಪಸ್ಥದಿ ರಾಹುಕೇತುಗ ।
ಳಿರುವರೊಂದೊಂದೆನಿಪ ಸ್ಥಾನವಿಶೇಷದೊಳು ಶಿಲುಕಿ ॥
ನಿರುತಭೂಲೋಕಕ್ಕೆ ಅಧಿ । ಕಾರಿಗಳು ತಾವೆಂದೆನಿಸಿ ಇರುತಲಿ ।
ತಿರುಗುತಿಹರೆಡೆ ಬಿಡದೆ ಕಾಲಸುಚಕ್ರದಲಿ ಶಿಲುಕೆ ॥೨೭॥

## अथ प्रथमोऽध्यायः

ಸುರರಲೋಕವ ಧರಿಸಿ ಸೃಜಿಸಿಹ । ಹರಿಯು ತನ್ನಯ ವಕ್ಷಭಾಗದಿ ।
ಮೆರೆವ ರತುನದ ಭೂಷಣಾದಿಗಳಿಂದಲೊಪ್ಪು ತಲಿ ॥
ಪರಮಸುಂದರರೂಪದಿಂದಲಿ । ಸಿರಿಸಹಿತ ಅಭಿಮಾನಿ ಎಂದೆನಿ।
ಸಿರುತ ಬಲು ಸುಖವೀವ ಪುರಹೂತನಿಗೆ ಮೋದದಲಿ ॥೨೮॥
ಮೆರೆವ ಅಮರಾವತಿಯ ನ।ಗರವು ಕನಕವಜ್ರಾದಿಗಳು ।
ಮಿರಗುವ ರತುನ ನೀಲದ ಮಣಿಗಳಿಂದಲಿ ರಚಿತವೆನಿಸುವದೂ ॥
ಗಗನ ಚುಂಬಿತವೆನಿಪ ಉಪ್ಪ ।ರಿಗೆಗಳು ಹೊಳೆಯುವ ರಜತ ರಚಿ।
ತಗಳೆನಿಪ ಬೀದಿಗಳಿಂದ ವೆಗ್ಗಳವೆನಿಸಿ ಶೋಭಿಪುದು ॥೨೯॥
ಸೊಗಸಿನುದ್ಯಾನಗಳು ನಂದನ।ವನವು ಶೃಂಗಾರದಲಿ ಅಸದೃಶ।
ವೆನಿಸಿ ಶೋಭಿಪುದಿಲ್ಲಿ ನೋಳ್ಪ ರ ಮನವನಪಹರಿಸಿ ॥
ಗಗನಚಾರಿಗಳೆನಿಪ ನಿರ್ಜರ।ರುಗಳು ಹರುಷದಿ ಇಂದ್ರದೇವನ ।
ಹಗಲಿರುಳು ಸೇವಿಪರು ಸುಗುಣನ ಪರಮಪ್ರೀತಿಯಲಿ ॥೩೦॥
ತುರಗ ಉಚ್ಚೈಶ್ರವವು ಪಟ್ಟದ ಕು । ದರೆ ಎನಿಪುದು ಇಂದ್ರದೇವಗೆ ।
ಕರಿಯು ಐರಾವತವು ಮಾತಲಿ ಸಾರಥಿಯು ಎನಿಪಾ ॥
ನಿರುತ ಶಚಿಯೊಡಗೂಡಿ ಅ। ಪ್ಸರ ಸುರರು ಸತಿಯರ ಸಹಿತ ಪರಿಪರಿ ।
ತರದ ನಾಟ್ಯವು ಗಾನದಿಂದಲಿ ಪರಮಭಕುತಿಯಲಿ ॥೩೧॥
ಸಿರಿವರನು ಸುರಪನನು ಪಾಲಿಸೆ।ಧರಿಸಿದಂದಿನ ಮೆರೆವವಟು ವಾಮನನ ।
ಸಿರಿಪದಯುಗಳನರ್ಚಿಪರೆಲ್ಲ ಹರುಷದಲೀ ॥
ಪರಿಪರಿಯ ಭೋಗದಲಿ ನಲಿದಾಡು।ವರು ನಿರ್ಜರರೆಲ್ಲ ಕಾಲದ।
ಲೊರೆಯಲಸದಳ ವಿವರ ಸಿರಿವೈಭವವ ವರ್ಣಿಸುತಾ ॥೩೨॥
ಕೊರಳಸರಿಸದಿ ಪುಟ್ಟಿ ಅದ।ನಾಶ್ರಯಿಸಿ ತದ್ಭಿನ್ನದಲಿ ಇರುವಾ।
ಮೆರೆವ ಮಹರ್ಲೋಕದಲಿ ಇರುವನು ಮುನಿಪ ನಾರದನೂ ॥
ನಿರುತಮನದಲಿ ಹರಿಯ ಧ್ಯಾನಿಪ । ಸುರರು ಪ್ರದ್ಯುಮ್ನಾನಿರುದ್ಧರ ।

## अथ प्रथमोऽध्यायः

ಪರಿಪರಿಯೊಳರ್ಚಿಸುತ ಮೋದಿಪರಿಲ್ಲಿ ನಿರುತದಲಿ ॥೩೩॥
ಹೊಳೆವ ಸಾವಿರಸೂರ್ಯರಂದಲಿ । ಹೊಳೆವಮುಖದಲಿ ಪುಟ್ಟಿ।
ಬೆಳಗುತ ಜನೋ ಸುಲೋಕವು ನಿಖಿಳ ಭೂತಗಣಕ್ಕೆ ಶಕ್ತ್ಯಾದಿ ॥
ಗಳಿಗೆ ದೇವತೆ ಎನಿಸಿ ಇರುವರು।ಗಳಿಗೆ ವಾಸಸ್ಥಾನವೆನಿಸುತ ।
ತೊಳ ತೊಳಗಿ ಬೆಳಗುವುದು ಜ್ಞಾನದ ನಿಲಯದಂದಲಿ ॥೩೪॥
ಇದಕೆ ಮೆರೆಯುವ ರುದ್ರದೇವನು । ಅಧಿಪತಿಯು ತಾನಾಗಿ ಇಪ್ಪನು ।
ಅದುಭುತದ ಭೂತಗಳ ಸೇವೆಯ ನಿರುತ ಕೈಕೊಳುತಾ ॥
ಸದಮಲದ ಮೈತ್ರೇಯ ಸನ।ಕಾದಿಗಳು ಎನಿಸುವ ದೇವಋಷಿಗಳು ।
ವರಬೃಹಸ್ಪತಿ ಸಹಿತ ಮೋದದಲಿದ್ದುವಾಸಿಪರು ॥೩೫॥
ತಪದ ಲೋಕವು ಪುಟ್ಟಿಹುದು ತಾ । ನಪರಿಮಿತ ಸನ್ಮಹಿಮದೇವನ ।
ವಪುವಿಲೊಪ್ಪುವ ಫಣೆಯ ಭಾಗದಲಿಪ್ಪು ದನವರತ ॥
ಕ್ಲುಪ್ತರಾಗಿಹ ಪರಮತೇಜದ । ತಪಶಿಗಳನೊಡಗೂಡಿ ರುದ್ರನು ।
ಜಪಿಸುವನು ನಿರ್ದೋಷ ವಪುಷನ ನರಹರಿಯ ಮನದಿ ॥೩೬॥
ವೇದದಭಿಮಾನಿಗಳೆ ಮೊದ । ಲಾದಾಸಮಸ್ತದ ದೇವತತಿಗಳು ।
ಮೋದದಿಂ ಹಾರಯಿಸಿ ಮನದಲಿ ತವಕಗೊಳ್ಳುತಲಿ ।
ಆ ಪದುಮಗರ್ಭನನು ನೋಡಲು । ಸಾದರದಿ ರುದ್ರನು ಆಶ್ರಯ।
ಗೈದು ಸೇವಿಸಿ ನುತಿಸುತಿಪ್ಪ ರು ಪರಮ ವಿನಯದಲಿ ॥ ೩೭ ॥
ಪದ್ಮಸಂಭವನಿಲ್ಲಿಗಧಿಪತಿ । ಪದ್ಮಕಾಂತಿಯ ತೆರದಿ ರಾಜಿಪ ।
ಪದ್ಮಲೋಚನರಾದ ಋಷಿಗಳು ದೇವತೆಗಳೆಲ್ಲಾ ॥
ಪದ್ಮನಾಭನ ಕರುಣ ಪಡೆದರು । ಪದ್ಮಗರ್ಭನ ಆಜ್ಞೆಯಿಂದಲಿ ।
ಸದ್ಮಗಳ ಹೊಂದುವರು ಈ ಲೋಕದಲಿ ಶೋಭಿಸುತ ॥೩೮॥
ಸತ್ಯಲೋಕವ ಹರಿಯು ಶಿರದಲಿ । ನಿತ್ಯದಲಿ ಧರಿಸಿಹನು ಇದರಲಿ ।
ಅತ್ಯಧಿಕಭಕುತಿಯುತನಾಗಿಹ ಸತ್ಯಸಂಭವನು ॥

## अथ प्रथमोऽध्यायः

ಭೃತ್ಯರೆಲ್ಲರ ಸಹಿತ ಪರಮಾ।ಸಕ್ತಿಯಲಿ ನಾನಾವತಾರದ ।
ಶಕ್ತ ಶ್ರೀಹರಿಮೂರ್ತಿಗಳ ಪರಿಪರಿಯಲರ್ಚಿಪನು ॥೩೯॥
ಶಿರಿಸರಸ್ವತಿದೇವಿ ತಾ ನಿ।ದ್ದುರುತರದ ಮಾನಸಸುಪೂಜೆಯ ।
ಹರಿಗೆ ಮಾಳ್ಪ ರು ನಿರುತ ಚತುರಾನನ ಸೇವಿಸುತಾ ॥
ಮರುತದೇವನು ಭಾರತಿಯು ತಾ।ವಿರುವರಿಲ್ಲಿ ಮಹಾಪ್ರಧಾನತೆ ।
ಇರುವದಿವರಿಗೆ ಬ್ರಹ್ಮವಾಣಿಯ ತೆರದ ವೈಭವವು ॥೪೦॥
ಈ ಪರಿಯ ವೀರಾಟಮೂರ್ತಿಯ । ರೂಪವನೆ ಚಿಂತಿಪುದು ಪರಮಗೆ ।
ಸೋಪಚಾರಿಕ ಪೂಜೆ ಎನಿಸುವದೆಲ್ಲ ಕಾಲದಲೀ ॥
ಆಪವರ್ಗದ ಸುಖವನೀಯಲು । ಸೋಪನವು ತಾನೆನಿಸಿಕೊಂಬುದು ।
ಶ್ರೀಪ ಪ್ರೀತಿಯನೈದುವನು ಇದರಿಂದ ನಿರುತದಲಿ ॥೪೧॥
ಈಸುವರ್ಣನೆಗಳನು ವಿಜಯ । ದಾಸರಾಯರು ವಿರಾಟ್ಸುಳಾದಿಲಿ ।
ಓಸರಿದು ಪೇಳಿದನೆ ಭಾಮಿನಿ ಷಟ್ಪ ದಿಯಲಿಲ್ಲೀ ॥
ಏಸುತಿಳಿಯಿತೊ ಅಷ್ಟನೇ ನಾ । ಲೇಸನಿಚ್ಛಿಸಿ ರಚಿಸಿ ಪೇಳಿದೆ ।
ಭೂಸುರರು ಕರುಣದಲಿ ಮನ್ನುಪುದೆನ್ನ ಸಾಹಸವಾ ॥೪೨॥
ಜಯಜಯತು ಮತ್ಸ್ಯಾವತಾರಗೆ । ಜಯಜಯತು ಕೂರ್ಮನಿಗೆ ವರಹಗೆ ।
ಜಯಜಯತು ನರಸಿಂಹದೇವಗೆ ವಾಮನ ಪರಶುರಾಮರಿಗೆ ।
ಜಯಜಯತು ಶ್ರೀರಾಮಚಂದ್ರಗೆ । ಜಯಜಯತು ರುಕ್ಮಿಣಿಯ ಅರಸಗೆ ।
ಜಯಜಯತು ಬೌದ್ಧನಿಗೆ ಕಲ್ಕಿಗೆ ವೇಂಕಟಾಚಲಗೇ ॥೪೩॥
ಮಂಗಳಂ ವೇದವನು ತಂದಗೆ । ಮಂಗಳಂ ಕಂದರವ ಪೊತ್ತಗೆ ।
ಮಂಗಳಂ ಭೂದೇವಿಧಾರಿಗೆ ನರಹರಿಗೆ ವಟುಗೇ ॥
ಮಂಗಳಂ ಕ್ಷತ್ರಿಯರ ಶಿಕ್ಷಗೆ । ಮಂಗಳಂ ಹನುಮಂತನೊಡೆಯಗೆ ।
ಮಂಗಳಂ ಪ್ರಹ್ಲಾದವರದ ಶ್ರೀಹರಿವಿಠ್ಠಲಗೆ ಹರಿಗೇ ॥೪೪॥

॥ ಶ್ರೀಕೃಷ್ಣಾರ್ಪಣಮಸ್ತು ॥

## अथ प्रथमोऽध्यायः

## ಅಂಗಾಶ್ರಿತ ದೇವತೆಗಳ ಸ್ಥಾನಗಳು ಮತ್ತು ಉತ್ಪತ್ತಿಕ್ರಮ

## ಎರಡನೆಯ ಸಂಧಿ

ಪುರುಷಸೂಕ್ತಪ್ರತಿಪಾದ್ಯ ಪುರುಷನಾಮಕದೇವರಲ್ಲಿ, ಅಂಗಾಶ್ರಿತ ದೇವತೆಗಳ ಚಿಂತನಾಕ್ರಮ

**ಭಾಗವತ ದ್ವಿತೀಯಸ್ಕಂಧ – ಪ್ರಥಮಾಧ್ಯಾಯದಲ್ಲಿ ನಿರೂಪಿತವಾದದ್ದು.**

ಪುರುಷನಾಮಕ ಪರಮಪುರುಷನ । ಸುರುಚಿರಾಂಗದಿ ಪುಟ್ಟಿ ವಾಸಿಪ ।
ಸುರರ ನೀಪರಿ ಚಿಂತಿಪುದು ಸದ್ಭಕ್ತಿಯಲಿ ಕೋವಿದರೂ ॥ ॥
ಪುಟ್ಟಿದನು ಜಯಂತ ಪಾದದಿ । ಪುಟ್ಟಿದನು ಮೇಢ್ರದಲಿ ದಕ್ಷನು ।
ಪುಟ್ಟಿದನು ರೇತಸ್ಸಿನಿಂದಲಿ ರುದ್ರನಾಮಕನು ॥
ಪುಟ್ಟಿದಳು ಶಿರಿದೇವಿ ಹೃದಯದಿ । ಪುಟ್ಟಿದನು ನಾಭಿಯಲಿ ಬ್ರಹ್ಮನು ।
ಪುಟ್ಟಿದನು ಕಣ್ಣಿನಲಿ ಸೂರ್ಯನು ಚಂದ್ರ ಮನದಿಂದಾ ॥೧॥
ಕರ್ಣದಿಂದಲಿ ಹುಟ್ಟಿದರು ಸಂ । ಪನ್ನ ದಿಗ್ದೇವತೆಗಳೆಲ್ಲರು ಧ।
ರ್ಮನುದ್ಭವಿಸಿದನು ಸ್ತನದಲಿ ಅಗ್ನಿಮುಖದಿಂದ ॥
ಇಂದ್ರವಾಗಿಂದ್ರಿಯದಿ ಪುಟ್ಟಿದ । ಸಾಂದ್ರನಾಗಿಹ ವಾಯುಪ್ರಾಣದಿ ।
ಮನುಸ್ವಯಂಭುವು ಬುದ್ಧಿಯಿಂದಲಿ ಜನಿಸಿದನು ತಾನೂ ॥೨॥
ನಾಸದಲಿ ಧನ್ವಂತರಿ ಹುಟ್ಟಿದ । ಪ್ರಾಸದಿಂದಲಿ ಕಾಮದೇವನು ।
ವಾಸನಾಕ್ರೋಧದಲಿ ರುದ್ರನು ಪುಟ್ಟಿದನು ತಾನು ॥
ಆ ಶಬ್ದ ಇಂದ್ರಿಯದಿ ವಿದ್ಯಾ।ಕೋಶ ಗಂಧರ್ವರುಗಳೆಲ್ಲರು ।
ಶ್ವಾಸದಿಂದಲಿ ಪವನರಾಯನು ಪುಟ್ಟಿದನು ಭರದಿ ॥೩॥
ಹಾಸದಿಂದಲಿ ಮಾಯೆ ಪುಟ್ಟಿತು । ಲೇಸು ಜಿಹ್ವೆಯ ಒಳಗೆ ಪುಟ್ಟಿತು ।
ಆಸಮಸ್ತ ಮೃದುತ್ವ ತ್ವಗೇಂದ್ರಿಯದಿ ಪುಟ್ಟಿದುದೂ ॥
ಮೀಶೆಯಿಂದಲಿ ಮಿಂಚು ಉದಿಸಿತು । ಕೇಶದಿಂದಲಿ ವೃಕ್ಷಜಾತಿಗ।

## अथ प्रथमोऽध्यायः

ಳಾಸಮಸ್ತ ವನಸ್ಪತಿಗಳುದಿಸಿದವು ಕೇಶದಲಿ ॥೪॥
ಹೊಕ್ಕಳಿಂದಲಿ ಆಗಸವು ತಾ।ವ್ಯಕ್ತುತವು ಆಗಿಹುದು ಅದರಲಿ ।
ಹೊಕ್ಕು ವಾಯು ಪ್ರಾಣದೆಸೆಇಂ ಚಲನೆ ಮಾಡುತಿರೆ ॥
ಫಕ್ಕನುದಿಸಿದುದಾಗ ಅಗ್ನಿಯು । ಉಕ್ಕಿದುದು ಅದರಿಂದ ಆಪವು ।
ವ್ಯಕ್ತುತವು ತಾನಾಯ್ತು ಇದರಿಂದಿಳೆಯು ಬೇಗದಲಿ ॥೫॥
ಕರುಣದಿಂದಲಿ ಬೊಮ್ಮನುದಿಸಿದ । ವರುಣ ಮೊದಲು ಸಮಸ್ತತತ್ವದ ।
ಪರಮ ಅಭಿಮಾನಿಗಳು ಬೊಮ್ಮನ ದೇಹದೊಳಗಿದ್ದು ॥
ಅವರೊಳಗೆ ಸಿರಿವರನು ತಾನಾ । ಪುರುಷರೂಪದಿ ಇದ್ದು ನಿಯಮಿಸಿ ।
ಭರದಿ ಸೃಷ್ಟಿಯನೆಲ್ಲಗೈದನು ಅರಿವುದಿದನಿನ್ನೂ ॥ ೬ ॥
ದಂತಗಳ ದೆಸೆಯಿಂದ ಪುಟ್ಟಿತ।ನಂತ ತಾರಾವಳಿಗಳೆಲ್ಲವು ।
ಅಂತರದ ನಾಡಿಗಳ ದೆಸೆಇಂ ನದಿಗಳುದ್ಭವವೂ ॥
ಪಂಕ್ತಿಯಲಿ ರಾಜಿಸುವ ಅದ್ರಿಗ।ಳಿಂತು ಉದಿಸಿದವಸ್ಥಿಯಿಂದಲಿ ।
ಸ್ವಾಂತ ವ್ಯಾಪಾರದಲಿ ಗುಣಗಳು ಉದಿಸಿದವು ತಾವು ॥೭॥
ವಚನದಿಂ ಗಾಯತ್ರಿ ಛಂದೋ । ನಿಚಯಗಳು ಉದಿಸಿದವು ।
ಅಚಲ ತಪಸುಗಳೆಲ್ಲ ಮನದ ವೃತ್ತಿಇಂ ಜನಿತ ॥
ಶುಚಿಯು ಆಗಿಹಸರ್ವತೀರ್ಥದ । ನಿಚಯಗಳು ವೀರ್ಯದಲಿ ಉದ್ಭವ ।
ಸಚರ ಅಚರಾವಳೀಗಳೆಲ್ಲವು ಪ್ರಚುರವೆನಿಸಿದವೂ ॥೮॥
ಉದಧಿಸಪ್ತಗಳೆನಿಪವೆಲ್ಲವು । ಉದುಭವಿಸಿದವು ಹರಿದೇಹತ್ವಕ್ಕಿನ ।
ಪದರಗಳ ದೆಸೆಯಿಂದ ಅದುಭುತವೆನಿಸಿ ಪೊರಮಟ್ಟೂ ।
ಉದಿಸಿದವು ಕ್ರಮವಾಗೊ ವೈದಿಕ । ಮೊದಲು ಲೌಕಿಕವಾದ ವ್ಯಾಪಾ।
ರಗಳು ಪರಮನದೌಂಷ್ಟ್ರದ್ವಯದಿಂದ ॥೯॥
ಪ್ರೀತಿಂದಲಿ ಲಜ್ಜೆಯುತ್ಪತಿ । ಮಾತಿನಿಂದಲಿ ಶೃತಿಗಳೆಲ್ಲವು ।
ಸ್ಮೃತಿಗಳೀತನ ಶೀಕ್ಷೆಕ್ರಮವೆಂದೆನಿಸಿ ಉದಿಸಿಹವೂ ॥

## अथ प्रथमोऽध्यायः

ಅತಿಶಯದ ಜಾತಿಗಳ ಜನರನು । ಚತುರ ವಿಧದಲು ಸೃಷ್ಟಿಸಿದ ।
ಚೇತನರ ಯೋಗ್ಯತೆ ತಾರತಮ್ಯವನರಿತು ಮೋದದಲಿ ॥೧೦॥
ಕಾವದೇವನು ಒಬ್ಬನೆನುತಲಿ । ಭಾವದಲಿ ಪರಿಕಿಸಿದು ತಿಳಿದಿಹ।
ರಾ ವಿಗಡಮುನಿವರರು ಕರೆಯುವರವನ ನಿರುತದಲಿ ॥
ಶ್ರೀವರನು ನಾರಾಯಣನು ಎನು।ತವೆ ವೇದಸಮ್ಮತ್ರದಿಂದಲರಿಯುತ ।
ಭಾವದ್ಲಿ ಭಜಿಸುವರು ಕೋವಿದರೊಲಿದು ಹೃದ್ಗುಹದಿ ॥೧೧॥
ಶ್ರೀವರನು ರಮಣೀಯರೂಪನು । ಪಾವನದ ಕೋಮಲತಮ ಸ್ವರೂಪನು ।
ಭಾವಿಪರ ಹೃತ್ತಾಪಹಾರನು ಭುವನದೊಲ್ಲಭನು ॥
ಆವಕಾಲಕು ಮನದಿ ನೆನೆಯಲು । ಭಾವದಲಿ ಬೇಸರವಗೊಳಿಸದ।
ಲೀವನಾನಂದವನು ಹೊಳೆವನು ಚಂದ್ರನಂದದಲೀ ॥೧೨॥
ಪರಮಚೈತನ್ಯಸ್ವರೂಪನು । ಹರಿಯು ಇತ್ತಿಹ ಶಕ್ತಿಯಿಂದಲಿ ।
ಜಗವು ಪರಿವರ್ತಿಸುತಲಿರುವುದು ತನ್ನಿಯಾಮಕದಿ ॥
ನಿರುತ ಬ್ರಹ್ಮಾದ್ಯರಿಗೆ ಎವೆ ಇಕ್ಕಲು ಸ್ವ ।ತಂತ್ರವು ಇಲ್ಲಲೇ ಭಾವಿಸಲು ಸಾಧ್ಯವೆ ।
ಹರಿಯ ಬಂಧಕ ಶಕುತಿ ಪರಿಮಿತಿಯಾ ॥೧೩॥
ಅಣುಮಹದ್ಗತ ಪೂರ್ಣನೆನಿಸುತ । ಪರಮ ಸೃಷ್ಟಿಯೊಳಜ ಮೊದಲು।
ಗೊಂಡಖಿಳ ಸೃಷ್ಟ ಸಜೀವ ನಿರ್ಜೀವರಲಿ ನೆಲೆಸಿದ್ದೂ ॥
ತನುಮನಕೆ ಗುಣಕಾಲಕರ್ಮಗ।ಳನುಸರಿಸಿ ಚೇತನಕೆ ಚೇಷ್ಟೆಗ।
ಳನು ಕೊಡುವ ಕಾರಣದಿ ಸೃಷ್ಟರು ತದ್ವಶರು ಎನಿಸುವರೂ ॥೧೪॥
ಬಂಧಮೋಚಕಹರಿಯ ಮಹಿಮೆಗ।ಳಿಂದು ತುತಿಸಲು ಮನವು ಬಂದುದು ।
ಇಂದು ಮಾಡಿದ ಸುಕೃತ ನೋಡಲು ಕಾಣೆ ಲೇಶವನೂ ॥
ಬೃಂದವನದೊಳಗಾಡುತಿಹ ಗೋ।ವಿಂದನತಿ ಕಾರುಣಿಕನದರಿಂ।
ದಿಂದು ತಾನೇ ನಿಂತು ಬರೆಸಿಹನೀ ಕಥಾಮೃತವ ॥ ೧೫ ॥
ಹರಿಯ ನಾಮೋಚ್ಚಾರಣೆ ಮಾತ್ರದಿ । ಪರಮಪಾವನರನ್ನು ಮಾಡುತ ।

ಪೊರೆವದೇವನ ಬಿಟ್ಟು ಅನ್ಯರ ಮೊರೆಯಹೊಕ್ಕರೆ  ಪೊರೆಯಲಾರರು ।
ನಿರುತದಂದಿದನರಿಯಬೇಹುದು ಮರೆಯದಲೆ ಮನದಿ ॥೧೬॥
ಕರಗತವ ಮಾಡುವುದು ಮುಕ್ತಿಯ । ಸಿರಿಯಸೂರೆಗೊಳ್ಳುವುದು ।
ನರಹರಿಯ ಸಿರಿರೂಪವನ್ನು ಭರದಲಿ ಕಂಡು ಸುಖಿಸುವುದು ॥
ನರಜನುಮವೆತ್ತಿರುವ ಜೀವರಿಗಿದುವೆ ಸಾಧನವೆನಿಸಿಕೊಂಬುದು ।
ವರಪ್ರಹ್ಲಾದವರದ ಶಿರಿಹರಿವಿಠ್ಠಲನ ದಯದಿ ॥೧೭॥

॥ ಶ್ರೀಕೃಷ್ಣಾರ್ಪಣಮಸ್ತು ॥

# अथ द्वितीयोऽध्यायः

**शुक उवाच**

एवं पुरा धारणयाऽऽत्मयोनिर्नष्टां स्मृतिं प्रत्यवरुह्य तुष्यन् ।
तथा ससर्जेदममोघदृष्टिर्यथाऽप्ययात्प्राग्व्यवसायबुद्धिः ॥ १ ॥

शब्दस्य हि ब्रह्मण एष पन्थाः  यन्नामभिर्ध्यायति धीरपार्थैः ।
परिभ्रमंस्तत्र न विन्दतेऽर्थान्मायामये वासनया शयानः ॥ २ ॥

अतः कविर्नामसु यावदर्थः  स्यादप्रमत्तो व्यवसायबुद्धिः ।
सिद्धेऽन्यथार्थे न यतेत तत्तत्परिश्रमं तत्र समीक्षमाणः ॥ ३ ॥

सत्यां क्षितौ किं कशिपोः प्रयासैर्बाहौ स्वसिद्धे ह्युपबर्हणैः किम् ।
सत्यञ्जलौ किं पुरुपर्णपात्रैर्दिग्वस्त्रलाभे सति किं दुकूलैः ॥ ४ ॥

चीराणि किं पथि न सन्ति दिशन्ति भिक्षां नो वाऽङ्घ्रिपाः परभृतः सरितोऽप्यशुष्यन् ।
रुद्धा गुहाः किमवधूतसुहृन्न कृष्णः  कस्माद्भजन्ति कवयो धनदुर्मदान्धान् ॥ ५ ॥

एवं स्वचित्ते स्वत एव सिद्ध आत्मप्रियोऽर्थो भगवाननन्तः ।
तं निर्वृतो नियतार्थो भजेत संसारहेतूपरमश्च यत्र ॥ ६ ॥

स सर्वविद् हृद्यनुभूश्च सर्व आत्मा यथा सुप्तजनेक्षितैकः ।
तं सत्यमानन्दनिधिं भजेत सर्वात्मनाऽतोऽन्यत आत्मघातः ॥ ७ ॥

## अथ द्वितीयोऽध्यायः

कस्तं त्वनादृत्य परानुचिन्तामृते पशुत्वमसतीं नाम युञ्ज्यात्।
पश्यन् जनं पतितं वैतरण्यां स्वकर्मजान् परितापाञ्जुषाणम्॥ ८ ॥

केचित्स्वदेहान्तर्हृदयावकाशे प्रादेशमात्रं पुरुषं वसन्तम्।
चतुर्भुजं कञ्जरथाङ्गशङ्खगदाधरं धारणया स्मरन्ति॥ ९ ॥

प्रसन्नवक्त्रं नलिनायतेक्षणं कदम्बकिञ्जल्कपिशङ्गवाससम्।
लसन्महाहारहिरण्मयाङ्गदं स्फुरन्महारत्नकिरीटकुण्डलम्॥ १० ॥

उन्निद्रहृत्पङ्कजकर्णिकालये योगेश्वरास्थापितपादपल्लवम्।
श्रीलक्षणं कौस्तुभरत्नकन्धरमम्लानलक्ष्म्या वनमालयाऽञ्चितम्॥ ११ ॥

विभूषितं मेखलयाङ्गुलीयकैर्महाधनैर्नूपुरकङ्कणादिभिः।
स्निग्धामलैः कुञ्चितनीलकुन्तलैर्विरोचमानाननहासपेशलम्॥ १२ ॥

अदीनलीलाहसितेक्षणोल्लसद्भ्रूभङ्गसंसूचितभूर्यनुग्रहम्।
ईक्षेत चिन्तामयमेनमीश्वरं यावन्मनो धारणयाऽवतिष्ठते॥ १३ ॥

एकैकशोऽङ्गानि धियाऽनुभावयेत्पादादियावद्धसितं गदाभृतः।
जितं जितं स्थानमपोह्य धारयेत्परं परं शुध्यति धीर्यथा यथा॥ १४ ॥

यावन्न जायेत परावरेऽस्मिन् विश्वेश्वरे द्रष्टरि भक्तियोगः।
तावत्स्थवीयः पुरुषस्य रूपं क्रियावसाने प्रयतः स्मरेत॥ १५ ॥

स्थिरं सुखं चासनमास्थितो यतिर्यदा जिहासुरिममङ्ग लोकम्।
काले च देशे च मनो न सज्जेत् प्राणान्नियच्छेन्मनसा जितासुः ॥ १६ ॥

मनश्च बुध्याऽमलया नियम्य क्षेत्रज्ञ एतां निनयेत्तमात्मनि।
आत्मानमात्मन्यवरुध्य धीरो लब्धोपशान्तिर्विरमेत कृत्यात्॥ १७ ॥

न यत्र कालोऽनिमिषां परः प्रभुः कुतो नु देवा जगतां य ईशिरे।
न यत्र सत्वं न रजस्तमश्च न वै विकारो न महान्प्रधानम्॥ १८ ॥

परं पदं वैष्णवमामनन्ति तद्यन्नेति नेतीत्यतदुत्सिसृक्षवः।
विसृज्य दौरात्म्यमनन्यसौहृदा हृदोपगुह्यापुरमुं पदे पदे॥ १९ ॥

## अथ द्वितीयोऽध्यायः

इत्थं मुनिस्तूपरमेद्व्यवस्थितो  विज्ञानदृग्वीर्यसुरन्धिताशयः ।
स्वपार्ष्णिनाऽऽपीड्य गुदं ततोऽनिलं स्थानेषु षून्नमयेज्जितक्लमः ॥ २० ॥

नाभ्यां स्थितं हृद्यवरोप्य तस्मादुदानगत्योरसि तं नयेन्मुनिः ।
ततोऽनुसन्धाय धिया मनस्वी स्वतालुमूलं शनकैर्नयेत ॥ २१ ॥

तस्माद् भ्रुवोरन्तरमुन्नयेत निरुद्धसप्ताश्वपथोऽनपेक्षः ।
स्थित्वा मुहूर्तार्धमकुण्ठदृष्टिर्निर्भिद्य मूर्धन् विसृजेत्परं गतः ॥ २२ ॥

यदि प्रयास्यत्यथ पारमेष्ठ्यं वैहायसानामुत यद्विहारम् ।
अष्टाधिपत्यं गुणसन्निवाये सहैव गच्छेन्मनसेन्द्रियैश्च ॥ २३ ॥

योगेश्वराणां गतिमामनन्ति बहिस्त्रिलोक्याः पवनान्तरात्मा ।
न कर्मभिस्तां गतिमाप्नुवन्ति विद्यातपोयोगसमाधिभाजाम् ॥ २४ ॥

वैश्वानरं याति विहायसा गतः  सुषुम्नया ब्रह्मपथेन शोचिषा ।
विधूतकल्कोऽथ हरेरुदस्तात्प्रयाति चक्रं नृप शैंशुमारम् ॥ २५ ॥

योऽन्तः पचति भूतानां यस्तपत्यण्डमध्यगः ।
सोऽग्निर्वैश्वानरो मार्गो देवानां पितृणां मुनेः ॥ २६ ॥

देवयानं पिङ्गलाभिरहान्येति शतायुषा ।
रात्रीरिडाभिः पितॄणां विषुवत्तां सुषुम्नया ॥ २७ ॥

तद्विश्वनाभिं त्वभिपद्य विष्णोरणीयसा विरजेनात्मनैकम् ।
नमस्कृतं ब्रह्मविदामुपैति कल्पायुषो यद्विबुधा रमन्ते ॥ २८ ॥

अथो अनन्तस्य मुखानलेन दन्दह्यमानं स निरीक्ष्य विश्वम् ।
निर्याति सिद्धेश्वरजुष्टधिष्ण्यं यद्वैपराध्यं तदु पारमेष्ठ्यम् ॥ २९ ॥

न यत्र शोको न जरा न मृत्युर्नाधिर्न चोद्वेग ऋते कुतश्चित् ।
यश्चित्ततोदः क्रिययाऽनिदंविदां दुरन्तदुः खप्रभवानुदर्शनात् ॥ ३० ॥

ततो विशेषं प्रतिपद्य निर्भयस्तेनात्मनाऽपोऽनलमूधिर्न च त्वरन् ।
ज्योतिर्मयो वायुमुपेत्य काले वाय्वात्मना खं बृहदात्मलिङ्गम् ॥ ३१ ॥

## अथ द्वितीयोऽध्यायः

घ्राणेन गन्धं रसनेन वै रसं रूपं तु दृष्ट्या स्पर्शं त्वचैव ।
श्रोत्रेण चोपेत्य नभोगुणं तत्प्रायेण नावृत्तिमुपैति योगी ॥ ३२ ॥

स भूतसूक्ष्मेन्द्रियसन्निकर्षात्सनातनोऽसौ भगवाननादिः ।
मनोमयं देवमयं विकार्यं संसाद्य मत्या सह तेन याति ॥ ३३ ॥

विज्ञानतत्वं गुणसन्निरोधं तेनात्मनाऽऽत्मानमुपैति शान्तिम् ।
आनन्दमानन्दमयोऽवसाने सर्वात्मके ब्रह्मणि वासुदेवे ॥ ३४ ॥

एतां गतिं भागवतो गतो यः स वै पुनर्नेह विषज्जतेऽङ्ग ।
एते सृती ते नृप वेदगीते त्वयाऽभिपृष्टेऽथ सनातने च ॥
ये द्वे पुरा ब्रह्मण आह पृष्ठः आराधितो भगवान् वासुदेवः ॥ ३५ ॥

नह्यतोऽन्यः शिवः पन्थाः विश्रुतः संसृताविह ।
वासुदेवे भगवति भक्तियोगो यतो भवेत् ॥ ३६ ॥

भगवान् ब्रह्म कात्स्न्र्येन त्रिरन्वीक्ष्य मनीषया ।
तद्धि ह्यपश्यत्कूटस्थे रतिरात्मन् यतो भवेत् ॥ ३७ ॥

भगवान् सर्वभूतेषु लक्षितश्चात्मना हरिः ।
दृश्यैर्बुध्यादिभिर्द्रष्टा लक्षणैरनुमापकैः ॥ ३८ ॥

तस्मात्सर्वात्मना राजन् हरिः सर्वत्र सर्वदा ।
श्रोतव्यः कीर्तितव्यश्च स्मर्तव्यो भगवान्नृणाम् ॥ ३९ ॥

पिबन्ति ये भगवत आत्मनः सतां कथामृतं श्रवणपुटेषु सम्भृतम् ।
पुनन्ति ते विषयविदूषिताशयं व्रजन्ति तच्चरणसरोरुहान्तिकम् ॥ ४० ॥

**॥ इति श्रीमद्भागवते (द्वितीयस्कन्धे(*2) द्वितीयोऽध्यायः ॥**

**॥ ಎರಡನೆಯ ಅಧ್ಯಾಯ ॥**

## ಧಾರಣಾ ಯೋಗದ ವಿವರಣೆ

ಶ್ರೀಶುಕರು ಹೇಳುತ್ತಾರೆ:- ಹಿಂದೆ ಶ್ರೀಪರಮಾತ್ಮನ ಸ್ಥವೀಯ ಅಥವಾ ಸ್ಥವಿಷ್ಠ, ಸ್ಥೂಲ ಎಂದು

ಕರೆಯಲ್ಪಡುವ ಈ ಚತುರ್ದಶ ಲೋಕಗಳ ಸೃಷ್ಟಿಗೂ, ಆಶ್ರಯಕ್ಕೂ ಕಾರಣವಾದ ಶ್ರೀಪರಮಾತ್ಮನ ವಿರಾಡ್ರೂಪವನ್ನೂ, ಆತನ ಅಂಗಗಳಿಂದ ಉತ್ಪನ್ನರಾದ ದೇವತೆಗಳನ್ನೂ, ಬ್ರಹ್ಮಾಂಡಾಂತರ್ಗತ ನಿಖಿಲ ಲೋಕಗಳೆಂಬ ಜಗತ್ತನ್ನೂ ಧ್ಯಾನಮಾಡುವ ರೀತಿಯು ವರ್ಣಿಸಲ್ಪಟ್ಟಿತು. ಇನ್ನು ಮುಂದೆ ಯೋಗಿಗಳೂ ತಮ್ಮ ಹೃತ್ಸ್ಥಲದಲ್ಲಿ ಧ್ಯಾನಿಸುವ ಶ್ರೀಪರಮಾತ್ಮನ ಸೂಕ್ಷ್ಮರೂಪವನ್ನು ವರ್ಣಿಸುವೆನು.

ಧಾರಣಾಯೋಗವೆಂಬ ಈ ಅವಿಚ್ಛಿನ್ನ ಧ್ಯಾನಯೋಗವೇ ಸರ್ವವಿಶೇಷ ಮಹಿಮಾಜ್ಞಾನಕ್ಕೆ ಉತ್ಪತ್ತಿ ಕಾರಣವಾಗಿರುತ್ತದೆ. ಹಿಂದೆ ಯಾರಾದರೂ ಈ ಧಾರಣಾಯೋಗಮಾಡಿ ಏನಾದರೂ ಫಲವನ್ನು ಹೊಂದಿದ್ದಾರೆಯೋ? ಎಂದರೆ ಸೃಷ್ಟಿಯ ಆದಿಯಲ್ಲಿ ಶ್ರೀಪದ್ಮನಾಭದೇವರು ಚತುರ್ದಶದಳಾತ್ಮಕವಾದ ಹದಿನಾಲ್ಕು ಲೋಕಗಳನ್ನು ಒಳಗೊಂಡ ನಾಭಿಕಮಲದಲ್ಲಿ ಬ್ರಹ್ಮದೇವರನ್ನು ಸೃಷ್ಟಿಸಿದರು. ನಂತರ ಬ್ರಹ್ಮದೇವರಿಗೆ ಜಗತ್ಸೃಷ್ಟಿ ಮಾಡೆಂದು ದೇವರು ಹೇಳಿದರು. ಆವಾಗ ಬ್ರಹ್ಮದೇವರು ಮೊದಲು ಈ ವಿರಾಟ್ಪುರುಷನ ಸ್ಥವೀಯರೂಪವನ್ನು ಧಾರಣಾಯೋಗದಿಂದ ಧ್ಯಾನಿಸಿ ಆ ಮೂಲಕ ಹಿಂದಿನ ಬ್ರಹ್ಮಸೃಷ್ಟಿಯಲ್ಲಿ ಈ ಹದಿನಾಲ್ಕು ಲೋಕಗಳ ಸೃಷ್ಟಿ ಹೇಗಿತ್ತೋ ಅದನ್ನು ಆ ವಿರಾಟ್ಪು ರುಷನ ಅಂಗಾಂಗಗಳನ್ನು ಆಶ್ರಯಿಸಿರುವ ಹದಿನಾಲ್ಕು ಲೋಕಗಳನ್ನು ಸಾಕ್ಷಾತ್ತಾಗಿ ಪ್ರತ್ಯಕ್ಷೀಕರಿಸಿಕೊಂಡು ನೋಡಿ ತಿಳಿದರು. ಆದುದರಿಂದ ಧಾರಣಾ ಯೋಗವು ಬ್ರಹ್ಮದೇವರಿಗೂ ಅಮೋಘ ದೃಷ್ಟಿಯನ್ನುಂಟು ಮಾಡಿದ ಫಲವು ಕಂಡುಬಂದಿದೆ. ಆದ್ದರಿಂದ ಶಾಶ್ವತ ಸುಖಾಪೇಕ್ಷಿಗಳು ಧಾರಣಾಯೋಗದಲ್ಲಿ ವಿಶ್ವಾಸವಿಟ್ಟು ಆಚರಿಸುವುದು ಅಪೇಕ್ಷಿತ ಫಲವನ್ನು ಕೊಡುತ್ತದೆ- ವ್ಯರ್ಥವಾಗಲೀ ಸುಳ್ಳಾಗಲೀ ಆಗುವುದಿಲ್ಲ.

ಹಿಂದೆ ವರ್ಣಿತವಾದ ವಿರಾಡ್ರೂಪವು ವಾಙ್ಮನಸ್ಸಿಗೆ ಗೋಚರವಾದದ್ದಲ್ಲವಾದ್ದರಿಂದ ಆ ರೂಪವನ್ನು ಹೇಗೆ ಧ್ಯಾನ ಮಾಡಲಾಗುತ್ತೆ? ಎಂದರೆ, ಸತ್ಯವನ್ನೇ ಹೇಳತಕ್ಕ ವೇದಗಳಿಂದ ವರ್ಣಿಸಲ್ಪಟ್ಟ ಶಬ್ದಗಳು ಆ ವಿರಾಟ್ಪುರುಷನ ರೂಪವನ್ನು ಶ್ರವಣಮುಖವಾಗಿ ಅಂದರೆ ಮನೋ ಇಂದ್ರಿಯದಿಂದ ಈ ರೂಪವು ತಿಳಿಸಿಕೊಡುತ್ತದೆ. ಮನಸ್ಸಿನಿಂದ ಗ್ರಹಿಸಲ್ಪಟ್ಟ, ತಿಳಿಯಲ್ಪಟ್ಟ, ವಿರಾಟ್ಪು ರುಷನು ಸ್ವತಂತ್ರನೂ, ಬ್ರಹ್ಮಾದಿಸಕಲ ಜಗತ್ಸೃಷ್ಟಿಮಾಡಿದವನೂ, ಸರ್ವತ್ರವ್ಯಾಪ್ತನೂ, ಸರ್ವನಿಯಾಮಕನೂ, ಸರ್ವಗುಣಪೂರ್ಣನೂ, ಸ್ವಯಂಪ್ರಕಾಶನೂ, ಸರ್ವಜ್ಞಾನಪ್ರದನೂ ಆದುದರಿಂದಲೂ, ಸರ್ವರ ಹೃದಯದಲ್ಲೂ ವ್ಯಾಪಿಸಿ ಇರುವುದರಿಂದಲೂ, ಭಕ್ತರು ಧ್ಯಾನಮಾಡಲು ಪ್ರಯತ್ನಿಸಿದರೆ, ಅದಕ್ಕೆ ಪ್ರಸನ್ನನಾಗಿ ತಾನೇ ತನ್ನ ರೂಪವನ್ನು ತೋರಿಸಿ ಕೊಡುವನು. ಈ ರೀತಿ ದೇವರು ಧ್ಯಾನಿಸುವ ಭಕ್ತರಿಗೆ ದೃಷ್ಟಿವಿಷಯನಾಗುವನು. ಹಾಗಾದರೆ ಅನೇಕರಿಗೆ ಏಕೆ ಧ್ಯಾನಿಸುತ್ತೇನೆಂದು ಪ್ರಯತ್ನಿಸಿದರೂ ಗೋಚರನಾಗುವುದಿಲ್ಲ? ಎಂದರೆ, ಪರಮಾತ್ಮನ ಮಾಯಾಮೋಹಿತರಾದ ಜೀವರು

ಸಂಸಾರದಲ್ಲಿ ಮಗ್ನರಾಗಿ, ಕೇವಲ ಸುಖಾಸನ, ಅಶನ, ಪಾನ, ವಿಷಯಸುಖಾಪೇಕ್ಷೆ ಮೊದಲಾದ ಮನೋವಾಸನೆಗಳಿಂದ ಚಪಲರಾಗಿ ದೀನರಾಗುತ್ತಾರಾದ್ದರಿಂದ, ಈ ದುರ್ವಿಷಯಾಪೇಕ್ಷೆಗಳಿಂದ ಮನಸ್ಸನ್ನು ಕಶ್ಮಲವಾಗಿ ಮಾಡಿಕೊಳ್ಳುತ್ತಾರೆ. ಮನೋನೈರ್ಮಲ್ಯಕ್ಕೆ ಪ್ರಯತ್ನಿಸುವುದಿಲ್ಲ.

## ಜೀವನಕ್ಕಾಗಿ ವಿಶೇಷ ಪ್ರಯತ್ನ ಬೇಡ

ಮಶಿ ಬಳಿದ ಕನ್ನಡಿಯಲ್ಲಿ ಮುಖವು ಹೇಗೆ ಕಾಣುವುದಿಲ್ಲವೋ, ಹಾಗೆ ಕಲ್ಮಷ ಮನಸ್ಸಿಗೆ ದೇವರು ಕಾಣಿಸುವುದಿಲ್ಲ. ಈ ರೀತಿ ಉಪಾಸಕರು ಉನ್ಮಾದಸ್ಥಿತಿಯನ್ನು ಹೊಂದದೆ, ಸರ್ವೈಶ್ವರ್ಯಮಯನೂ, ಪೂರ್ಣಜ್ಞಾನ, ಸುಖ ಆನಂದಮಯನೂ ಆದ ಶ್ರೀಹರಿಯ ಕಡೆಗೇ ತನ್ನ ಮನಸ್ಸನ್ನೂ ಇಂದ್ರಿಯಗಳನ್ನೂ ತಿರುಗಿಸಿ, ಹರಿವಿಷಯ ಉಪಾಸನೆಯನ್ನು ನಿರಂತರ ಮಾಡಲುಪಕ್ರಮಿಸಿದರೆ, ಅವನ ಮಸಿ ಬಳಿದಂತಿದ್ದ ಮನಸ್ಸು ಮಶಿಯಿಂದ ಬಿಡಲ್ಪಟ್ಟು ನಿರ್ಮಲವಾಗುತ್ತದೆ. ಆ ನಿರ್ಮಲ ಮನಸ್ಸಿಗೆ ದೇವರು ದೃಷ್ಟಿವಿಷಯನಾಗುತ್ತಾರೆ. ಹರಿ ಉಪಾಸನೆಯೇ ಸರ್ವಸುಖಪ್ರದವು. ಇತರ ವಸ್ತುಗಳನ್ನು ಅಪೇಕ್ಷಿಸಿ, ಇಂದ್ರಾದಿ ದೇವತೆಗಳನ್ನು ಉಪಾಸಿಸುವುದರಿಂದ, ಆ ಇಂದ್ರಾದಿಗಳಲ್ಲಿದ್ದ ದೇವರು ಕ್ಷಣಿಕ ಅಪೇಕ್ಷಿತ ಸುಖಗಳನ್ನು ಕೊಡುವನು. ನಂತರ ಉಪಾಸಕನಿಗೆ ದುಃಖಗಳೇ ಪ್ರಾಪ್ತವಾಗುತ್ತವೆ. ಆದುದರಿಂದ ಹರಿಯನ್ಯತ್ರ ವಿಷಯಗಳಿಂದ ಉಪಾಸಕನು ವಿಮುಖನಾಗಬೇಕು.

ಸಾಧಕನಿಗೆ ಹೊರಗಿನ ವಸ್ತುಗಳು ಸುಖ ಸಾಧನೆಗೆ ಬೇಕಾಗಿಲ್ಲ. ವಿಶಾಲವಾದ ರಮ್ಯವಾದ ಭೂಮಿಯು ಇರುವಾಗ, ಸುಪ್ಪತ್ತಿಗೆಯು ಮಲಗುವುದಕ್ಕೆ ಏಕೆ ಬೇಕು? ಎರಡು ಹಸ್ತಗಳಿರುವಾಗ ಪಾತ್ರೆಗಳಾಗಲೀ, ವಿಶಾಲವಾದ ಎಲೆಯಾಗಲೀ ಭೋಜನಕ್ಕಾಗಿ ಏಕೆ ಬೇಕು? ದಿಗ್ವಸ್ತ್ರಗಳಿರುವಾಗ ಉಡಲು ಪೀತಾಂಬರಗಳು, ಶ್ರಮಪಟ್ಟು ದ್ರವ್ಯಾರ್ಜನೆಯಿಂದ ಸಂಪಾದಿಸಲ್ಪಡಬೇಕೆ? ವಾಸಮಾಡಲು ಯಾವಾಗಲೂ ಬಾಗಿಲು ತೆರೆದ ಬೆಟ್ಟದಗುಹೆಗಳಿರುವಾಗ, ಮನೆಗೆ ಬಂದರೆ ಬಾಗಿಲು ಹಾಕತಕ್ಕ ಗೃಹಗಳ ಅಪೇಕ್ಷೆ ಏಕೆ?

ಸರ್ವತ್ರ ಸರ್ವಕಾಲದಲ್ಲಿ ಸರ್ವರನ್ನೂ ಕೇಳಿಸಿಕೊಳ್ಳದೆ ತಾನಾಗಿಯೇ ಆಹಾರಾದಿ ಸರ್ವಪದಾರ್ಥಗಳನ್ನೂ ಕೊಟ್ಟು ಸಂರಕ್ಷಿಸುವ ಈ ಜಗತ್ತಿಗೇ ಧೊರೆಯಾದ ಶ್ರೀಕೃಷ್ಣನಿರುವಾಗ, ಮದಾಂಧರೂ, ಕ್ರೂರರೂ, ಕೋಪಿಷ್ಠರೂ, ದಯಾಶೂನ್ಯರೂ, ಪಾಪಿಗಳು ಆದ ಧನವಂತರನ್ನು ಏಕೆ ಆಶ್ರಯ ಮಾಡಬೇಕು? ಆಹಾರಾದಿಗಳನ್ನು ಕೊಡುವವನು ಶ್ರೀಹರಿ ಎಂಬ ನಂಬಿಕೆ ಹುಟ್ಟದಿದ್ದರೆ, ಲೋಕದಲ್ಲಿ ಹಣ್ಣು ಎಲೆಗಳುಳ್ಳ ವೃಕ್ಷಗಳು ಕಾಡಿನಲ್ಲಿಲ್ಲವೇನು? ಅವುಗಳ ಫಲ, ಪತ್ರಗಳನ್ನು ತಿಂದು

## अथ द्वितीयोऽध्यायः

ಬದುಕಲಾಗುದಿಲ್ಲವೇನು? ನೀರಡಿಕೆಯಾದರೆ ನಿರಂತರ ಹರಿದು ಅಮೃತಸದೃಶಗಳಾದ ನೀರನ್ನು ಸಮೃದ್ಧಿಯಾಗಿ ಕೊಡುವ ನದಿಗಳು ಒಣಗಿ ಹೋಗಿವೆಯೇನು? ಆದುದರಿಂದ ಅನ್ಯರನ್ನು ಆಶ್ರಯಿಸದೇ ಶ್ರಮಪಡದೇ ಸುಖಜೀವನ ಶ್ರೇಯಸ್ಸುಗಳನ್ನು ಹೊಂದಲು ಸಾಧಕಗಳಾಗಿರುವ ಈ ಎಲ್ಲವನ್ನೂ ಬೇಡಿಸಿಕೊಳ್ಳದೇ ಕೊಟ್ಟಿರುವ ಶ್ರೀಪರಮಾತ್ಮನನ್ನು ಏನುಕಾರಣ ಜನರು ಆಶ್ರಯಿಸದೇ ಬಿಟ್ಟಾರು? ಬಿಟ್ಟವರು ನಿರ್ಭಾಗ್ಯರೇ ಸರಿ.

ಈ ರೀತಿ ತನ್ನಷ್ಟಕ್ಕೆ ತಾನೇ ಭಗವದಿಚ್ಛೆಯಿಂದ, ಅಪ್ರಯತ್ನದಿಂದ ಸಿಕ್ಕಿದ ಆಹಾರ, ಪಾನ, ಶಯನಾದಿ ನಿಯತಜೀವನ ಸಾಧನೋಪಾಯಗಳಿಂದಲೇ ತೃಪ್ತನಾದ ಸಾಧಕನು ಶ್ರೀಪರಮಾತ್ಮನನ್ನು ಆರಾಧಿಸಬೇಕು. ಪರಮಾತ್ಮನ ಆರಾಧನೆಯನ್ನು ಬಿಡದೇ ಯಾವಾಗಲೂ ಮಾಡುತ್ತಿರಬೇಕು. ಆದುದರಿಂದ ಸರ್ವತ್ರದಲ್ಲಿಯೂ ಸತ್ಯಸ್ವರೂಪನೂ ಆನಂದಸಮುದ್ರನೂ ಆದ ಆತ್ಮಶಬ್ದವಾಚ್ಯ ಶ್ರೀಹರಿಯನ್ನು ಆಶ್ರಯಿಸಿ ಆರಾಧಿಸಬೇಕು. ಪರಮಾತ್ಮನನ್ನು ಉಪೇಕ್ಷಿಸಿ ದುಃಖಪ್ರದಗಳಾದ ಕೇವಲ ಜೀವನ, ವಿಷಯ ಭೋಗಗಳ ಅಪೇಕ್ಷೆಯಿಂದ ದುಷ್ಟಕರ್ಮಗಳಲ್ಲೇ ಮನಸ್ಸಿಟ್ಟವರು ಸಂಸಾರವೆಂಬ ಕಶ್ಮಲ ವೈತರಣೀಯಲ್ಲಿ ಬಿದ್ದು ತಮ್ಮ ಕರ್ಮಕ್ಕೆ ಯೋಗ್ಯವಾದ ಅತ್ಯಂತ ದುಃಖಾನುಭವವನ್ನೇ ಹೊಂದುವರು. ಈ ರೀತಿಯಿಂದ, ದುಃಖನಿವೃತ್ತಿಗಾಗಿ ದೇವರನ್ನೇ ಆಶ್ರಯಿಸಬೇಕು.

### ಶ್ರೀಹರಿಯ ಸೂಕ್ಷ್ಮರೂಪ ವಿವರಣೆ

ಯೋಗ್ಯತಾ ತಾರತಮ್ಯಾನುಸಾರ ಪರಮಾತ್ಮನ ಸ್ಥೂಲ, ವಿರಾಡ್ರೂಪವನ್ನು ಧ್ಯಾನಿಸಿ ಧಾರಣಾದಿಗಳನ್ನುಕೆಲವರುಮಾಡಿ,ನಂತರತಮ್ಮದೇಹದಲ್ಲಿಹೃದಯಕಮಲದಲ್ಲಿಪ್ರಾದೇಶನಾಮಕನಾಗಿ ಪ್ರಕಾಶಿಸುತ್ತಿರುವ, ಚತುರ್ಭುಜನೂ, ಕಮಲ, ರಥಾಂಗವೆಂಬ ಚಕ್ರವನ್ನೂ, ಶಂಖ, ಗದೆಗಳನ್ನೂ ನಾಲ್ಕು ಕೈಗಳಲ್ಲಿ ಧರಿಸಿ, ಪ್ರಸನ್ನಮುಖನೂ, ಕಮಲದಳನಯನನೂ, ಕೆಂಪುಮಿಶ್ರಿತ ಪೀತಾಂಬರಧಾರಿಯೂ, ಶ್ರೇಷ್ಠಗಳಾದ ಸ್ವರ್ಣರತ್ನಖಚಿತ ಹಾರಗಳಿಂದಲೂ, ಹೊಳೆಯುವ ದಿವ್ಯರತ್ನಖಚಿತ ಕಿರೀಟದಿಂದಲೂ, ಕುಂಡಲಗಳಿಂದಲೂ ಅಲಂಕೃತನಾಗಿ ಸನಕಾದಿಯೋಗಿಗಳ ಹೃದಯಕಮಲದ ಕರ್ಣಿಕೆಯ ಮೇಲೆ ಇಟ್ಟಿರುವ ಪಾದಕಮಲಗಳುಳ್ಳವನಂತೆಯೇ ನಮ್ಮ ಹೃತ್ಸ್ಥಲದಲ್ಲೂ ಪ್ರಕಾಶಿಸುತ್ತಾ, ಶ್ರೀವತ್ಸವೆಂಬ ಲಕ್ಷ್ಮ್ಯಂಕಿತ ಚಿಹ್ನೆಯಿಂದಲೂ, ಕೌಸ್ತುಭಮಣಿಗೆ ಅಲಂಕಾರವನ್ನು ಕೊಡುವಂತಹ ಕಂಠದಿಂದಲೂ, ಕುಂದದೇ ಘಮಘಮಿಸುವ ಲಕ್ಷ್ಮ್ಯಾತ್ಮಕ ವನಮಾಲೆಯಿಂದಲೂ, ಕಾಂಚೀಧಾಮವೆಂಬ ಉಡಿದಾರ, ಅನರ್ಘ್ಯರತ್ನದುಂಗುರಗಳೂ, ಪಾದಾಭರಣಗಳನ್ನೂ ಧರಿಸಿ, ಕಪ್ಪಾದ ಮನೋಹರಗಳಾದ ಸಹಸ್ರಾರು

ಗುಂಗುರು, ಸುಳಿಗುರುಳುಗಳಿಂದ ಶೋಭಾಯಮಾನವಾದ, ಅರಳಿದ ಕೆಂದಾವರೆಯಂತೆ ನಗುನಗುವ ಮುಖಾರವಿಂದದಿಂದ, ಪರಮಸುಂದರಮೂರ್ತಿಯಾದ, ಆ ಪ್ರಾದೇಶನಾಮಕ ಹೃದ್ಗತಮೂರ್ತಿಯನ್ನು ಧ್ಯಾನಿಸತಕ್ಕದ್ದು.

ಈ ಪರಮಾತ್ಮನ ಭಂಗ ಎಂದರೆ ಹುಬ್ಬಿನ ಸ್ವಲ್ಪ ಮಾತ್ರ ಚಲನೆಯು ದೇವೋತ್ತಮರಾದ ಬ್ರಹ್ಮಾದಿಗಳಿಗೂ ಅವರವರ ಶ್ರೇಷ್ಠಪದವಿಯನ್ನು ಕೊಡತಕ್ಕದ್ದು. ಆದುದರಿಂದ ಶ್ರೀಹರಿಯ ಭಂಗವು ಅವನ ಅನುಗ್ರಹವನ್ನು ಸೂಚಿಸತಕ್ಕದ್ದು. ಈ ರೀತಿಯಲ್ಲಿರುವ ಸ್ವಹೃತ್ಸ್ಥಲನಿವಾಸಿಯಾದ ಪರಮಾತ್ಮನನ್ನು ಪರಮಭಕ್ತಿಯಿಂದಧ್ಯಾನಿಸಿ, ಒಂದೊಂದವಯವಗಳನ್ನೇ ಪ್ರತ್ಯಕ್ಷೀಕರಿಸಿಕೊಂಡು, ಚಿಂತಿಸುತ್ತಾ, ಕ್ರಮೇಣ ಸರ್ವಾವಯವಗಳನ್ನೂ ಪ್ರತ್ಯಕ್ಷೀಕರಿಸಿಕೊಂಡು, ಎಷ್ಟುಕಾಲ ಮನಸ್ಸಿನಲ್ಲಿ ಒಟ್ಟಿಗೆ ಪೂರ್ಣರೂಪವನ್ನು ನೋಡಿ ಧ್ಯಾನಿಸಲು ಸಾಧ್ಯವೋ ಅಷ್ಟು ಕಾಲವೂ ಬಿಡದೆ ಧ್ಯಾನಿಸಿ ಅಭ್ಯಾಸ ಮಾಡಿಕೊಳ್ಳತಕ್ಕದ್ದು. ಈ ರೀತಿ ಪೂರ್ತಿಯಾಗಿ ಮನಃಶುದ್ಧಿಯಾಗಿ, ಪ್ರಯತ್ನವಿಲ್ಲದೇ ಭಕ್ತಿಯೋಗದಿಂದ ಈ ರೂಪದರ್ಶನ ಪ್ರಾಪ್ತಿಯಾಗುವತನಕ ಪ್ರಯತ್ನಪೂರ್ವಕ ಧ್ಯಾನಿಸತಕ್ಕದ್ದು. ಪುನಃ ಪರಮಾತ್ಮನ ವಿರಾಡ್ರೂಪವನ್ನೂ ಈ ಸೂಕ್ಷ್ಮರೂಪವನ್ನೂ ಧ್ಯಾನಿಸತಕ್ಕದ್ದು. ಪುನಃ ಪರಮಾತ್ಮನ ವಿರಾಡ್ರೂಪವನ್ನೂ ಈ ಸೂಕ್ಷ್ಮರೂಪಧ್ಯಾನಾನಂತರ ಬಿಡದೇ ಕ್ರಮವಾಗಿ ಮಾಡತಕ್ಕದ್ದು. ಇದೇ ಧಾರಣಾಯೋಗವು.

## ಉತ್ಕ್ರಾಂತಿಮಾರ್ಗ ಮತ್ತು ಗತಿ

ಈ ಯೋಗವು ಪ್ರಾಪ್ತವಾದ ನಂತರ ಸಾಧಕನಿಗೆ ಈ ಯೋಗದ ಪ್ರಭಾವದಿಂದ ತನಗೆ ಅಂತ್ಯಕಾಲವು ಯಾವಾಗ ಪ್ರಾಪ್ತವಾಗುವುದೆಂಬುದು ಗೊತ್ತಾಗುವುದು. ಆ ಕಾಲವು ಸಮೀಪವಾದಾಗ, ಸ್ನಾನಾದಿಗಳನ್ನು ಮಾಡಿ, ಶುದ್ಧವಸ್ತ್ರಗಳನ್ನು ಧರಿಸಿ, ಕೃಷ್ಣಾಜಿನಾದಿಗಳನ್ನು ಹಾಕಿಕೊಂಡು ಅದರ ಮೇಲೆ ಸುಖಾಸೀನನಾಗಿ ಕುಳಿತುಕೊಳ್ಳತಕ್ಕದ್ದು. ನಂತರ ಮನಸ್ಸನ್ನು ಸ್ಥಿರವಾಗಿ ವಶಮಾಡಿಕೊಂಡು, ಪ್ರಸನ್ನ ಇಂದ್ರಿಯ, ಮನಸ್ಸುಳ್ಳವನಾಗಿ, ಶ್ವಾಸನಿರೋಧದಿಂದ, ಸುಷುಮ್ನಾನಾಡಿಯಲ್ಲಿರುವ ಉದಾನವಾಯುವಿನ ಸಹಿತನಾಗಿ, ಹೃತ್ಕಮಲದಲ್ಲಿರುವ ಪ್ರಾದೇಶನಾಮಕ ಸೂಕ್ಷ್ಮರೂಪವನ್ನು, ಹಿಂದೆ ವರ್ಣಿಸಿದಂತೆ ಧ್ಯಾನಿಸಿ, ಪ್ರತ್ಯಕ್ಷೀಕರಿಸಿಕೊಳ್ಳಬೇಕು.

ನಂತರ ಕ್ರಮೇಣ, ಹೃದಯದಿಂದ, ಎದೆ, ಕಂಠಗಳಲ್ಲಿರುವ ಕಮಲಗಳಿಗೆ ದೇವರನ್ನು ತಂದು ಅಲ್ಲಲ್ಲಿ ಆರಾಧಿಸಿ, ನಂತರ ಭ್ರೂಮಧ್ಯದಲ್ಲಿರುವ ಎರಡು ದಳ ಕಮಲಕ್ಕೆ ತರಬೇಕು. ಇಲ್ಲೇ ಸೂರ್ಯಮಂಡಲವಿರುವ ಸ್ಥಳ. ಗರುಡಶೇಷರು ಸಂಕರುಷಾಣಾಖ್ಯ ಶ್ರೀಕೃಷ್ಣರೂಪವನ್ನು ಇಲ್ಲಿ ಆರಾಧಿ

ಸುತ್ತಾ ಆ ಭ್ರೂಮಧ್ಯಕಮಲಕ್ಕೆ ಅಭಿಮಾನಿಗಳಾಗಿರುತ್ತಾರೆ. ಇದಕ್ಕೆ ಆಜ್ಞಾಚಕ್ರವೆಂದೂ ಹೆಸರು. ನಂತರ ಮಹಾಜ್ಞಾನಿಗಳಾದವರು ಈ ಭ್ರೂಮಧ್ಯದಿಂದ ಮೇಲಕ್ಕೆ ದೇವರನ್ನು ಕರೆದುಕೊಂಡು ಬ್ರಹ್ಮರಂಧ್ರವೆಂಬ ನೆತ್ತಿಯದ್ವಾರವನ್ನು ಭೇದಿಸಿ ಪ್ರಕಾಶರೂಪದಿಂದ, ಸಹಸ್ರಾರವೆಂಬ, ಶಿರಸ್ಸಿನ ಮೇಲಿರುವ ಕಮಲದಲ್ಲಿ ಬ್ರಹ್ಮವಾಯ್ವಾದಿ ಸಮಸ್ತದೇವತೆಗಳಿಂದ ಆರಾಧಿತನಾದ ಶ್ರೀವಾಸುದೇವಮೂರ್ತಿಯನ್ನೇ ಹೊಂದುವರು.

ನಂತರ ಈ ವಾಸುದೇವಮೂರ್ತಿಯಿಂದ ಸಹಿತರಾಗಿ, ಅವನ ಪ್ರಸಾದದಿಂದ, ವೈಕುಂಠದ ಅಮುಕ್ತಸ್ಥಾನಕ್ಕೆ, ಶ್ವೇತದ್ವೀಪ, ಅನಂತಾಸನಗಳ ದರ್ಶನಮಾಡಿ, ಮಹರಾದಿ ಸತ್ಯಲೋಕಪರ್ಯಂತ ಊರ್ಧ್ವಲೋಕಗಳ ಮೂಲಕ ಹೋಗಿ, ಮುಕ್ತಸದೃಶರಾಗಿ, ಅತ್ಯಂತ ಸುಖದಿಂದ, ದುಃಖರಹಿತರಾಗಿ, ಬ್ರಹ್ಮದೇವರು ವಿರಜಾಸ್ನಾನಕ್ಕೆ ಮುಕ್ತಿಯೋಗ್ಯ ಜೀವಸಹಿತವಾಗಿ ಬರುವತನಕ ಕಾದಿಕೊಂಡಿರುವರು. ಬ್ರಹ್ಮದೇವರಿಗೆ ೮೭೪ ವರುಷ ಆದನಂತರ ಕಲ್ಪಾಂತ ಮಹಾಪ್ರಳಯವು ಉಂಟಾಗುವಾಗ, ಬ್ರಹ್ಮದೇವರು ವಿರಜಾಸ್ನಾನಕ್ಕೆ ಬರುವರು. ಆವಾಗ ಇವರೂ ಅವರೊಡನೆ ವಿರಜಾನದೀ ಸ್ನಾನಮಾಡಿ, ಅನಾದಿಯಿಂದ ತಮಗೆ ಸಂಬಂಧಹೊಂದಿದ್ದ ಲಿಂಗದೇಹದಿಂದ ಬಿಡಲ್ಪಟ್ಟವರಾಗಿ, ಶುದ್ಧಸ್ವರೂಪದೇಹದಿಂದ ಬೆಳಗುವರು. ನಂತರ ಶ್ರೀಹರಿಯ ದರ್ಶನ, ಆಜ್ಞೆಯಿಂದ ತಮಗೆ ತಮಗೆ ಯೋಗ್ಯವಾದ ಮೋಕ್ಷಸ್ಥಳಗಳನ್ನು ಹೊಂದಿ ಶಾಶ್ವತಸ್ವರೂಪಸುಖವನ್ನು ಪಡೆಯುವರು. ಈ ಸ್ಥಿತಿಯೇ ಮೋಕ್ಷವೆನಿಸುವುದು. ಇದಕ್ಕೇ ಬ್ರಹ್ಮನಾಡ್ಯುತ್ಕ್ರಮಣ ಅಥವ ವಿಷುವನ್ಮಾರ್ಗವೆಂದು ಹೆಸರು.

ಬ್ರಹ್ಮನಾಡಿ ಉತ್ಕ್ರಾಂತಿಮಾರ್ಗದಿಂದ ದೇಹತ್ಯಾಗ ಮಾಡುವವನು ದೇವತೆಯಾಗಿದ್ದರೆ, ದೇವತೆಗಳಿಗೆ ಸ್ವೋತ್ತಮರಲ್ಲಿ ಲಯವಾಗುವ ಕ್ರಮದಿಂದ, ಲಯ ಚಿಂತನೆ ಮಾಡುವ ರೀತಿಯನ್ನೂ ವಿವರಿಸುತ್ತಾರೆ. ಉಪಾಸಕನಿಗೆ ಮೊದಲು ಸ್ವಗುರುವಿನಲ್ಲಿ ಲಯ, ನಂತರ ಮನೋಭಿಮಾನಿ ಚಂದ್ರನಲ್ಲಿ ಲಯ. ಚಂದ್ರನು ಬುಧ್ಯಾತ್ಮಕಳಾದ ಉಮಾದೇವಿಯಲ್ಲಿಯೂ, ಉಮಾದೇವಿಯು ಕ್ಷೇತ್ರಜ್ಞನಾಮಕ, ಸ್ವದೇಹಸ್ಥಿತ ಬಿಂಬನಲ್ಲಿಯೂ, ಬಿಂಬನು ಸರ್ವತ್ರವ್ಯಾಪ್ತ ಬಹಿಸ್ಥಿತ ಪರಮಾತ್ಮನಲ್ಲಿಯೂ ಲಯವನ್ನು ಹೊಂದುತ್ತಾರೆಂದು ಚಿಂತಿಸಿ, ನಂತರ ಪ್ರಾದೇಶನನ್ನು ಊರ್ಧ್ವಗತಿಗೆ ಉದಾನಮಾರ್ಗದಿಂದ ತಂದು ಶಿರಸ್ಸಿನ ಬ್ರಹ್ಮರಂಧ್ರದ್ವಾರ ದೇಹತ್ಯಾಗ ಮಾಡುತ್ತಾರೆ. ಇದು ಮಹಾಜ್ಞಾನಿಗಳಾದ ದೇವತೆಗಳಿಗೆ ಸಾಧ್ಯವು. ಇಂತವರು ಹೊಂದುವ ಲೋಕವು, ಲೋಕಾಧಿಪತಿಗಳಾದ ರುದ್ರ, ಶೇಷ, ವಾಯು, ಬ್ರಹ್ಮದೇವರೇ ಮೊದಲಾದವರೂ ಆಶ್ರಯಸ್ಥಾನವನ್ನಾಗಿ ಅಪೇಕ್ಷಿಸತಕ್ಕ, ಸಾಕ್ಷಾತ್ ವಿಷ್ಣುವಿನ ಲೋಕವು. ಅಲ್ಲಿ ಸರ್ವರೂ ವಿಷ್ಣುವಿನ ಅಧೀನರು. ಸ್ವಯಂ ಪ್ರಕಾಶರು. ಲೋಕವೂ ಸ್ವಯಂ ಪ್ರಕಾಶವಾದದ್ದು.

## ಅಥ ದ್ವಿತೀಯೋऽಧ್ಯಾಯಃ

ಸತ್ವರಜಸ್ತಮಾದಿ ಪ್ರಾಕೃತ ಗುಣದೋಷಗಳಿಂದ ಮುಟ್ಟಲಾಗದಂತಹ ನಿರ್ದೋಷ ಸ್ವಭಾವವುಳ್ಳದ್ದು. ನಿರತಿಶಯ ಜ್ಞಾನ, ಸುಖ, ಶಾಂತಿ, ಆನಂದ ಪೂರ್ಣವಾದದ್ದು. ಜರಾಮರಣಾದಿಗಳಿಲ್ಲದೆ ನಿತ್ಯಯೌವ್ವನಪ್ರದವಾದದ್ದು. ಇದೇ ಪರಮಪದವೆಂಬ ಮುಕ್ತಿಸ್ಥಾನವು. ಇದು ಯೋಗೇಶ್ವರರ ಅಪ್ರತೀಕಾಲಂಬನರ ಉತ್ಕ್ರಾಂತಿಮಾರ್ಗವು.

ವಿದ್ಯಾ, ತಪಸ್ಸು, ಯೋಗಗಳಿಂದ ಕೂಡಿದ ಕರ್ಮಯೋಗಿಗಳಿಗೆ ಈ ಉತ್ಕ್ರಾಂತಿಮಾರ್ಗವೂ, ಈ ಪರಮಪದವು ಪ್ರಾಪ್ತವಲ್ಲ. ಹಾಗಾದರೆ, ಅವರ ಉತ್ಕ್ರಾಂತಿಮಾರ್ಗವೂ, ಪ್ರಾಪ್ತವ್ಯಲೋಕವೂ ಯಾವುದೆಂದರೆ ಹೇಳುತ್ತಾರೆ-

ಮಹಾಜ್ಞಾನಿಗಳಾದ ಭಕ್ತಿಯೋಗಿಗಳಿಂದ ಇತರರಾದ, ಕರ್ಮಯೋಗಿಗಳಿಗೆ ಅಂದರೆ ಪ್ರತೀಕಾಲಂಬನರಿಗೆ, ದೇವಯಾನ, ಪಿತೃಯಾನ, ಬ್ರಹ್ಮನಾಡೀದ್ವಾರಗಳೆಂಬ ಮೂರು ವಿಧ ಉತ್ಕ್ರಾಂತಿಮಾರ್ಗವು ಇವೆ. ಅದರಲ್ಲಿ ಸುಷುಮ್ನಾ ಎಂಬ ಬ್ರಹ್ಮನಾಡಿಯಿಂದ ಉತ್ಕ್ರಾಂತಿಯೋಗ್ಯರಾದ ಜ್ಞಾನಕರ್ಮವನ್ನಾಚರಿಸಿದವರು, ಅಹಸ್ಸಿಗೆ ಅಭಿಮಾನಿಯಾದ ಸೂರ್ಯನ ರಶ್ಮಿಗಳ ದ್ವಾರಾ, ಈ ಶರೀರದಲ್ಲಿ ಆಹಾರಪಚನೆಯನ್ನೂ, ಬ್ರಹ್ಮಾಂಡದಲ್ಲಿ ಸೂರ್ಯನಲ್ಲಿದ್ದು ತಪನ ಅಂದರೆ ಉಷ್ಣವನ್ನೂ, ಉಂಟುಮಾಡುವ ಯಾವ ಪ್ರಧಾನಾಗ್ನಿನಾಮಕ ವೈಶ್ವಾನರನು ಇರುತ್ತಾನೆಯೋ ಆ ಲೋಕಕ್ಕೆ ಹೋಗಿ, ಅಲ್ಲಿ ತಮ್ಮ ಎಲ್ಲಾ ಪಾಪಗಳನ್ನೂ ನಾಶಮಾಡಿಕೊಂಡು, ನಂತರ ದ್ಯುಲೋಕದಲ್ಲಿರುವ ಶಿಂಶುಮಾರ ಚಕ್ರವನ್ನು ಪ್ರವೇಶಿಸುವರು.

ಅಲ್ಲಿಂದ ಯೋಗ್ಯತಾನುಸಾರವಾಗಿ, ಮಹರಾದಿ ಸತ್ಯಲೋಕಗಳಲ್ಲಿಯಾದರೂ ಅಥವ ವೈಕುಂಠದ ಅಮುಕ್ತ ಸ್ಥಾನದಲ್ಲಿಯಾದರೂ, ವಿಶೇಷಜ್ಞಾನವನ್ನು ಪಡೆಯುತ್ತಾ, ತಪಸ್ಸು ಮಾಡುತ್ತಿರುವರು. ದೇವಯಾನವೆಂಬುದು, ದೇಹದ ಬಲಭಾಗದಲ್ಲಿರುವ ಪಿಂಗಳಾನಾಮಕ ಪ್ರಖ್ಯಾತ ನೂರು ಶಾಖೆಗಳುಳ್ಳ ನಾಡಿಗಳ ದ್ವಾರ ಉತ್ಕ್ರಾಂತಿ ಹೊಂದುವ ಪಿಂಗಳಾನಾಡೀ ಮಾರ್ಗವು. ಇವರು ಮೊದಲು ವೈಶ್ವಾನರ ಲೋಕಕ್ಕೆ ಹೋಗಿ, ಅಲ್ಲಿಂದ ಶಿಂಶುಮಾರ ಚಕ್ರಕ್ಕೂ, ಶಿಂಶುಮಾರ ಚಕ್ರದಿಂದ, ಸ್ವರ್ಗಲೋಕವನ್ನೂ ದಾಟಿ ಕೆಲವರು ತಪೋಲೋಕ, ಕೆಲವರು ಸತ್ಯಲೋಕಗಳಲ್ಲಿ ಅಣಿಮಾದಿ ಅಷ್ಟೈಶ್ವರ್ಯದಿಂದ ಕೂಡಿದವರಾಗಿ, ಬ್ರಹ್ಮಕಲ್ಪದವರಿಗೂ ಆಯಸ್ಸುಳ್ಳವರಾಗಿ, ಸಾಧನವಿಶೇಷಗಳನ್ನು ಮಾಡಿಕೊಳ್ಳುತ್ತಾ, ವಿರಜಾಸ್ನಾನಕಾಲ ಪರ್ಯಂತ ವಾಸಿಸುವರು.

ದೇಹದ ಎಡಭಾಗದಲ್ಲಿರುವ ಇಡಾನಾಡಿಗಳಿಂದ ಉತ್ಕ್ರಾಂತಿಯು ಪಿತೃಯಾನವೆಂದು

ಕರೆಯಲ್ಪಡುವುದು. ಈ ಪಿತೃಯಾನದಿಂದ ಪ್ರಯಾಣ ಮಾಡಲು ಯೋಗ್ಯರಾದ ಅಪಕ್ವಯೋಗಿಗಳು, ರಾತ್ರಿ ಅಭಿಮಾನಿ ಚಂದ್ರನನ್ನು ಹೊಂದಿ, ಚಂದ್ರರಶ್ಮಿಗಳ ದ್ವಾರಾ, ವೈಶ್ವಾನರ ಲೋಕಕ್ಕೆ ಬಂದು, ಅಲ್ಲಿ ತಮ್ಮ ಸರ್ವಪಾಪಗಳನ್ನೂ ಕಳೆದುಕೊಂಡು, ನಂತರ ಕೆಲವರು ಭುವರ್ಲೋಕದಲ್ಲೂ, ಕೆಲವರು ಸ್ವರ್ಗಲೋಕದಲ್ಲೂ, ಒಂದು ಮನುಕಲ್ಪ ಆಯಸ್ಸುಳ್ಳವರಾಗಿ ತಮ್ಮ ಕರ್ಮಫಲವಾದ ಸುಖಗಳನ್ನನುಭವಿಸಿ ನಂತರ, ಪುನಃ ಸಾಧನಾಪೂರ್ತಿ ಮಾಡಿಕೊಳ್ಳುವುದಕ್ಕಾಗಿ, ಈ ಭೂಲೋಕದಲ್ಲೇ ಹುಟ್ಟುವರು. ಇದು ಪಿತೃಯಾನ. ವಿಷುವನ್ಮಾರ್ಗವೆಂಬ ದೇವಯಾನ ಅಥವ ಅರ್ಚಿರಾದಿ ಮಾರ್ಗದಲ್ಲಿ ಉತ್ಕ್ರಮಣ ಹೊಂದಿ ಬ್ರಹ್ಮನಾಡೀದ್ವಾರ ದೇಹತ್ಯಾಗ ಮಾಡಿದವರು ಮಾತ್ರ ಸತ್ಯಲೋಕವನ್ನೂ ದಾಟಿ, ಕೆಲವರು ಶ್ವೇತದ್ವೀಪದ ಸಮೀಪದಲ್ಲೂ, ಕೆಲವರು ಅನಂತಾಸನದ ಸಮೀಪದಲ್ಲೂ, ಕೆಲವರು ವೈಕುಂಠ ಅಮುಕ್ತಸ್ಥಾನದಲ್ಲೂ ವಿರಜಾನದೀ ಸ್ನಾನಮಾಡಿ ಲಿಂಗಭಂಗ ಹೊಂದುವುದಕ್ಕಾಗಿ, ಬ್ರಹ್ಮದೇವರನ್ನು ನಿರೀಕ್ಷಿಸುತ್ತಾ ದೇವರ ಉಪಾಸನೆ ಮಾಡುತ್ತಾ ಕಾದಿರುವರು.

ಈ ರೀತಿಯಾಗಿ ತಮ್ಮ ತಮ್ಮ ಬಿಂಬದ್ವಾರಾ ಪರಮಾತ್ಮನಲ್ಲಿ ಪ್ರವಿಷ್ಟರಾದವರಿಗೆ ಪುನರ್ಜನ್ಮಾದಿಗಳಿಲ್ಲ. ಯಾವ ಭಕ್ತರು ಭಗವಂತನಾದ ಶ್ರೀವಾಸುದೇವನ ಚರಣಾರವಿಂದದಲ್ಲಿ ಏಕಾಂತಭಕ್ತಿ ಮಾಡುವರೋ, ಅಂತಹ ಬ್ರಹ್ಮಾದಿ ದೇವತೆಗಳು ಸಾಯುಜ್ಯಮುಕ್ತಿ ಎಂಬ, ವಾಸುದೇವನ ಆಶ್ರಯವನ್ನು ಹೊಂದಿ ಮಹತ್ತಾದ ಸುಖ ಆನಂದಾದಿಗಳನ್ನು ಪಡೆಯುವರು. ಈ ರೀತಿಯಲ್ಲಿ ಜೀವರ ಉತ್ಕ್ರಮಣ ಲಕ್ಷಣವನ್ನು ಬ್ರಹ್ಮದೇವರು ದೇವರಿಂದ ಮೊದಲು ತಿಳಿದರು. ನಂತರ ಪರಂಪರೆಯಿಂದ ಪ್ರಾಪ್ತವಾದ ಈ ಜ್ಞಾನವನ್ನೇ ನಾನು ನಿನಗೆ ಹೇಳಿರುವೆನೆಂದು ಶುಕರು ಪರೀಕ್ಷಿದ್ರಾಜನಿಗೆ ಹೇಳಿದರು. ಆದುದರಿಂದ ಶ್ರೀಹರಿಯ ಆಜ್ಞಾರೂಪಗಳಾದ ವೇದವಾಕ್ಯಗಳಲ್ಲಿ ಶ್ರದ್ಧೆಯುಳ್ಳವರು, ಆ ಉಪದೇಶ ಪ್ರಕಾರ ಸ್ವಧರ್ಮಾಚರಣೆಯನ್ನು ಶ್ರೀಪರಮಾತ್ಮನ ಸೇವೆ ಎಂದು ತಿಳಿದು ಮಾಡುತ್ತಾ, ಅರ್ಚಿರಾದಿ ರೂಪ ದೇಹತ್ಯಾಗಮಾಡಿ, ಶಾಶ್ವತಸುಖವನ್ನು ಪಡೆಯುವರು.

ವೇದವಾಕ್ಯಗಳಲ್ಲಿ ಅಶ್ರದ್ಧೆ ಮಾಡುವವರು ನೀಚಸ್ವಭಾವ ವುಳ್ಳವರಾಗಿ ಯಾವಾಗಲೂ ಹೇಯವಾದ ಸಂಸಾರದುಃಖಗಳನ್ನೇ ಹೊಂದಿ ಕೊನೆಗೆ ಶಾಶ್ವತನರಕವನ್ನು ಹೊಂದುವರು. ಜೀವರಲ್ಲಿ, ಪರಮಕರುಣಾಶಾಲಿಗಳಾದ ವೇದವ್ಯಾಸರು, ಶ್ರೀಮದ್ಭಾಗವತವೆಂಬ ವೇದಾರ್ಥಸಾರವನ್ನು ರಚಿಸಿ, ಅದರಲ್ಲಿ ಸರ್ವ ಜೀವರೂ ಶ್ರೀಪರಮಾತ್ಮನನ್ನು ಸುಲಭವಾಗಿ ಆರಾಧಿಸಿ ಆತನ ಅನುಗ್ರಹ ಪಡೆಯಬಹುದಾದ ಮಾರ್ಗಗಳನ್ನು ನಿರೂಪಿಸಿರುತ್ತಾರೆ. ಶ್ರೇಯಸ್ಸನ್ನು ಹೊಂದಲಪೇಕ್ಷಿಸುವವರು ಈ ಭಾಗವತಶಾಸ್ತ್ರವನ್ನು ಜ್ಞಾನಿಗಳಿಂದ ತಿಳಿದು ಭಾಗವತ ಧರ್ಮಗಳನ್ನು

ಅನುಷ್ಠಾನ ಮಾಡತಕ್ಕದ್ದು. ಹಾಗೆ ಮಾಡುವುದರಿಂದ ಶ್ರೀಪರಮಾತ್ಮನು ತಿಳಿಯಲ್ಪಡುತ್ತಾನೆ. ಅದರಿಂದ ಭಕ್ತಿಯೋಗವು ಲಭಿಸುತ್ತದೆ. ಆದುದರಿಂದ ಶ್ರೀಹರಿಯನ್ನು ಯಾವಾಗಲೂ ಸ್ಮರಿಸಿಕೊಂಡಾಡತಕ್ಕದ್ದು. ಯಾರು ಈ ಭಾಗವತಾಖ್ಯ ಅಮೃತಪಾನಸದೃಶವಾದ ಭಗವನ್ಮಹಾಮಹಿಮೆಗಳನ್ನು, ತಮ್ಮ ಕಿವಿಗಳೆಂಬ ಬೊಗಸೆಗಳಿಂದ ನಿರಂತರ ಪಾನಮಾಡುವರೋ ಅವರು, ತಮ್ಮ ವಿಷಯವಾಸನೆಯೆಂಬ ಕಶ್ಮಲವನ್ನು ನಿರ್ಮೂಲಮಾಡಿ, ಸರ್ವಸುಖಪ್ರದವಾದ ಶ್ರೀಪರಮಾತ್ಮನ ಚರಣಾರವಿಂದಗಳೆಂಬ ಆಶ್ರಯವನ್ನು ಎಂದರೆ ಶಾಶ್ವತಸುಖಾನುಭವರೂಪ ಮೋಕ್ಷವನ್ನು ಪಡೆಯುವರು.

**ಇತಿ ಶ್ರೀಮದ್ಭಾಗವತ ದ್ವಿತೀಯಸ್ಕಂಧದ ಎರಡನೆಯ ಅಧ್ಯಾಯವು ಮುಗಿಯಿತು.**

## अथ तृतीयोऽध्यायः

**श्रीशुक उवाच**

एवमेतन्निगदितं पृष्टवान् यद्भवान्मम ।
नृणां यन्म्रियमाणानां मनुष्येषु मनीषिणाम् ॥ १ ॥

ब्रह्मवर्चसकामस्तु यजेत ब्रह्मणस्पतिम् ।
इन्द्रमिन्द्रियकामस्तु प्रजाकामः प्रजापतीन् ॥ २ ॥

देवीं मायां तु श्रीकामस्तेजस्कामो विभावसुम् ।
वसुकामो वसून् रुद्रान् वीर्यकामस्तु वीर्यदान् ॥ ३ ॥

अन्नाद्यकामस्त्वदितिं स्वर्गकामोऽदितेः सुतान् ।
विश्वान्देवान् राष्ट्रकामः साध्यान् संसाधको विशाम् ॥ ४ ॥

आयुष्कामोऽश्विनौ देवौ पुष्टिकाम इलां यजेत् ।
प्रतिष्ठाकामः पुरुषो रोदसी लोकमातरौ ॥ ५ ॥

रूपाभिकामो गन्धर्वान् स्त्रीकामोऽप्सर उर्वशीम् ।
आधिपत्यकामः सर्वेषां यजेत परमेष्ठिनम् ॥ ६ ॥

यज्ञं यजेद्यशस्कामः कोशकामः प्रचेतसम् ।
विद्याकामस्तु गिरिशं दाम्पत्यार्थ उमां सतीम् ॥ ७ ॥

## अथ द्वितीयोऽध्यायः

धर्मार्थमुत्तमश्लोकं तन्तुं तन्वन् पितॄन्यजेत् ।
रक्षाकामः पुण्यजनानोजस्कामो मरुद्गणान् ॥ ८ ॥

राज्यकामो मनून् देवान्निरृतिं त्वभिचरन्यजेत् ।
ग्रामकामो यजेत्सोममकामः पुरुषं पुमान् ॥ ९ ॥

अकामः सर्वकामो वा मोक्षकाम उदारधीः ।
तीव्रेण भक्तियोगेन यजेत पुरुषं परम् ॥ १० ॥

एतावानेव यजतामिह निः श्रेयसोदयः ।
भगवत्यचलो भावो यद्भागवतसङ्गतः ॥ ११ ॥

ज्ञानं यदा प्रतिनिवृत्तगुणोर्मिचक्रमात्मप्रसाद उभयत्र गुणेष्वसङ्गः ।
कैवल्यसम्भृतपथस्त्वथ भक्तियोगः को निर्वृतो हरिकथासु रतिं न कुर्यात् ॥ १२ ॥

### शौनक उवाच

इत्यभिव्याहृतं राजा निशम्य भरतर्षभः ।
किमन्यत्पृष्टवान् भूयो वैयासकिमृषिं कविम् ॥ १३ ॥

एतच्छुश्रूषतां विद्वन् सूत नोऽर्हसि भाषितुम् ।
कथा हरिगुणोदाराः सतां स्युः सदसि ध्रुवम् ॥ १४ ॥

स वै भागवतो राजा पाण्डवेयो महारथः ।
बालः क्रीडनकैः क्रीडन् कृष्णक्रीडां य आददे ॥ १५ ॥

वैयासकिश्च भगवान् वासुदेवपरायणः ।
उरुगायगुणोदाराः सतां स्युर्हि समागमे ॥ १६ ॥

आयुर्हरति वै पुंसाम् उद्यन्नस्तञ्च यन्नसौ ।
तस्यर्ते यः क्षणो नीतः उत्तमश्लोकवार्तया ॥ १७ ॥

तरवः किन्न जीवन्ति भस्त्राः किं न श्वसन्त्युत ।
न खादन्ति न मेहन्ति किं ग्राम्याः पशवोऽपरे ॥ १८ ॥

श्वविराहोष्ट्रखरैः स तुल्यः पुरुषः पशुः ।

## अथ द्वितीयोऽध्यायः

न यत्कर्णपथोपेतो जातु नाम गदाग्रजः ॥ १९ ॥

बिले बतोरुक्रमविक्रमान् ये न शृण्वतः कर्णपुटे नरस्य ।
जिह्वाऽसती दार्दुरिकेव सूत न चेत्प्रगायत्युरुगायगाथाम् ॥ २० ॥

भारः परं पट्टकिरीटजुष्टमप्युत्तमाङ्गं न नमेन्मुकुन्दम् ।
शावौ करौ नो कुरुतः सपर्यां हरेर्लसत्काञ्चनकङ्कणौ वा ॥ २१ ॥

बर्हायिते ते नयने नराणां लिङ्गानि विष्णोर्न निरीक्षतो ये ।
पादौ नृणां तौ द्रुमजन्मभाजौ क्षेत्राणि नानुव्रजतो हरेर्यौ ॥ २२ ॥

जीवच्छवो भागवताङ्घ्रिरेणुं न जातु मर्त्योऽभिलषेत यस्तु ।
श्रीविष्णुपद्या मनुजस्तुलस्याः श्वसच्छवो यस्तु न वेद गन्धम् ॥ २३ ॥

तदश्मसारं हृदयं बतेदं यद्गृह्यमाणैर्हरिनामधेयैः ।
न विक्रियेताथ मुखे विकारो नेत्रे जलं गात्ररुहेषु हर्षः ॥ २४ ॥

अथाभिधेह्यङ्ग मनोऽनुकूलं प्रभाषसे भागवतप्रधानः ।
यदाह वैयासकिरात्मविद्याविशारदो नृपतिं साधु पृष्टः ॥ २५ ॥

### ॥ इति श्रीमद्भागवते (द्वितीयस्कन्धे(*2) तृतीयोऽध्यायः ॥

**ಮೂರನೆಯ ಅಧ್ಯಾಯ ॥**

## ಫಲಾಪೇಕ್ಷೆಯನ್ನು ಅನುಸರಿಸಿ ಉಪಾಸನೆ

ಶ್ರೀಶುಕರು ಪರೀಕ್ಷಿದ್ರಾಜನೇ, ನೀನು ಮರಣಕಾಲವು ಪ್ರಾಪ್ತವಾದಾಗ ಜ್ಞಾನಿಯಾದ ಮನುಷ್ಯನು ಏನು ಮಾಡತಕ್ಕದ್ದೆಂದು, ಹಿಂದೆ ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರ ಕೊಟ್ಟಿದ್ದೇನೆ. ಲೋಕದಲ್ಲಿ ಪಾಪಪರಿಹಾರಕನಾದ ಪರಮಾತ್ಮನ ದಿವ್ಯಚರಿತ್ರೆಗಳೇ ಕೇಳಲು ಯೋಗ್ಯವಾದವುಗಳು. ಏಕೆಂದರೆ ಶ್ರೀಹರಿಕಥಾ ಶ್ರವಣದಿಂದ ಭಕ್ತಿಯು ಹುಟ್ಟುತ್ತದೆ. ಭಕ್ತಿಯಿಂದ ಅಪೇಕ್ಷಿತ ಸಕಲ ಸೌಖ್ಯಗಳೂ ಉಂಟಾಗುತ್ತವೆ. ಇತರ ದೇವತೆಗಳನ್ನು ಆರಾಧಿಸಿದರೆ, ಅವರು ಒಂದೊಂದೇ ಫಲವನ್ನು ಒಬ್ಬೊಬ್ಬರು, ಶ್ರೀಪರಮಾತ್ಮನ ಪ್ರಸಾದದಿಂದ ಕೊಡಬಲ್ಲರು. ಎಲ್ಲಾ ಫಲಗಳನ್ನೂ ಕೊಡಬಲ್ಲ ಸರ್ವಶಕ್ತ, ಸರ್ವದಯಾಪರಮೂರ್ತಿಯಾದ ಆ ಪರಮಾತ್ಮನ ಆರಾಧನೆಯೇ ಅತ್ಯಂತ ಉತ್ತಮವೂ,

## अथ द्वितीयोऽध्यायः

ಫಲಪ್ರದವೂ ಆದದ್ದು. ಆದರೂ ಲೋಕದಲ್ಲಿ ಜನರು ಬೇರೆ ಬೇರೆ ಯಾವ್ಯಾವ ಅಪೇಕ್ಷೆಗಳನ್ನು ಜನರು ಪೂರ್ತಿಮಾಡಿಕೊಳ್ಳುವುದಕ್ಕಾಗಿ ಯಾವ್ಯಾವ ದೇವತೆಗಳನ್ನು ಆರಾಧಿಸಬೇಕೆಂಬುವುದನ್ನೂ ಹೇಳುತ್ತೇನೆ ಕೇಳು:-

ಬ್ರಹ್ಮವರ್ಚಸ್ವಿಯಾಗಬೇಕೆಂದು ಅಪೇಕ್ಷಿಸುವವನು ಬೃಹಸ್ಪತಿಯನ್ನು ಆರಾಧಿಸಬೇಕು. ಇಂದ್ರಿಯಪಾಟವವನ್ನೂ ಶುಕ್ರಸ್ತಂಭನವನ್ನೂ ಇಚ್ಛಿಸುವವನು ಇಂದ್ರನನ್ನಾರಾಧಿಸಬೇಕು. ಮಕ್ಕಳಾಗಬೇಕಾದರೆ, ವಂಶವೃದ್ಧಿಗಾಗಿ ಪ್ರಜಾಧಿಪತಿಗಳನ್ನು, ಕಶ್ಯಪಾದಿಗಳನ್ನಾರಾಧಿಸಬೇಕು. ಐಶ್ವರ್ಯಕಾಮನು ಲಕ್ಷ್ಮೀದೇವಿಯನ್ನೂ, ಬಲಾ, ಕಾಂತಿಗಳನ್ನಪೇಕ್ಷಿಸುವವನು ಅಗ್ನಿಯನ್ನೂ, ಬಂಗಾರಾದಿ ವಸ್ತುಗಳನ್ನಪೇಕ್ಷಿಸುವವನು, ನಿಧಿಯನ್ನಪೇಕ್ಷಿಸುವವನು ಅಷ್ಟವಸುಗಳನ್ನೂ, ವೀರ್ಯವನ್ನು ಬಯಸುವವನು ರುದ್ರದೇವರನ್ನೂ, ಅನ್ನಾದಿ ಭೋಗಕಾಮ ವುಳ್ಳವನು ಅದಿತಿ ದೇವಿಯನ್ನೂ, ಸ್ವರ್ಗಸುಖಬಯಸುವವನುದೇವತೆಗಳನ್ನೂಆರಾಧಿಸಬೇಕು.ರಾಜ್ಯಬೇಕೆಂಬುವನುವಿಶ್ವೇದೇವತೆಗಳನ್ನು ಪೂಜಿಸಬೇಕು. ವಶೀಕರಣವನ್ನಪೇಕ್ಷಿಸುವವನು ಸಾಧ್ಯರನ್ನೂ, ಆಯಸ್ಸನ್ನಪೇಕ್ಷಿಸುವವನು ಅಶ್ವಿನೀದೇವತೆಗಳನ್ನೂ, ಪುಷ್ಟಿಯನ್ನಪೇಕ್ಷಿಸುವವನು ಭೂದೇವಿಯನ್ನೂ, ಸ್ಥಾನಭ್ರಷ್ಟನಾದವನು ತನ್ನ ಸ್ಥಾನವನ್ನು ಪುನಃ ಹೊಂದಬೇಕಾದರೆ ಪೃಥುವ್ಯಾದಿ ಅಭಿಮಾನಿದೇವತೆಗಳನ್ನೂ, ಸುರೂಪಾಪೇಕ್ಷಿಯು ಗಂಧರ್ವರನ್ನೂ, ಸುಂದರ ಸ್ತ್ರೀಯನ್ನಪೇಕ್ಷಿಸುವವನು ಅಪ್ಸರಸರನ್ನೂ ಊರ್ವಶಿಯನ್ನೂ ಆರಾಧಿಸಬೇಕು. ಯಶಸ್ಸನ್ನು ಬಯಸುವವನು ಯಜ್ಞಗಳನ್ನಾಚರಿಸಬೇಕು. ದ್ರವ್ಯಾಪೇಕ್ಷೆ ವುಳ್ಳವನು ವರುಣನನ್ನುಪಾಸನೆಮಾಡಬೇಕು.

ವೇದವಿದ್ಯಾಭಿಲಾಷಿಯು ಶಂಕರನನ್ನೂ ಒಳ್ಳೇ ಹೆಂಡತಿಯನ್ನಪೇಕ್ಷಿಸುವವನು ಉಮಾದೇವಿಯನ್ನೂ ಅರ್ಚಿಸಬೇಕು. ಅಕ್ಷಯಪುಣ್ಯಪ್ರದವಾದ ಧರ್ಮಾಪೇಕ್ಷೆ ವುಳ್ಳವನು ಪುರುಷೋತ್ತಮನಾದ ವಿಷ್ಣುವನ್ನಾರಾಧಿಸಬೇಕು. ಅವಿಚ್ಛೇದಸಂತತಿ ಬಯಸುವನು ಪಿತೃದೇವತೆಗಳನ್ನೂ, ರಕ್ಷಣೆಯನ್ನಪೇಕ್ಷಿಸುವವನು ಮಣಿಭದ್ರಾದಿ ಪುಣ್ಯಜನರೆಂಬ ಯಕ್ಷರನ್ನೂ, ಓಜಸ್ಸನ್ನಪೇಕ್ಷಿಸುವವನು ಮರುದ್ಗಣಗಳನ್ನೂ, ರಾಜ್ಯವನ್ನು ಬಯಸುವವನು ಮನುಗಳನ್ನೂ, ಪರೋಪದ್ರವ ಮಾಡಲಪೇಕ್ಷೆ ವುಳ್ಳವನು ನಿಋತಿಯನ್ನೂ, ವಿಷಾಯಾಪೇಕ್ಷೆಯುಳ್ಳವನು ಚಂದ್ರನನ್ನೂ, ಏನೂ ಬಯಸದವನು ಪುರುಷನಾಮಕ ಪರಬ್ರಹ್ಮನನ್ನೂ ಆರಾಧಿಸಬೇಕು.

ಅಪೇಕ್ಷೆಯಿಂದಲಾಗಲೀ, ಅಪೇಕ್ಷೆ ಇಲ್ಲದೇ ಆಗಲೀ, ಉತ್ತಮಾಪೇಕ್ಷೆಯಾದ ಮೋಕ್ಷಕ್ಕಾಗಲೀ ಅತ್ಯಂತ ಶ್ರದ್ಧೆಯುಳ್ಳ ಭಕ್ತಿಯಿಂದ ಶ್ರೀಪರಮಾತ್ಮನನ್ನಾರಾಧಿಸತಕ್ಕದ್ದು. ಇದೇ

## अथ द्वितीयोऽध्यायः

ಸರ್ವಪುರುಷಾರ್ಥಗಳಿಗಾಗಿ ಪ್ರಯತ್ನಿಸುವವರಿಗೆ ಫಲಪ್ರದವಾದದ್ದು. ಇಂತಹ ಬುದ್ಧಿಯೂ, ಭಾಗವತ ಧರ್ಮಾನುಷ್ಠಾನದಲ್ಲಿ ಆಸಕ್ತಿಯೂ ಸತ್ಸಂಗದಿಂದ ಮಾತ್ರ ಉಂಟಾಗುತ್ತೆ. ಸಜ್ಜನರ ಸಭೆಗಳಲ್ಲಿ ನಡೆಯುವ ಯಾವ ಶ್ರೀಹರಿಕಥಾಶ್ರವಣವೆಂಬ ಅಮೃತಪಾನ ಮಾಡುವವರಿಗೆ, ಆ ಅಮೃತಪಾನದಿಂದ, ಸತ್ವರಜಸ್ತಮೋಗುಣಗಳ ಕಾರ್ಯಗಳಾದ ಹಸಿವು, ಬಾಯಾರಿಕೆ, ಶೋಕ, ಮೋಹ, ರಾಗ, ದ್ವೇಷಗಳೆಂಬ ಸಂಸಾರಸಮುದ್ರದಿಂದುಂಟಾಗುವ ತೆರೆಗಳ ಪರಂಪರೆಗಳು ಉಪದ್ರವ ಕೊಡಲಾರವೋ, ಅಂತಹ ಭಕ್ತರು ಮನಃಪ್ರಸಾದವನ್ನು ತನ್ಮೂಲಕ ಹೊಂದಿ, ಪರಮಾತ್ಮನ ಅಪರೋಕ್ಷಜ್ಞಾನವನ್ನು ಪಡೆದು, ಅಪರೋಕ್ಷಜ್ಞಾನದಿಂದ ಧ್ಯಾನಮಾಡಿ ಭಗವತ್ಸಾಕ್ಷಾತ್ಕಾರವನ್ನು ಹೊಂದಿ ಆನಂದಿಸುವರೋ, ಅಂತಹ ಹರಿಕಥಾಶ್ರವಣ ವಿಷಯದಲ್ಲಿ ಉಪೇಕ್ಷೆಯನ್ನು ಯಾರು ತಾನೇ, ತಮ್ಮ ಹಿತವನ್ನು ಬಯಸುವವರು ಮಾಡ್ಯಾರು? ಯಾರೂ ಮಾಡುವುದಿಲ್ಲವೆಂಬ ಭಾವ. ಈ ರೀತಿ ಹೇಳಿ ಸೂತರು ಸುಮ್ಮನಾಗಲು, ಆಗ ಶೌನಕರು ಪುನಃ ಪ್ರಶ್ನೆ ಮಾಡುತ್ತಾರೆ.

### ಶೌನಕಾದಿಗಳ ಕಥಾಶ್ರವಣ ಕುತೂಹಲ

ಎಲೈ ಮಹಾಭಾಗ್ಯಶಾಲಿಗಳಾದ ಸೂತರೆ! ಈ ವಿಚಾರಗಳೆಲ್ಲಾ ಕೇಳಿದ ನಂತರ ಆ ಪರೀಕ್ಷಿದ್ರಾಜನು ಶುಕಮಹರ್ಷಿಗಳನ್ನು ಪುನಃ ಏನೇನು ಪ್ರಶ್ನೆ ಮಾಡಿದನು? ತಮ್ಮನ್ನು ಅನುಸರಿಸಿ ಭಗವತ್ಕಥಾ ಶ್ರವಣಾಪೇಕ್ಷೆವುಳ್ಳ ನಮಗೆ ದಯವಿಟ್ಟು ಹೇಳಿರಿ. ನೀವು ಹೇಳಿದಂತೆ, ಎಲ್ಲಿ ಸಜ್ಜನರ ಸಮಾಗಮ ಉಂಟಾಗುವುದೋ, ಅಲ್ಲಿಯೇ ಭಗವತ್ಕಥಾರೂಪ ಜ್ಞಾನಸೂರ್ಯೋದಯವಾಗುವುದು. ಮಹಾರಥನಾದ ಪಾಂಡವರ ಪೌತ್ರನಾದ(ಮೊಮ್ಮಗನಾದ), ಪರೀಕ್ಷಿದ್ರಾಜನು ಮಹಾಭಾಗವತೋತ್ತಮನು. ಏಕೆಂದರೆ, ಅವನಿಗೆ ಕೇವಲ ತಾಯಿಗರ್ಭದಲ್ಲಿಯೇ ಇದ್ದಾಗ, ಬಾಲಕರ ಆಟಪಾಟಗಳನ್ನೂ ತಿಳಿಯಲಾರದ ಸ್ಥಿತಿಯಲ್ಲೇ, ಯಾವ ಶ್ರೀಕೃಷ್ಣನ ಪರಮಮಂಗಳರೂಪವು ಕಾಣಿಸಿಕೊಂಡು, ಬಾಲಕರು ಆಟವಾಡುವಂತೆ ತನ್ನ ಗದಾಯುಧ, ಸುದರ್ಶನಗಳಿಂದ, ಆ ಅಶ್ವತ್ಥಾಮನ ವೈಷ್ಣವಾಸ್ತ್ರದೊಡನೆ ಆಟವಾಡಿ, ಆ ಅಸ್ತ್ರವನ್ನು ನಿಸ್ತೇಜವನ್ನಾಗಿ ಮಾಡಿ, ಅವನನ್ನು ಕಾಪಾಡಿತೋ, ಅಂತಹ ಭಗವದನುಗ್ರಹಪಾತ್ರನೇ ಶ್ರೋತೃವೂ, ಪರಮಜ್ಞಾನಿಗಳೂ, ಪರಮತೇಜಸ್ವಿಗಳೂ, ಆದ ಶ್ರೀಶುಕಮಹರ್ಷಿಗಳು ನಿರಂತರ ಭಕ್ತಿಯೋಗದಿಂದ ಶ್ರೀವಾಸುದೇವಪರಾಯಣರಾದುದರಿಂದಲೂ, ಅವರೇ ಈ ಕ್ಸ ಥಾ ಹೇಳತಕ್ಕವರಾದ್ದರಿಂದಲೂ; ಇಂತಹ ಸತ್ಸಭೆಯು ಲೋಕದಲ್ಲಿ ಹೇಗೆ ತಾನೇ ಲಭ್ಯವಾದೀತು? ಶುಕಮಹರ್ಷಿಗಳು ಹೇಳತಕ್ಕಂಥ ಮಹಾಮಹಿಮೆಗಳು ಬೇರೆ ಯಾರಿಂದ ಹೇಳಲಾದೀತು? ಆದುದರಿಂದ ಮುಂದಿನ ಕಥಾಶ್ರವಣ ವಿಷಯದಲ್ಲಿ ನಾವು ಬಹಳ ಆತುರರಾಗಿದ್ದೇವೆ.

## अथ द्वितीयोऽध्यायः

ಲೋಕದಲ್ಲಿ ಹಗಲು ರಾತ್ರಿಗಳೆಂಬವು ಜನರ ಆಯಸ್ಸನ್ನೂ ಕ್ಷೀಣಗೊಳಿಸುತ್ತಿರುತ್ತವೆ- ಆದುದರಿಂದ, ಎಷ್ಟು ಕಾಲ ಶ್ರೀಪರಮಾತ್ಮನ ವಿಷಯದಲ್ಲಿ ಮನಸ್ಸಿಡಲು ನಮಗೆ ಆಗುತ್ತೋ, ಅಷ್ಟೇ ಸಾರ್ಥಕವಾದ ಕಾಲವು. ವ್ಯರ್ಥಕಾಲಕ್ಷೇಪವು ಸರ್ವಥಾ ಮಾಡಬಾರದು. ಮನುಷ್ಯರು ನಾವು ಜೀವಿಸುತ್ತೇವೆ! ಉಸಿರಾಡುಸುತ್ತೇವೆ! ಎಂದು ಹೆಮ್ಮೆ ಪಡುವುದಾದರೆ, ಕಾಡಿನಲ್ಲಿ ಮಹಾವೃಕ್ಷಗಳು ಇವರಿಗಿಂತ ಎಷ್ಟೋ ಹೆಚ್ಚುಕಾಲ ಬದುಕುವುದಿಲ್ಲವೇನು? ಕಮ್ಮಾರನ ತಿತ್ತಿಯು ಇವರಿಗಿಂತ ಏಷ್ಟೋ ಹೆಚ್ಚಾಗಿ, ಎಷ್ಟೋವೇಗವಾಗಿ ಉಸಿರಾಡುವುದಿಲ್ಲವೇನು?

ಮನುಷ್ಯನು ತನಗಿಂತ ಕೀಳನ್ನಾಗಿ ಭಾವಿಸುವ ಗ್ರಾಮಸೂಕರಗಳೂ, ನಾಯಿ, ಕತ್ತೆಗಳೂ ಆಹಾರಗಳನ್ನು ತಿಂದು ಯಥೇಷ್ಟವಾಗಿ ವಿಷಯಸುಖಪಟ್ಟು, ಮಕ್ಕಳನ್ನು ಇವರಿಗಿಂತ ಹೆಚ್ಚಾಗಿಯೇ ಪಡೆಯುವುದಿಲ್ಲವೇನು? ಕಿವಿಗಳಿದ್ದೂ ಭಗವನ್ನಾಮಾಮೃತಗಳನ್ನು ಕೇಳದ ಮನುಷ್ಯರು, ನಾಯಿ, ಹಂದಿ, ಕತ್ತೆ, ಒಂಟೆಗಳಂತೆ ಪಶುಪ್ರಾಯರೇ ಎನ್ನಬಹುದು. ಏಕೆಂದರೆ ಇವು ಭಗವನ್ನಾಮಗಳನ್ನು ಆ ಮನುಷ್ಯರಂತೆ ಕೇಳುವುದಿಲ್ಲ.

ಅವರ ಕಿವಿಗಳು ಬೆಟ್ಟದಲ್ಲಿರುವ ಪೊಟರೆಗಳಂತೆ ನಿರರ್ಥಕಗಳು. ಪರಮಾತ್ಮನ ಕಥಾಶ್ರವಣಮಾಡುವ ಕಿವಿಗಳೇ ಜೀವಿಸಿದ್ದಕ್ಕೆ ಉಪಯೋಗವಾದದ್ದು, ಸಫಲವಾದದ್ದು. ದೇವಕೀರ್ತನೆಯನ್ನು ಮಾಡದ ಬಾಯಿ ಹೆಗ್ಗಣದೊಗರು. ಶ್ರೇಷ್ಠವಾದ ರತ್ನಖಚಿತ ಕಿರೀಟವನ್ನು ಧರಿಸತಕ್ಕ ಚಕ್ರವರ್ತಿಯ ತಲೆಯಾದರೂ, ಅದು ಶ್ರೀಪರಮಾತ್ಮನಿಗೆ ಭಕ್ತಿಯಿಂದ ನಮಸ್ಕರಿಸದಿದ್ದರೆ ಅದು ಒಂದು ಭಾರವಾದ ಕಲ್ಲು ಬಂಡೆಗೆ ಸರಿಯಾದದ್ದು. ಪರಮಾತ್ಮನ ಸೇವಾ, ಪೂಜಾದಿಗಳನ್ನು ಮಾಡದ ಕೈಗಳು, ಬಂಗಾರ, ವಜ್ರಖಚಿತ ಆಭರಣಗಳಿಂದ ಅಲಂಕೃತಗಳಾಗಿದ್ದರೂ, ಹೆಣದ ಕೈಗಳಿಗೆ ಸಮನಾದವು. ದೇವರ ಪ್ರತಿಮಾದಿಗಳನ್ನು ನೋಡಲಪೇಕ್ಷಿಸದ ಕಣ್ಣುಗಳು ನವಿಲುಗರಿಯ ಕಣ್ಣುಗಳು. ದೇವಾಲಯಗಳಿಗೂ, ಪುಣ್ಯಕ್ಷೇತ್ರಗಳಿಗೂ ನಡೆಯದ ಕಾಲು ಮರದ ಮಂಚದ ಕಾಲುಗಳು. ಭಗವದ್ಭಕ್ತರ ಪಾದರೇಣುಗಳ ಮಹಾತ್ಮೆಯನ್ನರಿಯದ ಮನುಷ್ಯನು ಜೀವದಿಂದಿರುವ ಒಂದು ಹೆಣ.

ಪರಮಾತ್ಮನ ಪಾದಗಳಿಗೆ ಅರ್ಪಿಸಿದ ಪುಷ್ಪ ತುಳಸಿಗಳ ಸುಗಂಧವನ್ನರಿಯದ ಮೂಗು, ಗೆದ್ದಲುಗಳು ಮಾಡಿದ ಹುತ್ತದದೊಗರು ಮತ್ತು ಅಂತಹ ಮೂಗುಳ್ಳ ಮನುಷ್ಯನು ಉಸಿರಾಡುವ ಹೆಣ. ಪರಮಾತ್ಮನ ಗುಣಗಾನವನ್ನು ಕೇಳಿ ಯಾರಿಗೆ ಮುಖವು ಪ್ರಸನ್ನವಾಗುವುದಿಲ್ಲವೋ! ಭಕ್ತ್ಯುದ್ರೇಕದಿಂದ ಆನಂದಾಶ್ರುಗಳು ಯಾರ ಕಣ್ಣುಗಳಲ್ಲಿ ಬರುವುದಿಲ್ಲವೋ! ಯಾರು ಅಭಿನಂದಿಸಿ ತಲೆದೂಗುವುದಿಲ್ಲವೋ, ಗದ್ಗದಕಂಠರಾಗುವುದಿಲ್ಲವೋ, ಅಂತಹರ ಹೃದಯವು ವಿಷಮಯವಾದ

ಒಂದು ಕಲ್ಲು ಬಂಡೆಯೇ ಸರಿ. ಆದುದರಿಂದ ಎಲೈ ಸೂತರೆ! ಭಗವದ್ಗುಣಾನುವರ್ಣನಗಳಿಂದ ತುಂಬಿದ ಯಾವ ಭಾಗವತ ಕಥೆಯನ್ನು ಶುಕರು ಪರೀಕ್ಷಿದ್ರಾಜರಿಗೆ ಹೇಗೆ ಹೇಳಿದರೋ, ಅದನ್ನು ಪರಮ ಉತ್ಕೃಷ್ಟವಾಗಿ ಹೇಳಲು ಶಕ್ತರಾದ ನೀವು ನಮಗೆ ಹೇಳಿ ಎಂದರು.

**ಇತಿ ಶ್ರೀ ಮದ್ಭಾಗವತ ದ್ವಿತೀಯಸ್ಕಂಧದ ಮೂರನೆಯ ಅಧ್ಯಾಯವು ಮುಗಿಯಿತು.**
**ಶ್ರೀಕೃಷ್ಣಾರ್ಪಣಮಸ್ತು**

## अथ चतुर्थोऽध्यायः

वैयासकेरिति वचस्तत्वनिश्चयमात्मनः ।
उपधार्य मतिं कृष्णे औत्तरेयः सतीं व्यधात् ॥ १ ॥

आत्मजायासुतागारपशुद्रविणबन्धुषु ।
राज्ये चाविकले नित्यनिरूढां ममतां जहौ ॥ २ ॥

पप्रच्छ चेममेवार्थं यन्मां पृच्छथ सत्तमा ।
कृष्णानुभावश्रवणे श्रद्दधानो महायशाः ॥ ३ ॥

संस्थां विज्ञाय सन्यस्य कर्म त्रैवर्गिकञ्च यत् ।
वासुदेवे भगवति स्वात्मभावं दृढं गतः ॥ ४ ॥

राजोवाचसमीचीनं वचो ब्रह्मन् सर्वज्ञस्य तवानघ ।
तमो विशीर्यते मह्यं हरेः कथयतः कथाः ॥ ५ ॥

भूय एव विवित्सामि भगवानात्ममायया ।
यथेदं सृजते विश्वं दुर्विभाव्यमधीश्वरैः ।
यथा गोपायति विभुः यथा संयच्छते पुनः ॥ ६ ॥

यां यां शक्तिमुपाश्रित्य पुरुशक्तिः परः पुमान् ।
आत्मानं क्रीडयन् क्रीडन् करोति विकरोति च ॥ ७ ॥

नूनं भगवतो ब्रह्मन् हरेरद्भुतकर्मणः ।
दुर्विभाव्यमिवाभाति कविभिश्च विचेष्टितम् ॥ ८ ॥

यथा गुणांस्तु प्रकृतेर्युगपत्क्रमशोऽपि वा ।

## अथ चतुर्थोऽध्यायः

विभर्ति भूरिशस्त्वेकः कुर्वन् कर्माणि जन्मभिः ॥ ९ ॥

विचिकित्सितमेतन्मे ब्रवीतु भगवान्यथा ।
शब्दब्रह्मणि निष्णातः परस्मिंश्च भवान् खलु ॥ १० ॥

**सूत उवाच**

इत्युपामन्त्रितो राज्ञा गुणानुकथने विभोः ।
हृषीकेशमनुस्मृत्य प्रतिवक्तुं प्रचक्रमे ॥ ११ ॥

**श्री शुक उवाच**

नमः परस्मै पुरुषाय भूयसे सदुद्भवस्थाननिरोधलीलया ।
गृहीतशक्तित्रितयाय देहिनामन्तर्भुवायानुपलभ्यवर्त्मने ॥ १२ ॥

भूयो नमः सद्वृजिनच्छिदेऽसतामसम्भवायाखिलसत्वमूर्तये ।
पुंसां पुनः पारमहंस्य आश्रमे व्यवस्थितानामनुमृग्यदाशुषे ॥ १३ ॥

नमो नमस्तेस्त्वृषभाय सात्वतां विदूरकाष्ठाय मुहुः कुयोगिनाम् ।
निरस्तसाम्यातिशयेन राधसा स्वधामनि ब्रह्मणि रंस्यते नमः ॥ १४ ॥

यत्कीर्तनं यच्छ्रवणं यदीक्षणं यद्वन्दनं यत्स्मरणं यदर्हणम् ।
लोकस्य सद्यो विधुनोति कल्मषं तस्मै सुभद्रश्रवसे नमो नमः ॥ १५ ॥

विचक्षणा यच्चरणोपसादनात्सङ्गं व्युदस्योभयतोऽन्तरात्मनः ।
विन्दन्ति हि ब्रह्मगतिं गतक्लमास्तस्मै सुभद्रश्रवसे नमो नमः ॥ १६ ॥
तपस्विनो दानपरा यशस्विनो मनस्विनो मन्त्रविदः सुमङ्गलाः ।

क्षेमं न विन्दन्ति विना यदर्पणं तस्मै सुभद्रश्रवसे नमो नमः ॥ १७ ॥

किरातहूणान्ध्रपुलिन्दपुल्कसा आभीरकङ्का यवनाश्शकादयः ।
येऽन्ये च पापा यदपाश्रयाश्रयाच्छुध्यन्ति तस्मै प्रभविष्णवे नमः ॥ १८ ॥

स एष आत्मात्मवतामधीश्वरस्त्रयीमयो धर्ममयस्तपोमयः ।
गतव्यलीकैरजशङ्करादिभिर्वितर्क्यलिङ्गो भगवान् प्रसीदताम् ॥ १९ ॥

श्रियः पतिर्यज्ञपतिः प्रजापतिर्धियां पतिर्लोकपतिर्धरापतिः ।

## अथ चतुर्थोऽध्यायः

पतिर्गतिश्चान्धकवृष्णिसात्वतां प्रसीदतां मे भगवान्सतां पतिः ॥ २० ॥

यदङ्घ्र्यभिध्यानसमाधिधौतया धियाऽनुपश्यन्ति हि तत्वमात्मनः ।
वदन्ति चैतत्कवयो यथारुचि स मे मुकुन्दो भगवान् प्रसीदताम् ॥ २१ ॥

प्रचोदिता येन पुरा सरस्वती वितन्वताऽजस्य सतीं स्थितिं हृदि ।
स्वलक्षणा प्रादुरभूत्किलास्यतः स मे ऋषीणामृषभः प्रसीदताम् ॥ २२ ॥

भूतैर्महद्भिर्य इमाः पुरो विभुर्निर्माय शेते यदमूषु पुरुषः ।
भुङ्क्ते गुणान् षोडशषोडशात्मकः सोऽलङ्कृषीष्ट भगवान् वचांसि मे ॥ २३ ॥

नमस्तस्मै भगवते वासुदेवाय वेधसे ।
पपुर्ज्ञानमयं सौम्याः यन्मुखाम्बुरुहासवम् ॥ २४ ॥

एतदेवात्मभू राजन्नारदायेति पृच्छते ।
वेदगर्भोऽभ्यधात्साक्षात् यदाह हरिरात्मनः ॥ २५ ॥

**॥ इति श्रीमद्भागवते (द्वितीयस्कन्धे(*2) चतुर्थोऽध्यायः ॥**

**॥ ನಾಲ್ಕನೆಯ ಅಧ್ಯಾಯ ॥**

ಸಂಕ್ಷೇಪದಿಂದ ಹೇಳಲ್ಪಟ್ಟ ಭಗವನ್ಮಹಾತ್ಮೆಗಳನ್ನು, ವಿಸ್ತಾರದಿಂದ ಕೇಳಬೇಕೆಂಬ ಅಪೇಕ್ಷೆಯಿಂದ ಪರೀಕ್ಷಿದ್ರಾಜನು, ಪರಮಭಕ್ತಿಯಿಂದ ಶ್ರೀಪರಮಾತ್ಮನ ಲೀಲಾವಿಶೇಷಗಳನ್ನು ತಿಳಿಯಲು ಶ್ರೀಶುಕರನ್ನು ಯಾವರೀತಿ ಪ್ರಶ್ನೆಮಾಡಿದನೆಂಬುವುದನ್ನೂ, ಅದಕ್ಕೆ ಉತ್ತರ ಕೊಡುವುದಕ್ಕಾಗಿ ಶುಕಋಷಿಗಳು ಯಾವ ರೀತಿ ಹರಿಗುರುಗಳಿಗೆ ಅವರ ಮಹಾತ್ಮೆಗಳನ್ನು ಸ್ಮರಿಸಿ, ವಂದನೆ ಮಾಡಿ, ಪ್ರತಿಜ್ಞಾರೂಪವಾಗಿ ಹೇಗೆ ಪ್ರಾರಂಭಿಸಿದರೆಂಬುವುದೂ, ಈ ಅಧ್ಯಾಯದಲ್ಲಿ ಹೇಳಲ್ಪಡುತ್ತೆ- ಸೂತರು, ಹಿಂದಿನ ಅಧ್ಯಾಯದಲ್ಲಿ ಶೌನಕರು ಮಾಡಿದ ಪ್ರಶ್ನೆಗಳನ್ನು ಕೇಳಿ, ಹೇಳುತ್ತಾರೆ:-

ಎಲೈ! ಶೌನಕಾದಿ ಋಷಿಗಳೇ! ಪರೀಕ್ಷಿದ್ರಾಜನು ಶುಕರು ವರ್ಣಿಸಿದ ಭಗವದ್ರೂಪಗಳ ಸ್ಥೂಲ, ಸೂಕ್ಷ್ಮಚಿಂತನಾಪ್ರಕಾರವನ್ನೂ, ಯೋಗಿಗಳು ಉತ್ಕ್ರಮಣ ಹೊಂದುವ ರೀತಿಯನ್ನೂ ಕೇಳಿ, ಶ್ರೀಪರಮಾತ್ಮನಲ್ಲಿ ಅತ್ಯಂತ ಭಕ್ತಿಯನ್ನು ಹೊಂದಿ, ಪುನಃ ನೀವು ನನ್ನನ್ನು ಕೇಳಿದ ಪ್ರಶ್ನೆಗಳನ್ನೇ ಶ್ರೀಶುಕರನ್ನು

## अथ चतुर्थोऽध्यायः

ಕೇಳಿದನು. ಸ್ವಭಾವದಿಂದಲೇ ಭಕ್ತನಾದ ಪರೀಕ್ಷಿದ್ರಾಜನು ತನ್ನ ದೇಹ, ರಾಜ್ಯ, ಪತ್ನೀ, ಪುತ್ರಭಾಂಧವರು, ಐಶ್ವರ್ಯ, ಭೋಗಾದಿಗಳಲ್ಲಿ ಮಮತೆಯನ್ನು ಸಂಪೂರ್ಣವಾಗಿ ಬಿಟ್ಟು ವೈರಾಗ್ಯಶಾಲಿಯಾಗಿದ್ದನು. ಧರ್ಮ, ಅರ್ಥ, ಕಾಮಗಳಿಗಾಗಿ ಮಾಡುವ ಸಕಲ ತ್ರೈವರ್ಗಿಕ ಕರ್ಮಗಳನ್ನೂ ಭಗವದರ್ಪಣ ಬುದ್ಧಿಯಿಂದಲೇ ಮಾಡುತ್ತಿದ್ದನು. ಆದುದರಿಂದ ನಿವೃತ್ತ ಕರ್ಮಾನುಷ್ಠಾನವನ್ನೇ ಮಾಡುತ್ತಿದ್ದನು. ಶ್ರೀಕೃಷ್ಣನ ಮತ್ತು ಅವನ ಭಕ್ತರ ದಿವ್ಯಚರಿತ್ರೆಗಳನ್ನು ಕೇಳಲು ಅವನು ಬಹಳ ಕುತೂಹಲ ವುಳ್ಳವನೂ, ಅಧಿಕಾರಿಯೂ ಆಗಿದ್ದನು.

ವಾಸುದೇವನ ಪಾದಾರವಿಂದಗಳಲ್ಲಿ ನೆಟ್ಟಮನಸ್ಸುಳ್ಳವನಾಗಿ ಪರೀಕ್ಷಿದ್ರಾಜನು ಶುಕ ಋಷಿಗಳನ್ನು ಕುರಿತು ಎಲೈ! ಸರ್ವಜ್ಞರೂ, ಕರುಣಾಳುಗಳೂ ಆದ ಶುಕಮುನಿಗಳೇ! ಈವರೆಗೆ ನೀವು ನನಗೆ ಮಾಡಿದ ಸದುಪದೇಶದಿಂದ, ನನ್ನ ಮನೋಕಲ್ಮಷಗಳೆಲ್ಲವೂ ನಾಶವಾದವು. ನಾನು ನಿಮ್ಮನುಗ್ರಹದಿಂದ ನಿರ್ಮಲಚಿತ್ತನೂ, ಮಮತಾಹಂಕಾರಗಳಿಲ್ಲದವನೂ, ನೀವು ವರ್ಣಿಸಿದ ಶ್ರೀಪರಮಾತ್ಮನ ಸ್ಥೂಲ, ಸೂಕ್ಷ್ಮರೂಪಗಳಲ್ಲಿ ಮನಸ್ಸಿಟ್ಟವನೂ ಆಗಿರುತ್ತೇನೆ. ಆ ಶ್ರೀಪರಮಾತ್ಮನ ಅದ್ಭುತ ಮಹಿಮೆಗಳನ್ನು ವಿಶೇಷಾಕಾರವಾಗಿ ತಿಳಿಯಲಪೇಕ್ಷಿಸುತ್ತೇನೆ-

ಸರ್ವಶಕ್ತನಾದ ಪರಮಾತ್ಮನು ದೃಶ್ಯಮಾನವಾದ ಈ ವಿಚಿತ್ರ ಪ್ರಪಂಚವನ್ನು ಪ್ರಕೃತಿ ಎಂಬ ಉಪಾದಾನ ಕಾರಣದಿಂದ ಯಾವ ರೀತಿ ಸೃಷ್ಟಿಮಾಡಿದನು? ಇಂತಹ ಪ್ರಪಂಚವು ಶ್ರೀಪರಮಾತ್ಮನಲ್ಲದ ಬೇರೆಯವರಿಂದ ಸೃಷ್ಟಿ ಮಾಡಲು ಸಾಧ್ಯವಾಗಲಾರದು. ತಾನು ಸೃಷ್ಟಿಸಿದ ಪ್ರಪಂಚವನ್ನು ಯಾವ ರೀತಿ ಸಂರಕ್ಷಿಸುತ್ತಾನೆ? ಯಾವ ರೀತಿ ಲಯ ಎಂದರೆ ನಾಶಮಾಡುತ್ತಾನೆ?

ಈ ಪ್ರಪಂಚದಲ್ಲಿ ಅಸಂಖ್ಯಾತ ಜೀವರೂ, ವಸ್ತುಗಳೂ ಇವೆ. ಇವುಗಳಿಗೆ ಪ್ರವೃತ್ತಿಯನ್ನು ತನ್ನ ಯಾವ ಅನಂತಶಕ್ತಿಯಿಂದ, ಹೇಗೆ ಉಂಟುಮಾಡುತ್ತಾನೆ. ಈ ಜೀವಜಡಗಳಲ್ಲಿ ನಿಯಾಮಕನಾಗಿ ನಾನಾ ಕ್ರೀಡೆ ಮಾಡುವ ರೀತಿಗಳನ್ನೂ ತಾನೇ ಸ್ವಯಂ ಅನೇಕ ಅವತಾರಗಳನ್ನು ತಾಳಿ ಲೋಕರಕ್ಷಣಾರ್ಥವಾಗಿ ಕ್ರೀಡಿಸುವ ರೀತಿಯನ್ನೂ ನನಗೆ ಹೇಳಿರಿ. ಲೋಕದಲ್ಲಿ ಜೀವರು ಅಪೇಕ್ಷಿಸಿದ ಸರ್ವವನ್ನೂ ಯಾವ ರೀತಿಯಿಂದ ಅವರಿಗೆ ಕೊಡುತ್ತಾನೆ? ಈ ವ್ಯಾಪಾರಗಳು ಮಹಾಜ್ಞಾನಿಗಳಿಂದಲೂ ತಿಳಿಯಲು ಕಷ್ಟವಾಗಿರುವುವು ಮತ್ತು ಸತ್ವರಜಸ್ತಮೋಗುಣಗಳಲ್ಲಿ ಪ್ರವೇಶಿಸಿ, ಜೀವರನ್ನು ಆ ಗುಣಗಳಿಂದ ಬದ್ಧರನ್ನಾಗಿ ಮಾಡಿ, ತಾನು ಆ ಗುಣಗಳಿಂದ ಹೇಗೆ ಸಂಬಂಧವಿಲ್ಲದೇ ಇರುತ್ತಾನೆಯೋ ತಿಳಿಯದು. ಇವುಗಳನ್ನೆಲ್ಲಾ ಕೃಪೆಯಿಟ್ಟು ನನಗೆ ತಿಳಿಸಬೇಕೆಂದು ಪ್ರಾರ್ಥಿಸಿದನು.

## अथ चतुर्थोऽध्यायः

## ಶುಕಾಚಾರ್ಯರಿಂದ ಮಂಗಳಾಚರಣೆ

ಈ ರೀತಿಯಲ್ಲಿ ಪ್ರಶ್ನೆ ಮಾಡಿಸಿಕೊಂಡ ತರುವಾಯ, ಶ್ರೀಶುಕರು ಈ ಪ್ರಶ್ನೆಗಳಿಗಾಗಿ, ಸಂಪೂರ್ಣ ಭಾಗವತ ಪ್ರವಚನದಿಂದ ಉತ್ತರ ಹೇಳಲು ಸಂಕಲ್ಪಿ ಸಿ, ಶಿಷ್ಟಾಚಾರ ಸಂಪ್ರದಾಯವನ್ನು ಲೋಕದ ಜನರಿಗೆ ತಿಳಿಸಿಕೊಡುವುದಕ್ಕಾಗಿ, ಮೊದಲು ಪರಮಾತ್ಮನನ್ನೂ ಮತ್ತು ಗುರುಗಳನ್ನೂ, ಧ್ಯಾನಿಸಿ ನಮಸ್ಕರಿಸುವ ರೀತಿಯನ್ನು, ತಾವು ಮಾಡಿ ತೋರಿಸುತ್ತಾರೆ:-

ಶ್ರೀ ಶುಕಋಷಿಗಳು ದೇವರನ್ನು ಈ ರೀತಿ ಸ್ತೋತ್ರ ಮಾಡಿದರು:- ಸತ್ಯವಾದ ಈ ಜಗತ್ತಿನ ಸೃಷ್ಟಿ, ಪಾಲನೆ, ಲಯಗಳನ್ನು ಮಾಡುವುದಕ್ಕಾಗಿ ಜ್ಞಾನ, ಇಚ್ಛಾ, ಕ್ರಿಯಾಶಕ್ತಿಗಳೆಂಬ ನಿತ್ಯಗಳಾದ ತನ್ನ ಮೂರುವಿಧ ಶಕ್ತಿಗಳನ್ನು ಧರಿಸಿ, ದೇಹಸಹಿತರಾದ ಜೀವರ ಚಕ್ಷುರಾದಿ ಜ್ಞಾನೇದ್ರಿಯಗಳಿಗೆ ಗೋಚರನಾಗದೇ ಇರುವವನಾಗಿ, ಸರ್ವರಲ್ಲೂ ಅಂತರ್ಯಾಮಿಯಾಗಿ, ಗುಣಪೂರ್ಣನಾಗಿರುವ, ಆ ಪುರುಷನಾಮಕ ಶ್ರೀಪರಮಾತ್ಮನಿಗೆ ಪುನಃ ಪುನಃ ನಮಸ್ಕಾರಗಳು. ಸಕಲಾಭೀಷ್ಟಗಳೂ ದೇವರಪ್ರಸಾದದಿಂದ ಲಭಿಸುವುದೆಂದು ತಿಳಿದು, ಭಕ್ತಿಯಿಂದ ಶ್ರೀಮನ್ನಾರಾಯಣನಿಗೆ ನಮಸ್ಕಾರ,

ಸ್ತೋತ್ರ, ಅರ್ಚನೆಗಳನ್ನು ನಿರಂತರ ಮಾಡತಕ್ಕ ಸಜ್ಜನರಿಗೆ, ದುಃಖಗಳನ್ನು ಕೊಡತಕ್ಕ ಪಾಪಸಮೂಹಗಳನ್ನು ನಾಶಮಾಡತಕ್ಕವನೂ, ತನ್ನನ್ನು ಆರಾಧಿಸದೇ ಬಿಟ್ಟ ದುರ್ಜನರಿಗೆ ಸಮಸ್ತ ಸುಖಗಳ ನಾಶವನ್ನು ಮಾಡಿ ದುಃಖಗಳನ್ನು ಕೊಡುವವನೂ, ಪೂರ್ಣ ಸಾಧುಗುಣ ವುಳ್ಳವನೂ, ಪರಮಹಂಸರೆಂಬ ಬ್ರಹ್ಮಾದಿದೇವತೆಗಳಿಗೂ, ಹಂಸರೆಂಬ ಸನ್ಯಾಸಿಗಳಿಗೂ ಅತ್ಯಂತ ಶ್ರೇಷ್ಠವಾದ ಜ್ಞಾನಾನಂದಾದಿಗಳನ್ನು ಕೊಡುವನೂ, ಆದ ಆ ಪುರುಷನಾಮಕ ಶ್ರೀಮನ್ನಾರಾಯಣನಿಗೆ ಪುನಃ ನಮಸ್ಕರಿಸುತ್ತೇನೆ.

ವೇದೋಕ್ತ ಮಾರ್ಗದಿಂದ ತನ್ನನ್ನು ಪೂಜಿಸುವ ಭಕ್ತರಿಗೆ, ಜ್ಞಾನವನ್ನು ಕೊಡುವವನಾದುದರಿಂದ ಋಷಭನಾಮಕನೂ, ಐಕ್ಯಾದಿ ಮಿಥ್ಯಾಜ್ಞಾನದಿಂದ ಉಪಾಸನೆ ಮಾಡುವ ದುರ್ಬುದ್ಧಿ ವುಳ್ಳವರಿಗೆ ಗೋಚರನಾಗದವನೂ, ಸಮಾಧಿಕರಹಿತವಾದ ಲೋಕವಿಲಕ್ಷಣ ನಿರಂತರ ಚಿದಾನಂದರಸಗಳಿಂದ ಕೂಡಿದ ರತಿಸುಖವನ್ನು, ಬ್ರಹ್ಮಶಬ್ದವಾಚ್ಯನಾದ ತನ್ನ ರೂಪಗಳಿಂದಲೇ ಅನುಭವಿಸುವವನೂ, ಆದುದರಿಂದ ಸ್ವರತ ಎಂದು ಕರೆಸಿಕೊಳ್ಳುವನೂ, ಲಕ್ಷ್ಮೀದೇವಿಯರಲ್ಲಿ ರತಿಕ್ರೀಡೆಮಾಡುವುದು, ಲಕ್ಷ್ಮೀದೇವಿಯರಿಗೆ ಸುಖಕೊಡುವುದಕ್ಕಾಗಿಯೇ ಹೊರತು, ತನ್ನ ಸುಖಕ್ಕೆ ಲಕ್ಷ್ಮೀದೇವಿಯರ ಅಪೇಕ್ಷೆಯೂ ದೇವರಿಗಿಲ್ಲ ಎಂದು ತಿಳಿಯುವುದೇ, ದೇವರ ಸುಖ ವೈಲಕ್ಷಣ್ಯವನ್ನು ತಿಳಿಯುವ ಬಗೆ

ಎಂದರಿಯಬೇಕು. ಇಂತಹ ಋಷಭಾವತಾರ ಮಾಡಿದ ಜಗತ್ಸ್ವಾಮಿಗೆ ನಮಸ್ಕಾರ, ನಮಸ್ಕಾರ.

ಯಾರ ನಾಮಸಂಕೀರ್ತನೆಯಿಂದಲೂ, ಯಾರ ಚರಿತ್ರೆಯನ್ನು ಕೇಳುವುದರಿಂದಲೂ, ಯಾರ ನಾಮಸ್ಮರಣೆ, ರೂಪಚಿಂತನೇಗಳಿಂದಲೂ, ಯಾರ ಅರ್ಚನೆ, ವಂದನಾದಿಗಳಿಂದಲೂ, ಪ್ರಪಂಚದಲ್ಲಿರುವ ಉಪಾಸಕರಿಗೆ ಸಮಸ್ತದುರಿತಗಳೂ ನಾಶವಾಗಿ ಸುಖ ಉಂಟಾಗುವವೋ ಅಂತಹ ಸುಮಂಗಲ ಕೀರ್ತಿಯುಳ್ಳ ಶ್ರೀಕೃಷ್ಣರೂಪ ಪರಮಾತ್ಮನಿಗೆ ನಮಸ್ಕರಿಸುತ್ತೇನೆ. ಯಾವ ಶ್ರೀಪರಮಾತ್ಮನಲ್ಲಿ ಅತ್ಯಂತ ಭಕ್ತಿಯಿಂದ, ವಿಷಯೇಚ್ಛೆಯಿಲ್ಲದ ವೈರಾಗ್ಯಶೀಲರು, ಅನನ್ಯಭಾವದಿಂದ ಶರಣು ಹೋಗುತ್ತಾರೋ, ಅಂತಹವರಿಗೆ ಅಜ್ಞಾನಗಳನ್ನು ನಾಶಮಾಡಿ, ಅಪರೋಕ್ಷ ಜ್ಞಾನವನ್ನೂ ಮೋಕ್ಷವನ್ನೂ ಕೊಡತಕ್ಕ, ಪಾವನ ಚರಿತ್ರನಾದ, ಶ್ರವಣ ಮಾಡುವವರಿಗೆ ಪರಮ ಸದ್ಗತಿ, ಸುಮಂಗಳಪ್ರದನಾದ, ಶ್ರೀ ಪರಮಪುರುಷರಿಗೆ ನಮಸ್ಕಾರ.

ತಪಸ್ವಿಗಳೂ, ದಾನಿಗಳೂ ಯಶೋವಂತರೂ, ಜ್ಞಾನಿಗಳೂ, ಮಂತ್ರ ಸ್ತೋತ್ರ ಮಾಡುವವರೂ, ಆದ ಮಂಗಳ ಸ್ವರೂಪರು, ತಮ್ಮ ತಪಸ್ಸು ದಾನಾದಿಗಳನ್ನು ಶ್ರೀ ಪರಮಾತ್ಮನಿಗೆ ಅರ್ಪಿಸಿ, ತಮ್ಮ ಇಷ್ಟಪ್ರಾಪ್ತಿರೂಪ ಕ್ಷೇಮವನ್ನು ಹೊಂದುತ್ತಾರೆ- ಹಾಗಲ್ಲದೆ ಶ್ರೀ ಪರಮಾತ್ಮನಿಗೆ ಅರ್ಪಿಸದಿದ್ದರೆ, ಅವುಗಳಿಂದ ದುಃಖವನ್ನೇ ಹೊಂದುವರು. ಕ್ಷೇಮವು ಲಭಿಸುವುದಿಲ್ಲ. ಅಂತಹ ಪರಮಾತ್ಮನಿಗೆ, ಪುಣ್ಯ ಶ್ರವಣನಿಗೆ, ನಮಸ್ಕಾರ, ನಮಸ್ಕಾರ.

ಶಬರನಿಂದ  ಕಾಡು ಶಬರಿಯಲ್ಲಿ ಜನಿಸಿದ ಕಿರಾತರೂ, ವೈಶ್ಯನಿಂದ ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿದವರು ವೈದೇಹಿಕರು. ವೈದೇಹಿಕನಿಂದ ಪುಲ್ಕಸೀ ಅಂದರೆ ಚಂಡಾಲ ಸ್ತ್ರೀಯಲ್ಲಿ ಹುಟ್ಟಿದವರು ಹೂಣರು. ವೈದೇಹಿಕರ ಪುತ್ರರು ಆಂಧ್ರರು. ಬ್ರಾಹ್ಮಣನೆಂದು ಗೊತ್ತಾಗಲೂ ಸಾಧ್ಯವಿಲ್ಲದ ಬ್ರಾಹ್ಮಣನೆಂದು ಹೇಳಿಕೊಳ್ಳುವ, ಮಧ್ಯಪಾನ ಮಾಡುವನಿಂದ ಕಿರಾತಿಯಲ್ಲಿ ಹುಟ್ಟಿದವರು ಪುಲಿಂದರು. ಶೂದ್ರನಿಂದ ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿದವರು ಚಂಡಾಲರು. ಚಂಡಾಲ ಮಕ್ಕಳು ಪುಲ್ಕಸರು. ಬ್ರಾಹ್ಮಣನಿಗೆ ವೈಶ್ಯಸ್ತ್ರೀಯರಲ್ಲಿ ಹುಟ್ಟಿದವರು ಅಂಬಷ್ಠರು, ಬ್ರಾಹ್ಮಣನಿಂದ ಅಂಬಷ್ಠಕನ್ಯೆಯಲ್ಲಿ ಹುಟ್ಟಿದವರು ಆಂಬೀಕರು. ಕಂಕರನ್ನು ಕರ್ಪರರೆಂದೂ ಕರೆಯುತ್ತಾರೆ. ಕ್ಷತ್ರಿಯನಿಂದ ವೈಶ್ಯ ಸ್ತ್ರೀಯಲ್ಲಿ ಹುಟ್ಟಿದವರು, ಗಡ್ಡಮೀಸೆಗಳನ್ನು ಬಿಡತಕ್ಕ ಯವನರು. ಶಕು, ತುರುಷ್ಕರಲ್ಲಿ ಪ್ರಭೇದ ಜಾತಿಯವರು. ಇವರೂ ಅಲ್ಲದೆ ಡೊಂಬರು, ಕುರುವಿಂದರು ಮತ್ತು ಪೂತಿಬರು ಇತ್ಯಾದಿ ಮಿಶ್ರಜಾತಿಗಳಿಂದ ಹುಟ್ಟಿದ ೬೪ ಬಗೆಯವರಿರುತ್ತಾರೆ. ಇವರೆಲ್ಲರೂ ಪಾಪಜೀವರೆಂದು ಕರೆಸಿಕೊಳ್ಳುತ್ತಾರೆ. ಇಂತಹ ಜೀವರೂ ಕೂಡ ಪರಮಾತ್ಮನಲ್ಲಿ ಭಕ್ತಿ ಮಾಡಿದರೆ ಯಾವ ಪರಮಾತ್ಮನು ಅವರನ್ನೂ ಪಾವನರನ್ನಾಗಿ ಮಾಡಿ

## अथ चतुर्थोऽध्यायः

ಸದ್ಗತಿಕೊಡುವನೋ ಅಂತಹ ಶ್ರೀಪರಮಾತ್ಮನಿಗೆ ನಮಸ್ಕಾರ.

ವೇದಾದಿ ವಾಙ್ಮನಸ್ಸಿಗೆ ಅಭಿಮಾನಿಯೂ, ಸರ್ವಸಂಪತ್ತಿಗೂ ಅಭಿಮಾನಿಯಾದ ಶ್ರೀನಾಮಕ ಲಕ್ಷ್ಮೀದೇವಿಗೆ ಸರ್ವಾಭೀಷ್ಟವನ್ನೂ, ಜೀವನವನ್ನೂ, ಕೊಡುವವನಾದ ಕಾರಣ ಶ್ರೀಯಃಪತಿ ಎಂದು ಪ್ರಖ್ಯಾತನೂ, ಯಜ್ಞಗಳಿಂದ ಆರಾಧಿತನಾಗಿ ಭಕ್ತರ ಅಭೀಷ್ಟಗಳನ್ನು ಕೊಡುವವನಾದುದರಿಂದ ಯಜ್ಞಪತಿ ಎಂದೂ, ಸರ್ವಲೋಕ ಸರ್ವಜನರ ರಕ್ಷಕನಾದ ಕಾರಣ ಪ್ರಜಾಪತಿ ಎಂದೂ, ಸಕಲರ ಮನೋವೃತ್ತಿ ಪ್ರೇರಕನಾದ್ದರಿಂದ ಧಿಯಾಪತಿ ಎಂದೂ, ಈ ಹದಿನಾಲ್ಕುಲೋಕಗಳನ್ನೂ ಬ್ರಹ್ಮಾಂಡವನ್ನೂ ತನ್ನ ಅಪರಿಮಿತಶಕ್ತಿಯಿಂದ ಧರಿಸಿರುವುದರಿಂದ ಲೋಕಪತಿ ಎಂದೂ, ಧರಾಪತಿಃ ಎಂದರೆ ಸಕಲಜಗತ್ತನ್ನೂ ಧರಿಸಿರತಕ್ಕ ಭೂದೇವಿಯನ್ನು ಹಿಂದೆ ರಸಾತಳದಿಂದ ತಂದು ಸ್ಥಾಪಿಸಿದ್ದರಿಂದ ಧರಾಪತಿ ಎಂದೂ, ಅಂಧಕರೆಂದರೆ ಅಜ್ಞಾನಿಗಳಿಗೂ, ವೃಷ್ಣಿ-ಗಳೆಂದರೆ ಅಭಿವೃದ್ಧವಾದ ಪ್ರಕೃಷ್ಟಜ್ಞಾನಿಗಳಿಗೂ, ಸಾತ್ವತಾಂ-ಎಂದರೆ ಜ್ಞಾನಭಕ್ತ್ಯಾದಿಗಳಿಂದ ಸಾಧುಗುಣರಾಗಿರುವ ದೇವತೆಗಳಿಗೂ, ಗತಿ-ಸರ್ವಚೇಷ್ಟಾಪ್ರದನು, ಪತಿ-ಸರ್ವದಾಜೀವನಾದಿಗಳನ್ನು ಕೊಟ್ಟು ಕಾಪಾಡುವನೂ ಆದ, ಬ್ರಹ್ಮಾದಿ ದೇವತೆಗಳೊಡೆಯನಾದ ಪುರುಷನಾಮಕ, ಷಡ್ಗುಣೈಶ್ವರ್ಯಸಂಪನ್ನನು ನಮಗೆ ಪ್ರಸನ್ನನಾಗಲಿ. ಯೋಗಿಗಳು ತಮ್ಮ ಹೃತ್ಕಮಲದಲ್ಲಿ ಪರಮಾತ್ಮನ ಅತಿನಿರ್ಮಲ, ಅತಿ ಪ್ರಕಾಶ ರೂಪವನ್ನು ಸಮಾಧಿ ಯೋಗದಿಂದ ಧ್ಯಾನಿಸಿ ನೋಡಿ ಆನಂದಿಸುವರು. ಆ ನೋಡಿದ ರೂಪವನ್ನೇ ತಮ್ಮ ಶಿಷ್ಯರಿಗೆ ವರ್ಣಿಸಿ, ಅವರಿಗೂ ಶ್ರೀಪರಮಾತ್ಮನನ್ನು ನೋಡಬೇಕೆಂಬ ಅಭಿಲಾಷೆಯನ್ನು ಹುಟ್ಟಿಸುತ್ತಾರೆ-ಆದುದರಿಂದ ಪರಮಾತ್ಮನು ವೇದರೂಪ ಶಬ್ದಾದಿಗಳಿಂದ ತಿಳಿಯಲ್ಪಡುವುದೂ, ಭಕ್ತಿಜ್ಞಾನ ಧ್ಯಾನಗಳಿಗೊಲಿದು ಪ್ರತ್ಯಕ್ಷನಾಗುವುದೂ, ಉಪಾಸಕರಿಂದ ಕಾಣಲ್ಪಟ್ಟ ವಿಷಯಗಳಾದುದರಿಂದ, ಇವು ಸತ್ಯವಾದ ವಿಷಯಗಳೇ. ಸುಳ್ಳಲ್ಲ. ಈ ರೀತಿ ಭಕ್ತಿದಯಾಪರನಾದ, ಮೋಕ್ಷಪ್ರದನಾದುದರಿಂದ ಮುಕುಂದ ಶಬ್ದವಾಚ್ಯ ಶ್ರೀಪರಮಾತ್ಮನಿಗೆ ನಮಸ್ಸಾರ.

ನಂತರ ಗುರುಭಾವದಿಂದ ಬ್ರಹ್ಮದೇವರಿಗೂ, ವೇದವ್ಯಾಸರಿಗೂ ನಮಸ್ಕರಿಸುತ್ತಾರೆ-ಋಗಾದಿ ವೇದಾರ್ಥಗಳನ್ನೇ ಪತಿಪಾದಿಸುವುದರಿಂದ ವೇದಾಭಿಮಾನಿಯಾದ ಸರಸ್ವತಿಯು, ಈ ಭಾಗವತರೂಪವಾಗಿ, ಚತುರ್ಮುಖ ಬ್ರಹ್ಮದೇವರ ನಾಲ್ಕು ಮುಖಗಳಿಂದ, ಸರ್ವಸುಂದರವಾದ ಅವಯವಗಳಿಂದಲೂ, ಸರ್ವಾಲಂಕಾರ ಭರಿತಳಾಗಿಯೂ ಹುಟ್ಟಿದಳು. ಯಾವ ಬ್ರಹ್ಮದೇವರು ಮೊದಲು ಭಾಗವತವನ್ನು ನಾರದಾದಿಗಳಿಗೆ, ಶ್ರೀಮನ್ನಾರಾಯಣನಿಂದ ಪ್ರೇರಿತರಾಗಿ ಹೇಳಿದರೋ, ಅಂತಹಸರಸ್ವತೀಪತಿಯಾದಬ್ರಹ್ಮದೇವರಿಗೆನಮಸ್ಕಾರ.ಮಹತ್ತತ್ವಾದಿಗಳಿಂದಪಂಚಮಹಾಭೂತಗಳನ್ನು

## अथ चतुर्थोऽध्यायः

ಸೃಷ್ಟಿಸಿ, ಆ ಪಂಚಭೂತಗಳೆಂಬ ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶಗಳಿಂದ ಮನುಷ್ಯಾದಿ ಸಕಲಜೀವರ ದೇಹಗಳನ್ನು ಸೃಷ್ಟಿಸಿ, ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯ, ಮನಸ್ಸು, ಇವುಗಳನ್ನೂ ಆ ಪಂಚಭೂತನಿರ್ಮಿತ ದೇಹದಲ್ಲಿಟ್ಟು, ಹೀಗೆ ಹದಿನಾರುಕಲೆಗಳೆಂಬ ಬಂಧನಗಳನ್ನು ಜೀವರಿಗೆ ಹಾಕಿ, ಆ ದೇಹಗಳೆಂಬ ಸಮಸ್ತ ಅಧಿಷ್ಠಾನಗಳಲ್ಲೂ, ಆಯಾ ಆಕಾರಗಳಿಂದ ಪ್ರವೇಶಿಸಿ ಯಾವ ಪುರುಷನಾಮಕನು ಅನಂತಾನಂತ ಜೀವರಿಗೆ ವಾಗಾದಿ ಸಕಲಚೇಷ್ಟಾಪ್ರದನಾಗಿರುತ್ತಾನೆಯೋ, ಆ ಶ್ರೀಹರಿಯ ಗುಣಾನುವರ್ಣನೆಯನ್ನು ಮಾಡುತ್ತೇನೆಂದು ಉದ್ದೇಶಿಸಿರುವ ನನ್ನ ವಾಕ್ಯಗಳನ್ನು ಪರಿಶುದ್ಧಗಳನ್ನಾಗಿಯೂ, ರಮಣೀಯಗಳನ್ನಾಗಿಯೂ ಮಾಡಲಿ.

ಯಾವ ವೇದವ್ಯಾಸದೇವರು ತಮ್ಮ ಲಕ್ಷಣಗಳನ್ನೇ ಹೇಳತಕ್ಕ ಈ ಭಾಗವತವನ್ನು, ತಮ್ಮ ಅಚಿಂತ್ಯ ಯೋಗಶಕ್ತಿಯಿಂದ ರಚಿಸಿ, ಮೊದಲು ಪ್ರೇಮದಿಂದ ನನಗುಪದೇಶಿಸಿದರೋ ಅಂತಹ ಋಷಿಕುಲ ಶಿರೋಮಣಿಗಳಾದ, ನಮ್ಮ ತಂದೆ ಶ್ರೀವ್ಯಾಸ ಮಹರ್ಷಿಗಳಿಗೆ ನಮಸ್ಕರಿಸುತ್ತೇನೆ. ಸರ್ವಜ್ಞಾನಪ್ರದನಾದ ಯಾವ ವಾಸುದೇವನ ಮುಖಕಮಲದಿಂದ ಅಮೃತ ಬಿಂದುಗಳಂತೆ ಸ್ರವಿಸುವ ಈ ಭಾಗವತವನ್ನು, ಬ್ರಹ್ಮಾದಿ ದೇವತೆಗಳು ಸೇವಿಸಿದರೋ! ಯಾವ ಶ್ರೀಕೃಷ್ಣ ಮುಖಕಮಲದಿಂದ ಸ್ರವಿಸಲ್ಪಟ್ಟ ಈ ಭಾಗವತಾಮೃತವು ಉದ್ಧವಾದಿಗಳಿಂದ ಪಾನಮಾಡಲ್ಪಟ್ಟಿತೋ ಅಂತಹ, ಸರ್ವವೇದಪ್ರತಿಪಾದ್ಯ, ಸರ್ವಜ್ಞಾನಪ್ರತಿಪಾದ್ಯ, ಶ್ರೀವಾಸುದೇವನಾಮಕ, ಈ ಗ್ರಂಥಪ್ರತಿಪಾದ್ಯನಾದ ಶ್ರೀಕೃಷ್ಣರೂಪೀ ಪರಮಾತ್ಮನನ್ನು ಅತ್ಯಂತ ಭಕ್ತಿಯಿಂದ ನಮಸ್ಕರಿಸುತ್ತೇನೆ.

ಎಲೈ! ಪರೀಕ್ಷಿದ್ರಾಜನೇ! ಹಿಂದೆ ನಾರದರು, ಬ್ರಹ್ಮದೇವರನ್ನು ಸಮೀಪಿಸಿ, ನಮಸ್ಕಾರ ಮಾಡಿ, ಆತ್ಮನಾಮಕ ಶ್ರೀಪರಮಾತ್ಮನನ್ನು ತಮಗೆ ತಿಳಿಸಬೇಕೆಂದು ಪ್ರಾರ್ಥಿಸಿದಾಗ, ಸಕಲ ವೇದಜ್ಞರಾದ ಬ್ರಹ್ಮದೇವರು, ಎಲೈ ನಾರದನೇ, ನೀನು ಕೇಳಿದ ಭಗವತ್ಸ್ವರೂಪವನ್ನು ನಾನು ನನ್ನ ತಂದೆಯಾದ ಶ್ರೀಮನ್ನಾರಾಯಣ ದೇವರಿಂದ ಉಪದೇಶವನ್ನು ಹೊಂದಿದ್ದೇನೆ. ಆ ತತ್ವಗಳನ್ನು ನಿನಗೂ ಹೇಳುವೆನು ಎಂದರು.

**ಇತಿ ಶ್ರೀಮದ್ಭಾಗವತ ದ್ವಿತೀಯಸ್ಕಂಧದ ನಾಲ್ಕನೆಯ ಅಧ್ಯಾಯವು ಮುಗಿಯಿತು.**

# अथ पञ्चमोऽध्यायः

**नारद उवाच**

देवदेव नमस्तेस्तु भूतभावनपूर्वज।
तद्विजानीहि यज्ज्ञानमात्मतत्वनिदर्शनम्॥ १ ॥

यद्रूपं यदधिष्ठानं यतः सृष्टमिदं विभो।
यत्संस्थं यत्परं यच्च तत्तत्वं वद तत्वतः ॥ २ ॥

सर्वं ह्येतद्भवान् वेद भूतभव्यभवत्प्रभुः।
करामलकवद्विश्वं विज्ञानावसितं तव॥ ३ ॥

यद्विज्ञानो यदाधारो यत्परस्त्वं यदात्मकः।
एकः सृजसि भूतानि भूतैरेवात्ममायया॥ ४ ॥

आत्मन् भावयसे तानि न पराग्भावयेः स्वयम्।
आत्मशक्तिमवष्टभ्य सूत्रनाभिरिवाक्लमः ॥ ५ ॥

नाहं वेद परं त्वस्मान्नावरं न समं विभो।
नामरूपगुणैर्भाव्यं सदसत्किञ्चिदन्यतः ॥ ६ ॥

स भवानचरद् घोरं यत्तपः सुसमाहितः।
तेन खेदयसे नस्त्वं परां शङ्कां च यच्छसि॥ ७ ॥

एतन्मे पृच्छतः सर्वं सर्वज्ञ सकलेश्वर।
विजानीहि यथैवेदमहं बुध्येऽनुशासितः ॥ ८ ॥

ब्रह्मोवाचसम्यक्कारुणिकस्येदं वत्स ते विचिकित्सितम्।
यदहं चोदितः सौम्य भगवद्वीर्यदर्शने॥ ९ ॥

नानृतं बत तच्चापि यथा मां प्रब्रवीषि भोः।
अविज्ञाय परं मत्त एतावत्त्वं यतो हि मे॥ १० ॥

येन स्वरोचिषा विश्वं रोचितं रोचयाम्यहम्।
यथार्कोऽग्निर्यथा सोमो यथर्क्षग्रहतारकाः ॥ ११ ॥

## अथ पञ्चमोऽध्यायः

नमस्तस्मै भगवते वासुदेवाय धीमहि ।
यन्मायया दुर्जयया मां वदन्ति जगद्गुरुम् ॥ १२ ॥

विलज्जमानया यस्य स्थातुमीक्षापथेऽमुया ।
विमोहिता विकत्थन्ते ममाहमिति दुर्धियः ॥ १३ ॥

द्रव्यं कर्म च कालश्च स्वभावो जीव एव च ।
वासुदेवात्परो ब्रह्मन्न चान्योऽर्थोऽस्ति तात्वतः ॥ १४ ॥

नारायणपरा वेदा देवा नारायणाङ्गजाः ।
नारायणपरा लोका नारायणपरा मखाः ॥ १५ ॥

नारायणपरो योगो नारायणपरं तपः ।
नारायणपरं ज्ञानं नारायणपरा गतिः ॥ १६ ॥

तस्यापि द्रष्टुरीशस्य कूटस्थस्याखिलात्मनः ।
सृज्यं सृजामि सृष्टोऽहमीक्षयैवाभिचोदितः ॥ १७ ॥

सत्वं रजस्तम इति निर्गुणस्य गुणास्त्रयः ।
स्थितिसर्गनिरोधेषु गृहीता मायया विभोः ॥ १८ ॥

कार्यकारणकर्तृत्वे द्रव्यज्ञानक्रियाश्रयाः ।
बध्नन्ति नित्यदा मुक्तं मायिनं पुरुषं गुणाः ॥ १९ ॥

स एष भगवाँल्लिङ्गैस्त्रिभिरेतैरधोक्षजः ।
स्वलक्षितगतिर्ब्रह्मन्सर्वेषां मम चेश्वरः ॥ २० ॥

कालं कर्म स्वभावञ्च मायेशो मायया स्वया ।
आत्मन् यदृच्छया प्राप्तं विबुभूषुरुपाददे ॥ २१ ॥

कालाद्गुणव्यतिकरात्परिणामस्वभावतः ।
कर्मणो जन्म महतः पुरुषाधिष्ठितादभूत् ॥ २२ ॥

महतस्तु विकुर्वाणाद्रजस्सत्वोपबृंहितात् ।
तमः प्राधानस्त्वभवद् द्रव्यज्ञानक्रियात्मकः ॥ २३ ॥

## अथ पञ्चमोऽध्यायः

सोऽहङ्कार इति प्रोक्तो विकुर्वन् समभूत्त्रिधा ।
वैकारिकस्तैजसश्च तामसश्चेति यद्भिदा ।
द्रव्यशक्तिः क्रियाशक्तिर्ज्ञानशक्तिरिति प्रभोः ॥ २४ ॥

तामसादपि भूतादेर्विकुर्वाणादभून्नभः ।
तस्य मात्रागुणः शब्दो लिङ्गं यद्द्रष्टृदृश्ययोः ॥ २५ ॥

नभसोऽथ विकुर्वाणादभूत्स्पर्शगुणोऽनिलः ।
परान्वयाच्छब्दवांश्च प्राण ओजः सहो बलम् ॥ २६ ॥

वायोरपि विकुर्वाणात्कालकर्मस्वभावतः ।
उदपद्यत तेजो वै रूपवत्स्पर्शशब्दवत् ॥ २७ ॥

तेजसस्तु विकुर्वाणादासीदम्भो रसात्मकम् ।
रूपवत्स्पर्शवच्चाम्भो घोषवच्च तदन्वयात् ॥ २८ ॥

विशेषस्तु विकुर्वाणादम्भसो गन्धवानभूत् ।
परान्वयाद्रसस्पर्शरूपशब्दगुणान्वितः ॥ २९ ॥

वैकारिकान्मनो जज्ञे देवा वैकारिका दश ।
दिग्वाताकप्रचेतोऽश्विवह्नीन्द्रोपेन्द्रमित्रकाः ॥ ३० ॥

तैजसात्तु विकुर्वाणादिन्द्रियाणि दशाभवन् ।
ज्ञानशक्तिः क्रियाशक्तिर्बुद्धिः प्राणस्तु तैजसौ ॥ ३१ ॥

श्रोत्रत्वग्घ्राणदृग्जिह्वावाग्दोर्मेढ्राङ्घ्रिपायवः ।
य एतेऽसङ्गता भावा भूतेन्द्रियमनोगुणाः ।
यदायतननिर्माणे न शेकुर्ब्रह्मवित्तम ॥ ३२ ॥

तदा संहत्य चान्योन्यं भगवच्छक्तिचोदिताः ।
सदसत्त्वमुपादाय नो भयं ससृजुर्ह्यदः ॥ ३३ ॥

वर्षपूगसहस्रान्ते तदण्डमुदकेशयम् ।
कालकर्मस्वभावस्थोजीवोजीवमजीजनत् ॥ ३४ ॥

## अथ पञ्चमोऽध्यायः

स एष पुरुषस्तस्मादण्डं निर्भिद्य निर्गतः ।
सहस्रोर्वङ्घ्रिबाह्वक्षिः सहस्राननशीर्षवान् ॥ ३५ ॥

यस्येहावयवैर्लोकान् कल्पयन्ति मनीषिणः ।
ऊर्वादिभिरधः सप्त सप्तोर्ध्वं जघनादिभिः ॥ ३६ ॥

पुरुषस्य मुखं ब्रह्म क्षत्रमेतस्य बाहवः ।
ऊर्वोर्वैश्यो भगवतः पद्भ्यां शूद्रो व्यजायत ॥ ३७ ॥

भूर्लोकः कल्पितः पद्भ्यां भुवर्लोकोऽस्य नाभितः ।
हृदा स्वर्लोक उरसा महर्लोको महात्मनः ॥ ३८ ॥

ग्रीवायां जनलोकश्च तपोलोकोऽस्य नेत्रयोः ।
मूर्धभिः सत्यलोकस्तु ब्रह्मलोकः सनातनः ॥ ३९ ॥

तत्कट्यामतलं क्लृप्तमूरूभ्यां वितलं विभोः ।
जानुभ्यां सुतलं क्लृप्तं जङ्घाभ्यान्तु तलातलम् ॥ ४० ॥

महातलन्तु गुल्फाभ्यां प्रपदाभ्यां रसातलम् ।
पातालं पादतलतः इति लोकमयः पुमान् ॥ ४१ ॥

भूर्लोकः कल्पितः पद्भ्यां भुवर्लोकस्तु नाभितः ।
स्वर्लोकः कल्पितो मूर्धिर्न इति वा लोककल्पना ॥ ४२ ॥

**॥ इति श्रीमद्भागवते (द्वितीयस्कन्धे(*2) पञ्चमोऽध्यायः ॥**

**॥ ಐದನೆಯ ಅಧ್ಯಾಯ ॥**

## ಬ್ರಹ್ಮನಾರದ ಸಂವಾದ

ಹಿಂದಿನ ಅಧ್ಯಾಯದ ಅಂತ್ಯದಲ್ಲಿ ಶ್ರೀಶುಕಋಷಿಗಳು, ಭಾಗವತವೆಂಬ, ಶ್ರೀಮನ್ನಾರಾಯಣನ ಜಗತ್ಸೃಷ್ಟ್ಯಾದ್ಯಪರಿಮಿತ ಶಕ್ತಿಗಳನ್ನೂ, ಸರ್ವಜಗತ್ತಿಗೆ ಆಶ್ರಯತ್ವವನ್ನೂ, ಸೃಷ್ಟ್ಯಾದಿಕ್ರಮಗಳೇ ಮುಂತಾದ ಪರಮಾಶ್ಚರ್ಯ ವ್ಯಾಪಾರಗಳನ್ನು ನಿರೂಪಿಸುವ ಗ್ರಂಥವನ್ನು ಹೇಳುತ್ತೇನೆಂದು ಸಂಕಲ್ಪಿಸಿದ್ದರಷ್ಟೆ? ಈವಾಗ ಅದನ್ನೇ ಹೇಳಲುದ್ದೇಶಿಸಿ ಕಮಲಗರ್ಭರೆಂಬ ಬ್ರಹ್ಮದೇವರಿಗೂ,

ದೇವರ್ಷಿಗಳಾದ ನಾರದರಿಗೂ ಸಂವಾದರೂಪವಾಗಿ ಈ ಅಧ್ಯಾಯದಿಂದ ಭಾಗವತಕಥೆಯನ್ನು ಆರಂಭಿಸುತ್ತಾರೆ.

ಎಲೈ! ಪರೀಕ್ಷಿದ್ರಾಜನೆ, ಮೊದಲು ಶ್ರೀಪರಮಾತ್ಮನಿಂದ ಉಪದೇಶಿಸಲ್ಪಟ್ಟು ಬ್ರಹ್ಮದೇವರು, ಈ ಭಾಗವತರಹಸ್ಯಗಳನ್ನು ನಾರದಾದಿಗಳಿಗೆ ಹೇಳಿದರೆಂದು ತಿಳಿಸಿದ್ದೆನಷ್ಟೆ? ನಾರದರು, ಭಗವತ್ತತ್ವವನ್ನು ಬ್ರಹ್ಮದೇವರಿಂದ ತಿಳಿಯಲಪೇಕ್ಷಿಸಿ ಸತ್ಯಲೋಕಕ್ಕೆ ಹೋಗಿ, ಅಲ್ಲಿ ಧ್ಯಾನಾಸಕ್ತರಾದ ಬ್ರಹ್ಮದೇವರನ್ನು ನೋಡಿ ನಮಸ್ಕರಿಸಿದರು. ನಂತರ ಬ್ರಹ್ಮದೇವರಿಂದ ಆಜ್ಞಪ್ತರಾಗಿ ಸುಖಾಸನದಲ್ಲಿ ಕುಳಿತು ಬ್ರಹ್ಮದೇವರನ್ನು ಈ ರೀತಿ ಪ್ರಶ್ನೆ ಮಾಡಿದರು.

## ನಾರದರ ಪ್ರಶ್ನೆ

ಸಕಲ ಜಗತ್ತನ್ನು ಸೃಷ್ಟಿಸುವುದಕ್ಕೆ ಮುಂಚೆಯೇ, ಜಗದೇಕವಂದ್ಯನಾದ ಶ್ರೀಮನ್ನಾರಾಯಣದೇವರಿಂದ ನಾಭಿಕಮಲದಲ್ಲಿ ಸೃಷ್ಟಿಮಾಡಲ್ಪಟ್ಟು, ಸಕಲದೇವತೆಗಳಿಗೂ ದೇವಸ್ವರೂಪರಾದ ಶ್ರೀಬ್ರಹ್ಮದೇವರೇ, ನನಗೆ ಸರ್ವಭೂತಾಂತರ್ಯಾಮಿಯಾದ ಆತ್ಮನಾಮಕ ಶ್ರೀಪರಮಾತ್ಮನ ನಿಜಪರಿಸ್ಥಿತಿ, ಎಂಬ ತತ್ವವನ್ನು ಉಪದೇಶಮಾಡಿರಿ. ನಾನು ತಿಳಿಯಬೇಕೆಂದಿರುವ ಭಗವತ್ತತ್ವವು ಈ ಕಣ್ಣಿಗೆ ಕಾಣುವ ಪ್ರಪಂಚದಲ್ಲಿರುವ ಸಕಲರೂಪಗಳಿಗೆ ಸೃಷ್ಟಿಕಾರಣವಾಗಿದ್ದೂ, ಇವುಗಳಿಂದ ಸಂಬಂಧವಿಲ್ಲದೇ ಇವುಗಳನ್ನು ತನ್ನಧೀನದಲ್ಲಿಟ್ಟುಕೊಂಡಿರುವ ಲೋಕವಿಲಕ್ಷಣವಾದ ಆ ಭಗವದ್ರೂಪವು ಎಂತಹದು? ಈ ಬ್ರಹ್ಮಾಂಡವು ಸಕಲಜಗತ್ತಿಗೆ ಆಧಾರವಾಗಿ ಪರಮಾತ್ಮನಿಗೆ ಅಧಿಷ್ಠಾನ, ಎಂದರೆ ಪ್ರತಿಮಾರೂಪವಾಗಿದೆ.

ಈ ಬ್ರಹ್ಮಾಂಡಕ್ಕೆ ಮೂಲಾಧಾರನಾದ ಆ ಪರಮಾತ್ಮನ ಅಧಿಷ್ಠಾನವು, ಪ್ರತಿಮಾಸ್ವರೂಪವು ಎಂಥಾದ್ದು? ಈ ಪ್ರಪಂಚದ ಜೀವಜಡವೈಚಿತ್ರ್ಯಗಳ ಸೃಷ್ಟಿಕ್ರಮವು ಹೇಗೆ? ಯಾರನ್ನಾಶ್ರಯಿಸಿ ಪ್ರಪಂಚವು ಸ್ಥಿರವಾಗಿ, ನಿರ್ಭಯವಾಗಿ ಇದೆ? ಈ ಪ್ರಪಂಚದ ಸೃಷ್ಟಿ, ಪಾಲನೆ, ಲಯಗಳು ಯಾರಿಂದ ಮಾಡಲ್ಪಡುತ್ತವೆ? ಸರ್ವ ಜಗತ್ತಿಗೆ ಭಿನ್ನನಾದ ಆ ಪರಮಾತ್ಮನ ಸ್ವಭಾವವು ಎಂತಹುದು? ಅದನ್ನು ನಿರ್ಧರಿಸಿ ನನಗೆ ಹೇಳಿರಿ. ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿರುವ ಸಕಲವಸ್ತುಗಳಿಗೂ ಸ್ವಾಮಿಯು ನೀವಾಗಿರುತ್ತೀರಿ. ಈ ಜಗತ್ತು ಅಂಗೈಲಿರುವ ಒಂದು ನೆಲ್ಲೀಕಾಯಿಯಂತೆ, ನಿಮ್ಮ ಅಸದೃಶಜ್ಞಾನದಿಂದ ಪೂರ್ತಿಯಾಗಿ, ಚೆನ್ನಾಗಿ ತಿಳಿಯಲ್ಪಟ್ಟಿದೆ. ವಿಜ್ಞಾನಸ್ವರೂಪನೂ, ಸಕಲ ಜಗತ್ತಿಗಾಧಾರನೂ, ಸರ್ವೋತ್ತಮನೂ, ಸರ್ವಾತ್ಮಕನೂ ನೀವೇಯೇ ಆಗಿರುತ್ತೀರಿ. ನೀವೇ ನಿಮ್ಮ ಸ್ವೇಚ್ಛೆಯಿಂದ ಈ ಪಂಚಭೂತಾದಿಗಳನ್ನು ನಿಮಿತ್ತೀಕರಿಸಿಕೊಂಡು ಎಲ್ಲಾ ಸೃಷ್ಟಿಯನ್ನೂ ಮಾಡುತ್ತೀರಿ.

## अथ पञ्चमोऽध्यायः

ಈ ಸೃಷ್ಟ್ಯಾದಿಗಳನ್ನು ಲೇಶಾಯಾಸವಿಲ್ಲದೆ, ಹೇಗೆ ಜೇಡರಹುಳು ತನ್ನ ಹೊಟ್ಟೆಯಲ್ಲಿರುವ ದ್ರವ್ಯವನ್ನೇ ಹೊರಕ್ಕೆ ತೆಗೆದು, ವಿಚಿತ್ರವಿಚಿತ್ರವಾಗಿ ದಾರಗಳಿಂದ ಆಕೃತಿಗಳನ್ನು ಮಾಡುತ್ತದೋ, ಹಾಗೆಯೇ ನಿಮ್ಮಲ್ಲೇ ಇರುವ ವಸ್ತುಗಳಿಂದ ನೀವು ಆಯಾಸವಿಲ್ಲದೇ, ಆನಂದರೂಪದಿಂದ, ಕ್ರೀಡಾರೂಪದಿಂದ ಸೃಷ್ಟಿಸುತ್ತೀರಿ. ನಿಮ್ಮಿಂದ ಭಿನ್ನನಾದ, ನಿಮಗಿಂತ ಶ್ರೇಷ್ಠನಾದವನನ್ನು ನಾನೆಲ್ಲಿಯೂ ಕಾಣಲಿಲ್ಲ. ಯಾವುದು ಸ್ಥೂಲವಾದದ್ದು ಸತ್ ಎಂದೂ, ಸೂಕ್ಷ್ಮವಾದದ್ದು ಅಸತ್ ಎಂದೂ ಕರೆಯಲ್ಪಡುತ್ತೋ, ಈ ಸ್ಥೂಲಸೂಕ್ಷ್ಮರೂಪಗಳಿಂದ, ಅನೇಕ ಗುಣಗಳಿಂದ, ಅನೇಕ ಭಾವನೆ ಅಂದರೆ ಸ್ವಭಾವಗಳಿಂದ ಯಾವ್ಯಾವವು ತೋರುತ್ತವೋ ಅವುಗಳಿಗಿಂತ ಶ್ರೇಷ್ಠರನ್ನಾಗಿ ನಿಮ್ಮೊಬ್ಬರನ್ನೇ ತಿಳಿಯುತ್ತೇನೆ. ಆದರೆ ಇಂತಹ ಸರ್ವೋತ್ತಮ, ಸರ್ವಕರ್ತರಾದ ನೀವು ಯಾವ ವಸ್ತುವನ್ನೋ ಧ್ಯಾನಿಸುವಂತೆ ನಾನು ಬಂದಾಗ ತೋರಿತು. ಆದುದರಿಂದ ನನಗೆ ಮನಸ್ಸಿನಲ್ಲಿ ಕಳವಳವಾಗಿದೆ. ನೀವು ಯಾರನ್ನು ಕುರಿತು ಅಂತಹ ತಪಸ್ಸು ಮಾಡುತ್ತಿದ್ದೀರಿ ಎಂಬುವುದನ್ನು ನನಗೆ ತಿಳಿಸಿರಿ. ಅಲ್ಪಬುದ್ಧಿಯುಳ್ಳ ನನಗೆ ಹೇಗೆ ಹೇಳಿದರೆ ಗೊತ್ತಾಗುತ್ತೋ ಆ ರೀತಿಯಲ್ಲಿ, ನಾನು ಮಾಡಿದ ಪ್ರಶ್ನೆಗಳಿಗೆ ಉತ್ತರ ಹೇಳಿ, ಜ್ಞಾನವನ್ನುಪದೇಶಿಸಿರಿ ಎಂದು ಪ್ರಾರ್ಥಿಸಿದರು.

## ಚತುರ್ಮುಖ ಬ್ರಹ್ಮದೇವರ ಉತ್ತರ

ನಂತರ ಬ್ರಹ್ಮದೇವರು ಎಲೈ ವತ್ಸ! ಎಲೈ ಪ್ರೀತಿಪಾತ್ರನಾದ ಬಾಲಕನಾದ ನಾರದನೇ! ನಿನ್ನ ಈ ಅನೇಕ ಪ್ರಶ್ನೆಗಳನ್ನು ಲೋಕದಲ್ಲಿರುವ ಅಜ್ಞ ಜನರಿಗೂ, ನನ್ನಿಂದ ಈಗ ನಿನಗೆ ಹೇಳಲ್ಪಡುವ ಪರಮಾತ್ಮನ ಮಹಾಮಹಿಮೆಗಳ ಜ್ಞಾನ  ಉಂಟಾಗಲೆಂಬ ಅಪೇಕ್ಷೆಯಿಂದಲೂ, ಅಜ್ಞಜನರ ಮೇಲೆ ನಿನಗಿರುವ ಅತ್ಯಂತ ಕರುಣದಿಂದಲೂ ನೀನು ಕೇಳಿರುವೆ ಎಂದು ನಾನು ಭಾವಿಸುತ್ತೇನೆ. ನಿನ್ನ ಈ ಪ್ರಶ್ನೆಗಳು ಶ್ರೀಪರಮಾತ್ಮನ ಅಸದೃಶ ಮಹಿಮೆಗಳೆಂಬ ಅದ್ಭುತ ಅಲೆಗಳನ್ನು ನನ್ನ ಮನಸ್ಸಿನಲ್ಲಿ ಎಬ್ಬಿಸಿದೆ. ಅದರಿಂದ ನಿನ್ನ ನ್ಯಾಯವಾದ ಪ್ರಶ್ನೆಗಳು ನನಗೆ ಬಹಳ ಸಂತೋಷವನ್ನುಂಟು  ಮಾಡಿರುತ್ತೆ.

ಆದರೆ ನೀನು ನನ್ನನ್ನು "ನೀನೇ ಎಲ್ಲವನ್ನೂ ಸೃಷ್ಟಿಮಾಡುತ್ತೀ "ಇವೇ ಮುಂತಾದ ನನಗರ್ಹವಲ್ಲದ ಸ್ತೋತ್ರಗಳನ್ನು ಮಾಡಿದ್ದನ್ನು ನಾನು ಕೇಳಲು ಗಡ ಗಡ ನಡಗುತ್ತೇನೆ. ಇಂತಹ ಮಾತುಗಳು ನಿನ್ನಿಂದ ಆಡಲ್ಪಟ್ಟದ್ದನ್ನು ಕೇಳಿ ವ್ಯಾಕುಲ ವುಳ್ಳವನೂ, ಮೈನಡುಕದಿಂದ ಬೆವರುವವನೂ, ಸಂತೋಷರಹಿತನೂ ಒಮ್ಮೆಲೇ ಆಗಿರುತ್ತೇನೆ. ಸಾಕು ಸಾಕು! ನೀನಾಡಿದ ಮಾತುಗಳು ಸತ್ಯವೆಂದು ತಿಳಿಯಬೇಡ! ನಾನು ಸೃಷ್ಟಿಕರ್ತನೆಂಬುದು ಶುದ್ಧಸುಳ್ಳು. ಯಾರ ಕೃಪಾಬಲವನ್ನೂ ಆಜ್ಞೆಯನ್ನೂ ಶಿರಸ್ಸಿನಲ್ಲಿ ಧರಿಸಿ, ನಾನು ಸೃಷ್ಟ್ಯಾದಿಗಳನ್ನು ಮಾಡುತ್ತೇನೆಂಬುದನ್ನು ನೀನು ತಿಳಿಯದವನಾಗಿದ್ದೀಯೆ! ಆದುದರಿಂದ ಕೇಳಲಿಕ್ಕೆ

ಅಶಕ್ಯವಾದ ಮಾತುಗಳಿಂದ ನನ್ನಲ್ಲಿಲ್ಲದ ಮಹಾಗುಣಗಳನ್ನು ನನ್ನಲ್ಲಿ ಆರೋಪಿಸುತ್ತಿದ್ದಿ. ಅಂತಹ ಮಾತುಗಳನ್ನು ಇವತ್ತಿಗೇ ಸಾಕುಮಾಡು.

## ಶ್ರೀಮನ್ನಾರಾಯಣನೊಬ್ಬನೇ ಎಲ್ಲದಕ್ಕೂ ಕಾರಣ

ನನ್ನ ಉತ್ಪತ್ತಿಗೆ ಕಾರಣನಾದ ಶ್ರೀಮನ್ನಾರಾಯಣನೇ ಆದಿಯಲ್ಲಿ ಸಕಲವನ್ನೂ ಸೃಷ್ಟಿಮಾಡುತ್ತಾನೆ. ಸೂಕ್ಷ್ಮರೂಪದಿಂದ ಸೃಷ್ಟಿಸಿದ ಜಗತ್ತಿಗೆ ಸ್ಥೂಲರೂಪವನ್ನು ಕೊಡುವುದಕ್ಕಾಗಿ, ತಾನೇ ಬ್ರಹ್ಮನಾಮಕನಾಗಿ ನನ್ನಲ್ಲಿ ಪ್ರವೇಶಿಸಿ, ಬ್ರಹ್ಮಸೃಷ್ಟಿ ಎಂದು ಏನು ಕರೆಸಿಕೊಳ್ಳುವುದೋ ಅದೆಲ್ಲವನ್ನೂ ತಾನೇ ಮಾಡಿ, ಸೃಷ್ಟಿಮಾಡಿದನೆಂಬ ಕೀರ್ತಿಗೆ ನನ್ನನ್ನು ಗುರಿಮಾಡುತ್ತಾನೆ. ಇದನ್ನು ತಿಳಿಯುವುದಕ್ಕಾಗಿ ಒಂದು ಉದಾಹರಣೆ ಕೊಡುತ್ತೇನೆ:- ಲೋಕದಲ್ಲಿ ಸೂರ್ಯ, ಅಗ್ನಿ, ನಕ್ಷತ್ರ, ಚಂದ್ರರೆಂಬ ಪ್ರಕಾಶಕೊಡುವವಸ್ತುಗಳಿಗೆ ದೇವರು ಪ್ರಕಾಶವನ್ನು ಕೊಡುತ್ತಾನೆ. ಆ ಭಗವದ್ದತ್ತ ಪ್ರಕಾಶದಿಂದ ಬೆಳಗುವ ಆ ಸೂರ್ಯಾದಿಗಳನ್ನು, ನಾವು ನಮಗೆ ಪ್ರಕಾಶಗಳನ್ನು ಕೋಡುತ್ತವೆಂದು ತಿಳಿಯುತ್ತೇವೆ. ಇದರಂತೆಯೇ ನಾನು ಸೃಷ್ಟಿಮಾಡುತ್ತೇನೆಂದು ಜಗತ್ತಿಗೆ ತೋರುತ್ತದೆ. ನನ್ನಲ್ಲಿದ್ದು ಸೃಷ್ಟಿಮಾಡುವವನೂ, ಸೂರ್ಯಾದಿಗಳಿಗೆ ತೇಜಸ್ಸನ್ನು ಕೊಡುವವನೂ, ಅದೃಶ್ಯತ್ವಾದಿ ಲಕ್ಷಣ ವುಳ್ಳವನಾದ್ದರಿಂದ ಗೋಚರನಾಗುವುದಿಲ್ಲ.

ನಿರ್ದುಷ್ಟ ಮಹೋನ್ನತ ಸ್ವಭಾವನೂ ಸಕಲ ಕಲ್ಯಾಣಗುಣ ಪೂರ್ಣನೂ ಆದ ಶ್ರೀಪರಮಾತ್ಮನ ದೃಕ್ಪ ಥದಲ್ಲಿ, ಅಂದರೆ ದೃಷ್ಟಿಗೆ ಕಾಣುವಂತೆ ನಿಲ್ಲಲೂ ಯೋಗ್ಯತೆ ಇಲ್ಲದೆ ಯಾವ ನಾನು ನಾಚುತ್ತೇನೋ, ಅಂತಹ ನನ್ನನ್ನು, ಪರಮಾತ್ಮನ ಅಪರಿಹಾರವಾದ ಮಾಯಾಮೋಹಿತರಾದ ದುರ್ಜನರು, ಅಂದರೆ ಅಜ್ಞಾನಿಗಳು, ನನ್ನನ್ನು ಜಗದ್ಗುರುವೆಂದೂ, ಸೃಷ್ಟಿಮಾಡುವವನೆಂದೂ ಕರೆಯುತ್ತಾರೆ. ಇವು ಕೇಳಲರ್ಹಗಳಾದ ಮಾತುಗಳಲ್ಲ. ಇಂತಹ ಮಾತುಗಳನ್ನು ಕೇಳಿದ ನನಗೆ, ಬೇರೆ ಯಾತರಿಂದಲೂ ಆ ಪಾಪದ ಪ್ರಾಯಶ್ಚಿತ್ತವು ಆಗಲಾರದ ಕಾರಣ, ಅಪರಿಮಿತ ಕರುಣಾಶಾಲಿಯಾದ ಜಗದ್ಗುರುವೂ, ಸೃಷ್ಟಿಕರ್ತನೂ ಆದ ಶ್ರೀವಾಸುದೇವನ ಚರಣಕಮಲಗಳಿಗೆ ನಮಸ್ಕರಿಸುತ್ತೇನೆ. ಅದರಿಂದ ನಾನು ಆ ಪಾಪವನ್ನು ಪರಿಹಾರಮಾಡಿಕೊಳ್ಳುತ್ತೇನೆ-

ಪೃಥಿವ್ಯಾದಿ ಪರಿಣಾಮದಿಂದುಂಟಾದ ದ್ರವ್ಯ ಎಂದರೆ ವಸ್ತುಗಳೂ, ಪುಣ್ಯಾಪಾಪರೂಪ ಕರ್ಮಗಳು, ಕ್ಷಣ, ಲವ, ತೃಟಿ, ಯುಗ, ಕಲ್ಪಾ ದಿ ಕಾಲವಿಶೇಷಗಳೂ, ಸಾತ್ವಿಕಾದಿ ಸ್ವಭಾವಗಳೂ, ಸುಖದುಃಖಗಳಿಗೆ ಆಶ್ರಯರಾದ ಜೀವರೂ ಅಥವ ಪುರೋಡಾಶಾದಿ ಯಜ್ಞದ್ರವ್ಯಗಳೂ, ಋತ್ವಿಕಾದಿ ಯಜ್ಞಕರ್ಮಾಚರಣೆ ಮಾಡುವವರೂ, ಬ್ರಾಹ್ಮಣಾದಿ ಸ್ವಭಾವ ವುಳ್ಳವರೂ, ಯಜ್ಞಯಜಮಾನ

## अथ पञ्चमोऽध्यायः

ಸಂಜ್ಞರಾದ ಜೀವರೂ ಇವೇ ಮೊದಲಾಗಿ ಯಾರಿಂದ ಪ್ರೇರಿತಗಳಾಗಿ, ಸಮಸ್ತ ಕಾರ್ಯಗಳನ್ನೂ ಮಾಡಲು ಶಕ್ತಿಯುಳ್ಳದ್ದಾಗುತ್ತವೆಯೋ, ಅಂತಹ ಸರ್ವತ್ರದಲ್ಲಿಯೂ ಸ್ವತಂತ್ರಕರ್ತೃ, ಭೋಕ್ತೃ ಆದ ಶ್ರೀವಾಸುದೇವನಿಗೆ ಬೇರೆಯಾದ ಬ್ರಹ್ಮವಸ್ತುವು ಜಗತ್ತಿನಲ್ಲಿಲ್ಲ.

ಬ್ರಹ್ಮ, ರುದ್ರ, ಇಂದ್ರಾದಿ ದೇವತೆಗಳನ್ನು ಹೊಗಳುವಂತೆ ತೋರುವ ಎಲ್ಲಾ ವೇದಋಕ್ಕುಗಳೂ, ಅವರುಗಳ ಅಂತರ್ಯಾಮಿಯಾಗಿ, ಆಯಾ ಹೆಸರುಗಳಿಂದ ಕರೆಯಲ್ಪಡುವ ಪರಮಾತ್ಮನಾದ ಶ್ರೀಮನ್ನಾರಾಯಣನನ್ನೇ ಸ್ತೋತ್ರಮಾಡುತ್ತವೆ. ಏಕೆಂದರೆ, ಬ್ರಹ್ಮನಾದ ನಾನೇ ಮೊದಲಾದ ಎಲ್ಲಾ ದೇವತೆಗಳೂ ಯಾವ ನಾರಾಯಣನ ಪ್ರಸಾದದಿಂದ, ಅವನ ಅಂಗಾಂಗಗಳಿಂದ ಸೃಷ್ಟಿಸಲ್ಪಟ್ಟು, ರಕ್ಷಿಸಲ್ಪಡುತ್ತಿರುತ್ತೇವೋ, ಆ ನಾರಾಯಣನೇ ಸಕಲ ದೇವೋತ್ತಮನು. ಆದುದರಿಂದ ಅವನೊಬ್ಬನೇ ವೇದಪ್ರತಿಪಾದ್ಯ. ನಾರಾಯಣನನ್ನಾಶ್ರಯಿಸಿ, ಅವನ ಪ್ರತಿಮಾ ರೂಪಗಳಾಗಿ, ಅಧಿಷ್ಠಾನಗಳಾಗಿ ಲೋಕಗಳು ಇರುತ್ತವೆ. ಸರ್ವ ಯಜ್ಞಗಳೂ ನಾರಾಯಣನನ್ನುದ್ದೇಶಿಸಿ ಪ್ರವೃತ್ತಗಳಾಗಿವೆ. ಏಕೆಂದರೆ ಯಜ್ಞಭೋಕ್ತನೂ, ಯಜ್ಞಫಲದಾತನೂ ನಾರಾಯಣನೇ ಆಗಿರುತ್ತಾನೆ.

ಯಜ್ಞಗಳನ್ನು ನಾರಾಯಣನಿಗೆ ಅರ್ಪಿಸದೇ ಹೋದರೆ ಫಲ ಬರುವುದಿಲ್ಲ. ವ್ಯರ್ಥವಾಗುತ್ತೆ. ಆದುದರಿಂದ ಯಜ್ಞಗಳಿಂದ ಆರಾಧಿಸಲ್ಪಡುವವನೂ ನಾರಾಯಣನೇ. ಸಕಲ ತಪಸ್ಸುಗಳೂ ನಾರಾಯಣನ ಅನುಗ್ರಹ ಪಡೆಯುವುದಕ್ಕಾಗಿ ಆಚರಿಸಲ್ಪಡುತ್ತವೆ. ನಾರಾಯಣನ ದರ್ಶನ ಪ್ರಾಪ್ತಿಗಾಗಿಯೇ ಧ್ಯಾನಾದಿ ಯೋಗಗಳು ಆಚರಿಸಲ್ಪಡುತ್ತವೆ. ಪರಮಾತ್ಮ ಸ್ವರೂಪವನ್ನು ತಿಳಿಯುವುದಕ್ಕಾಗಿಯೇ ಜ್ಞಾನಾರ್ಜನೆಯನ್ನು ಮಾಡತಕ್ಕದ್ದು. ಮೋಕ್ಷಪ್ರದನೂ ನಾರಾಯಣನೇ. ಸ್ವಯಂ ಸರ್ವಸ್ವಾಮಿಯಾದ ಜಗದೀಶನ ಕೃಪಾದೃಷ್ಟಿಯಿಂದ ನೋಡಲ್ಪಟ್ಟ ಪ್ರಕೃತ್ಯಭಿಮಾನಿಯಾದ ಲಕ್ಷ್ಮೀದೇವಿಯು, ತನ್ನಧೀನದಲ್ಲಿರುವ ಜಡಪ್ರಕೃತಿಯಲ್ಲಿ, ಪರಮಾತ್ಮನ ಇಚ್ಛೆಯಂತೆ ಸೃಷ್ಟಿಸಬೇಕಾದ ಸಮಸ್ತವನ್ನೂ ಸೂಕ್ಷ್ಮರೂಪದಿಂದ ತಾನೇ ಸೃಷ್ಟಿಮಾಡುತ್ತಾಳೆ. ಆ ಪರಮಾತ್ಮನಿಂದಲೇ ಸೃಷ್ಟಿಸಲ್ಪಟ್ಟ ನಾನು ಆ ಜಗದೀಶನ, ಲಕ್ಷ್ಮೀದೇವಿಯ ಆಜ್ಞೆ ಅನುಗ್ರಹಗಳಿಂದ, ಆ ಸೂಕ್ಷ್ಮರೂಪವಾಗಿ ಲಕ್ಷ್ಮೀದೇವಿಯರಿಂದ ಸೃಷ್ಟಿಸಲ್ಪಟ್ಟ ವಸ್ತುಗಳನ್ನೇ ಪಂಚಭೂತ, ಮಹತ್ತತ್ವಾದಿಗಳಿಂದ, ಉಪಚಯಮಾಡಿ ಸ್ಥೂಲರೂಪಗಳನ್ನಾಗಿ ಮಾಡುತ್ತೇನೆ. ಇದನ್ನೇ ಬ್ರಹ್ಮಸೃಷ್ಟಿ ಎಂದು ವೇದಗಳು ತಿಳಿಸುತ್ತವೆ. ಆದುದರಿಂದ ಮುಖ್ಯನಾದ ಸೃಷ್ಟ್ಯಾದಿಕರ್ತೃವು ಶ್ರೀಪರಮಾತ್ಮನೇ ಆಗಿರುತ್ತಾನೆ

(ವಿಶೇಷಾಂಶ- ಇಲ್ಲಿ ಲಕ್ಷ್ಮೀಸೃಷ್ಟಿಯನ್ನು ಹೇಗೆ ಹೇಳಲಾಗುತ್ತೆ? ಪ್ರಮಾಣವೇನು? ಎಂದರೆ:- ಶ್ರೀಮದಾಚಾರ್ಯರು, ಶ್ರೀದ್ವಾದಶಸ್ತೋತ್ರ, ಸಪ್ತಮಾಧ್ಯಾಯದಲ್ಲಿ:- "ವಿಶ್ವಸ್ಥಿತಿ, ಪ್ರಳಯಸರ್ಗ

ಮಹಾವಿಭೂತಿರ್ವೃತ್ತಿಪ್ರಕಾಶ ನಿಯಮಾವೃತಿ ಬಂಧಮೋಕ್ಷಾ: ॥ ಯಸ್ಯಾ ಅಪಾಂಗಲವಮಾತ್ರತ ಊರ್ಜಿತಾ ಸಾ ಶ್ರೀರ್ಯತ್ಕಟಾಕ್ಷಬಲವತ್ಯಜಿತಂ ನಮಾಮಿ " ಎಂಬಂತೆ, ಬ್ರಹ್ಮವಾಯುಗಳು ಅಜಿತ ನಾಮಕಪರಮಾತ್ಮನ ಕೃಪಾಕಟಾಕ್ಷವೀಕ್ಷಣದಿಂದ, ಸೃಷ್ಟ್ಯಾದ್ಯಷ್ಟಕರ್ತೃತ್ವವನ್ನು ಕಡೆಗಣ್ಣಿನ ನೋಟ ಮಾತ್ರದಿಂದ ಮಾಡಲು ಶಕ್ತರಾದ ಯಾವ ರಮಾದೇವಿಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ, ಸೃಷ್ಟಿಂದಾರಂಭಿಸಿ, ಮೋಕ್ಷ ಕೊಡಲೂ, 'ವಾಯುಸ್ತು ತದನುಜ್ಞಯಾ ಸ್ವಾವರಾಣಾಂ ಮೋಕ್ಷಂ ದದಾತಿ ' ಇತ್ಯಾದಿಗಳಿಂದ ಪ್ರಸಿದ್ಧರಾಗಿರುತ್ತಾರೆಯೋ, "ಯಂ ಕಾಮಯೇ ತಮುಗ್ರಂ ಕೃಣೋಮಿ, ತಂ ಬ್ರಹ್ಮಾಣಂ ತಂ ಋಷಿಂ ತಂ ಸುಮೇಧಾಂ "ಎಂಬ ಶೃತಿಂದಲೂ, ರಮಾದೇವಿಯರೂ ಪರಮಾತ್ಮಾನಂತರ ಸರ್ವ ಸೃಷ್ಟಿ ಮಾಡಿ ಬ್ರಹ್ಮಾದಿಗಳ ದ್ವಾರಾ ಮಾಡಿಸುತ್ತಾರೆಂದು ನಿರೂಪಿಸಲ್ಪಟ್ಟಿದೆ).

ಶ್ರೀಪರಮಾತ್ಮನು ತ್ರಿಗುಣವರ್ಜಿತನು ಅಂದರೆ ಪ್ರಾಕೃತ ಸತ್ವಾದಿ ಗುಣರಹಿತನೂ ಆದರೂ ಪ್ರಕೃತಿಯ ಗುಣಗಳಾದ ಸತ್ವರಜೋಸ್ತಮೋ ಗುಣಗಳನ್ನು, ಕೇವಲ ಲೀಲೆಯಿಂದ ತನ್ನಧೀನಳಾದ ಚಿತ್ಪ್ರಕೃತಿಯಧೀನವಾದ ಜಡಪ್ರಕೃತಿಯಿಂದ, ರಜೋಗುಣವನ್ನು ತೆಗೆದುಕೊಂಡು, ಬ್ರಹ್ಮಾದಿಗಳಿಂದ ಸೃಷ್ಟಿಮಾಡಿಸುತ್ತಾನೆ. ಸತ್ವಗುಣದಿಂದ ತಾನೇ ವಿಷ್ಣುನಾಮಕನಾಗಿ ಸರ್ವತ್ರ ವ್ಯಾಪಿಸಿ ಜಗತ್ತನ್ನು ಸಂರಕ್ಷಿಸುತ್ತಾನೆ. ತಮೋಗುಣದಿಂದ ರುದ್ರನಲ್ಲಿ ಅಂತರ್ಯಾಮಿಯಾಗಿ ಲೋಕವನ್ನು ಲಯ ಅಂದರೆ ನಾಶಮಾಡುತ್ತಾನೆ. ದ್ರವ್ಯವೆಂಬ ತಾಮಸಾಹಂಕಾರಕಾರ್ಯ ಶರೀರಸಂಬಂಧದಿಂದಲೂ, ಜ್ಞಾನವೆಂಬ ವೈಕಾರಿಕಾಹಂಕಾರ ಕಾರ್ಯಗಳಾದ ಮನಸ್ಸು, ಶ್ರೋತ್ರೇಂದ್ರಿಯಾದಿಗಳಿಂದಲೂ, ಕೂಡಿದವನಾಗಿ ಅಭಿಮಾನ ಮಾಡುವುದರ ಮೂಲಕ ಸತ್ವಾದಿಗುಣಗಳ ಅಧೀನನಾಗಿ, ಅಜ್ಞಾನಿಯಾದ ಜೀವನು, ತಮೋಗುಣದಿಂದ ನೋವು, ದುಃಖಾದಿಗಳನ್ನು ಹೊಂದುವವನೂ, ರಜೋಗುಣದಿಂದ ಸುಕರ್ಮ, ದುಷ್ಕರ್ಮಗಳನ್ನು ಮಾಡುವವನೂ, ಸತ್ವಗುಣದಿಂದ ನಾನು ಸುಖಿಯಾಗಿರುತ್ತೇನೆಂದೂ ಭಾವಿಸಿ, ಜೀವನು ಸಂಸಾರದಲ್ಲಿ ಬದ್ಧನಾಗಿರುತ್ತಾನೆ. ಸತ್ವರಜಸ್ತಮೋಗುಣಗಳು ಸ್ವತಃ ಜಡವಸ್ತುಗಳು. ಕೇವಲ ಈಶ್ವರೇಚ್ಛೆಯಿಂದ ಪ್ರೇರಿತಗಳಾಗಿ ಇವು ಜೀವನನ್ನು ತಮ್ಮ ಕಾರ್ಯಗಳಿಂದ ಬಂಧಿಸುತ್ತವೆ. ಪ್ರಮಾಣ-

**ಜ್ಞಾನೇಂದ್ರಿಯೈಶ್ಚ ಮನಸಾ ಸತ್ವಂ ಬಧ್ನಾತಿ ಪೂರುಷಂ।**
**ರಜಃ ಕರ್ಮೇಂದ್ರಿಯೈ ರ್ನಿತ್ಯಂ ಶ್ರೀರೇಣತಮಸ್ತಥಾ॥**
**ಕಾಲಕರ್ಮಸ್ವಭಾವಾದಿ ನಿತ್ಯಯೇಶೇಚ್ಛಯಾ ಸದಾ।**
**ಯತ್ರಾನ್ಯ ಹೇತ್ವಭಾವಃ ಸ್ಯಾದೀಶ್ವರೇಚ್ಛಾದಿನಾ ವಿನಾ ॥**

ಇವೇ ದೇಹ, ಇಂದ್ರಿಯ, ಮನಸ್ಸುಗಳೆಂಬ ಮೂರು ಲಿಂಗಗಳಿಂದ, ಅಂದರೆ ಸಾಧನಗಳಿಂದ,

## अथ पञ्चमोऽध्यायः

ಭಗವದ್ವಿಷಯಕವಾದ ಜ್ಞಾನವೆಂಬುದನ್ನು ಜೀವನಿಗೆ ಹುಟ್ಟಿಸಿ, ಆ ಜೀವನ ಪತನಕ್ಕೆ ಕಾರಣವಾದ ವಿಷಯಾಪೇಕ್ಷೆ ಮಾಡುವ ಅಧೋದೃಷ್ಟಿಯನ್ನು ಜಯಿಸುವುದಕ್ಕೆ ಸಹಾಯಕನಾದ ಕಾರಣ, ದೇಹದಲ್ಲಿದ್ದು ಅಧೋಕ್ಷಜನೆಂದು ಪ್ರಖ್ಯಾತನಾದ ದೇವರು, ನಾನು, ರುದ್ರ, ಮೊದಲಾದವರ ಸರ್ವೇಂದ್ರಿಯಗಳನ್ನೂ ತನ್ನ ಕಡೆಗೆ ಮಾಡಿ, ದಿವ್ಯ ಜ್ಞಾನಾನಂದಗಳನ್ನು ಕೊಟ್ಟು, ತನ್ನ ದರ್ಶನವನ್ನು ನಮಗೆ ಕೊಟ್ಟು, ಮುಕ್ತರನ್ನಾಗಿ ಮಾಡುತ್ತಾನೆ. ಸೃಷ್ಟಿಗೆ ಮುಂಚೆ, ತನ್ನ ಅಧೀನದಲ್ಲಿ, ತನ್ನೊಳಗೇ ಇರುವ, ಅನಾದಿಕಾಲವೆಂಬುವುದನ್ನೂ, ಅನಾದಿಕರ್ಮಗಳಿಂದ ಕೂಡಿದ ಲಿಂಗಸಹಿತರಾದ ಜೀವರನ್ನೂ ನೋಡಿ, ಇವರಿಗೆ ತಮ್ಮ ಅನಾದಿಕರ್ಮಗಳನ್ನು ಮಾಡುವುದಕ್ಕೆ ಸಾಧನಗಳಾದ ದೇಹಗಳನ್ನು ಕೊಟ್ಟು, ತಾನೂ ಬಹುರೂಪಿಯಾಗಿ ಇವರೊಳಗೆ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವೆನೆಂದು ಅಪೇಕ್ಷಿಸಿದನು.

## ಸೂಕ್ಷ್ಮ ಸೃಷ್ಠಿಯ ವಿವರಣೆಗೆ ಪ್ರಾರಂಭ

ನಂತರ ತನ್ನ ವಶಳಾದ ಪ್ರಕೃತಿಯನ್ನು ಪ್ರವೇಶಿಸಿ, ಗುಣವೈಷಮ್ಯವೆಂಬ ಕ್ಷೋಭೆಯನ್ನು ಮಾಡುವುದರ ಮೂಲಕ ಪ್ರಕೃತಿಯನ್ನು ಸೃಷ್ಟಿಗಾಗಿ ಪ್ರೇರಿಸಿದನು. ಆ ಕಾಲದಲ್ಲಿ ಅವ್ಯಕ್ತತತ್ವಾಖ್ಯ ಸೂಕ್ಷ್ಮ ಜಡಪ್ರಕೃತಿಯಲ್ಲಿ, ಸತ್ವರಜಸ್ತಮೋಗುಣಗಳು ಸಮಭಾಗಗಳಿಂದಿದ್ದು, ಪರಸ್ಪರ ಮಿಶ್ರವಿಲ್ಲದೇ, ಸಂಬಂಧವಿಲ್ಲದೇ ಇದ್ದವು. ಈ ಅವ್ಯಕ್ತತತ್ವದಿಂದ, ಬ್ರಹ್ಮದೇವರ ಶರೀರವೆನಿಸುವ ಮಹತ್ತತ್ವವನ್ನು ಸೃಷ್ಟಿಸುವುದಕ್ಕಾಗಿ, ಪರಮಾತ್ಮನು ಈ ಅವ್ಯಕ್ತತತ್ವವೆಂಬ ಜಡಪ್ರಕೃತಿಯಲ್ಲಿ ಪ್ರವೇಶಿಸಿ, ಸಮನಾಗಿದ್ದ ಗುಣತ್ರಯಗಳನ್ನು ವ್ಯತ್ಯಾಸಮಾಡಿ, ಪರಸ್ಪರ ಸಂಬಂಧ ಹೊಂದುವಂತೆ ಮಾಡಿ, ಗುಣಕಾರ್ಯೋನ್ಮುಖವಾದ ಮಹತ್ತತ್ವವನ್ನು ಸೃಷ್ಟಿಸಿದನು. ಈ ಮಹತ್ತತ್ವವೇ ಸಕಲ ಜಗಸ್ಸೃಷ್ಟಿಗೂ ಭಗವದಿಚ್ಛೆಯಿಂದ ಕಾರಣವಾಯಿತು.

ಸತ್ವಗುಣವನ್ನು ಉದ್ರೇಕಿಸಿ, ರಜೋಗುಣದಲ್ಲಿ ಪ್ರವಿಷ್ಟವನ್ನಾಗಿ ಮಾಡಿ, ರಜೋಗುಣವನ್ನು ಸತ್ವಗುಣ ಪ್ರಧಾನದಿಂದ ಕಾರ್ಯೋನ್ಮುಖವನ್ನಾಗಿ ಮಾಡುವುದೇ ಮಹತ್ತತ್ವದ ಸೃಷ್ಟಿ. ಸತ್ವಗುಣದಿಂದ ಉದ್ರೇಕವಾದ ರಜೋಗುಣವು ತಮೋಗುಣವನ್ನು ಪ್ರವೇಶಿಸಿ, ಆ ತಮೋಗುಣ ಪ್ರಧಾನದಿಂದ ತಮೋಗುಣವನ್ನು ಕಾರ್ಯೋನ್ಮುಖವನ್ನಾಗಿ ಮಾಡುವುದೇ ಅಹಂಕಾರತತ್ವದ ಸೃಷ್ಟಿ. ಈ ತಮೋಗುಣದ ಕಾರ್ಯವು ಮೂರುವಿಧ. ಸತ್ವದಿಂದ ಪ್ರೇರಿತವಾಗಿ ತಮೋಗುಣವು ವ್ಯಾಪಾರ ಮಾಡಿ ಅದರಿಂದ ವೈಕಾರಿಕಾಹಂಕಾರವೆಂಬ, ತತ್ವದೇವತೆಗಳಿಗೆ ಶರೀರ ಕಾರಣವಾದದ್ದು ಒಂದು. ರಜೋಗುಣದಿಂದ ಪ್ರೇರಿತವಾಗಿ ತೈಜಸಾಹಂಕಾರವೆಂಬುದು ಪಂಚಜ್ಞಾನ ಪಂಚಕರ್ಮೇಂದ್ರಿಯಗಳಿಗೆ ಕಾರಣವಾದದ್ದು. ತಮಃ ಪ್ರಧಾನವಾದ ತಾಮಸಾಹಂಕಾರದಿಂದ, ಪಂಚಭೂತ ಪಂಚತನ್ಮಾತ್ರಗಳ ಸೃಷ್ಟಿಗೆ ಕಾರಣವಾದದ್ದು.

## अथ पञ्चमोऽध्यायः

ಪಂಚಭೂತಗಳ ತನ್ಮಾತ್ರಗಳ ಸೃಷ್ಟಿಮಾಡುವ ತಾಮಸಾಹಂಕಾರಕ್ಕೆ ರುದ್ರದೇವರ ಶರೀರ. ದ್ರವ್ಯಶಕ್ತ್ಯಾತ್ಮಕವಾದದ್ದು. ತೈಜಸಾಹಂಕಾರವು ಗರುಡಶೇಷರ ಶರೀರ ಕ್ರಿಯಾಶಕ್ತಿ ವುಳ್ಳದ್ದು, ಪಂಚಜ್ಞಾನ ಪಂಚಕರ್ಮೇಂದ್ರಿಯಗಳೆಂಬ ಕ್ರಿಯಾಶಕ್ತಿ ವುಳ್ಳ ದಶೇಂದ್ರಿಯಗಳ ಸೃಷ್ಟಿಗೆ ಕಾರಣವಾದದ್ದು. ದ್ರವ್ಯಶಕ್ತಿಯಿಂದ ಕೂಡಿದ ತಾಮಸಾಂಕಾರಕ್ಕೂ ಮಹತ್ತತ್ವಕ್ಕೂ ಪರಸ್ಪರ ಸಂಘರ್ಷಣದಿಂದ ಆಕಾಶತತ್ವವು ಹುಟ್ಟಿತು. ಇದರ ಗುಣ ಶಬ್ದ. ಘೋಷವೆಂಬ ಶಬ್ದವು ಮೊದಲು ವ್ಯಕ್ತವಾಗಿ, ಆ ಶಬ್ದದಿಂದ ಆಕಾಶತತ್ವವು ಹುಟ್ಟಿತು.

ವೇದರೂಪವಾದ ಶಬ್ದಗಳಿಂದ ಪರಮಾತ್ಮನನ್ನು ತಿಳಿಯಲಾಗುವುದರಿಂದಲೂ, ಈ ಶಬ್ದಗಳಿಂದ ವ್ಯಕ್ತನಾದ ಶ್ರೀಪರಮಾತ್ಮನು ಹೃದಯಾಕಾಶದಲ್ಲಿ ದೃಷ್ಟಿಗೆ ಗೋಚರನಾಗುವುದರಿಂದಲೂ, ಆಕಾಶ ಶಬ್ದಗಳೆರಡೂ ಪರಮಾತ್ಮನ ಲಿಂಗ-ಎಂದರೆ ತಿಳಿಸಿಕೊಡುವಂತಹ ಸ್ವರೂಪ ವುಳ್ಳವೆಂದು ಕರೆಯಲ್ಪಡುತ್ತವೆ.

ತಾಮಸಾಹಂಕಾರಕ್ಕೂ ಆಕಾಶಕ್ಕೂ ಸಂಘರ್ಷಣವಾಗಿ ಸ್ಪರ್ಶಗುಣ ವುಳ್ಳ ವಾಯುತತ್ವವು, ಸರ್ವಚೇಷ್ಟಾಪ್ರದವಾದುದರಿಂದ ಪ್ರಾಣಶಕ್ತಿಯುಳ್ಳದ್ದಾಗಿಯೂ, ಓಜಸ್ಸೆಂಬ ಪ್ರಧಾನ ತೇಜಸ್ಸುಳ್ಳದ್ದಾಗಿಯೂ, ಸ್ವೇಚ್ಛೆಯಂತೆ ವ್ಯಾಪಾರ ಮಾಡಲು ಶಕ್ತವಾದುದರಿಂದ, ಬಲಪ್ರಧಾನವಾದದ್ದೂ ಉತ್ಪನ್ನವಾಯಿತು. ಆಕಾಶವಾಯುಗಳ ಸಂಘರ್ಷಣದಿಂದ ಅಗ್ನಿಯು ಉತ್ಪನ್ನವಾಯಿತು. ಇದು ಶಬ್ದಸ್ಪರ್ಶರೂಪಗಳೆಂಬ ಮೂರು ಗುಣಗಳುಳ್ಳದ್ದು. ಅಗ್ನಿಗೂ, ವಾಯುವಿಗೂ ಸಂಘರ್ಷಣೆಯಿಂದ ನೀರು, ಜಲವು ಶಬ್ದಸ್ಪರ್ಶರೂಪಗಳಿಂದ ಕೂಡಿದ ರಸರೂಪದಿಂದ ಉತ್ಪನ್ನವಾಯಿತು. ಜಲಕ್ಕೂ, ಅಗ್ನಿಗೂ ಪರಸ್ಪರ ಸಂಘರ್ಷಣದಿಂದ ಪೃಥ್ವಿಯು, ಶಬ್ದ, ಸ್ಪರ್ಶ, ರೂಪ, ರಸಗಳಿಂದಲೂ ಗಂಧದಿಂದಲೂ ಕೂಡಿ ಉತ್ಪನ್ನವಾಯಿತು. ಹೀಗೆ ಪಂಚಭೂತ ಪಂಚತನ್ಮಾತ್ರಗಳ ಸೃಷ್ಟಿಯಾಯಿತು.

ವೈಕಾರಿಕಾಹಂಕಾರದ ಸತ್ವಾಂಶದಿಂದ ಅಂತಃಕರಣರೂಪವಾದ ಮನಸ್ಸೂ, ಶಬ್ದಜ್ಞಾನಾದಿ ಎಲ್ಲಾ ಕಾರ್ಯಶಕ್ತಿ ವುಳ್ಳವರೂ ಆದ ಹತ್ತು ಜನ ದಿಗ್ದೇವತೆಗಳೂ ಹುಟ್ಟಿದರು. ವರುಣ, ವಾಯು, ಅಶ್ವಿನೀದೇವತೆಗಳೂ, ಉಪೇಂದ್ರ ನಾಮಕ ವಿಷ್ಣು, ಸೂರ್ಯ, ಪ್ರಚೇತಸರು, ಅಗ್ನಿ, ಇಂದ್ರ, ಮಿತ್ರನಾಮಕರು, ದಿಗ್ದೇವತೆಗಳು ಇಂದ್ರಿಯಪ್ರೇರಕರು. ಈ ಪೈಕಿ ವಿಷ್ಣುವು ಬಲಕಾಲಿನ ಅಂಗುಷ್ಠದಲ್ಲಿದ್ದು ಆದ್ಯಂತ ದೇಹವನ್ನು ಧರಿಸುರುತ್ತಾನಾಗಿ, ವಿಷ್ಣುವನ್ನು ಸ್ಮರಿಸುತ್ತಿರಬೇಕು. ತೈಜಸಾಹಂಕಾರದಿಂದ ಜ್ಞಾನಶಕ್ತಿಯುಳ್ಳ ಪಂಚ ಜ್ಞಾನೇಂದ್ರಿಯಗಳೂ, ಕರ್ಮಶಕ್ತಿಯುಳ್ಳ ಪಂಚ ಕರ್ಮೇಂದ್ರಿಯಗಳೂ ಉತ್ಪನ್ನವಾದವು. ಈ ತೈಜಸಾಹಂಕಾರವು, ಜ್ಞಾನಶಕ್ತಿ, ಕ್ರಿಯಾಶಕ್ತಿ, ಪ್ರಾಣ, ಬುದ್ಧಿಗಳಿಂದ

ಕೂಡಿ, ಜಾಜ್ವಲ್ಯಮಾನವಾಗಿ ಪ್ರಕಾಶರೂಪವಾದುದರಿಂದ, ತೈಜಸವೆಂದು ಕರೆಯಲ್ಪಡುತ್ತೆ. ಇವುಗಳೆಲ್ಲದರಲ್ಲಿಯೂ ಗುಣಕಾಲ, ಕರ್ಮಗಳಿಂದ ಕೂಡಿದ ಅವ್ಯಕ್ತ, ಮಹತ್ತತ್ವಾದಿಗಳೆಲ್ಲವೂ, ಸೂಕ್ಷ್ಮರೂಪದಿಂದ ಇರುತ್ತವೆಂಬುದನ್ನೂ, ಇವುಗಳೂ ಪರಸ್ಪರ ಸಂಘರ್ಷಿಸಿ, ತಮ್ಮಿಂದ ಉತ್ಪನ್ನವಾದ ಇತರ ಬೇರೆ ಬೇರೆ ತತ್ವಗಳಿಗೆ ಕಾರ್ಯಶಕ್ತಿಗಳನ್ನು ಕೊಡುತ್ತವೆಂದೂ ಭಾವಿಸಬೇಕು.

ಈ ರೀತಿ ಅವ್ಯಕ್ತತತ್ವ, ಮಹತ್ತತ್ವ, ಅಹಂಕಾರತತ್ವ, ಬುದ್ಧಿತತ್ವ, ಮನಸ್ತತ್ವ, ಪಂಚಭೂತ, ಪಂಚತನ್ಮಾತ್ರ, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯಗಳ ಉತ್ಪತ್ತಿಯು ಆಯಿತು. ಉತ್ಪನ್ನವಾದ ಇವುಗಳು ಪರಸ್ಪರ ಸಂಬಂಧವಿಲ್ಲದೇ ಬೇರೆ ಬೇರೆಯೇ ಆಗಿದ್ದು ಏನೂ ಕಾರ್ಯಮಾಡದೆ ಜಡಪ್ರಾಯಗಳಾಗಿದ್ದವು. ಇದು ಇಪ್ಪತ್ತೈದು ತತ್ವಗಳ, ಬ್ರಹ್ಮಾಂಡದ ಹೊರಗಿನ, ಸೃಷ್ಟಿಕ್ರಮ. ನಂತರ ಹೊರಗೆ ಸೃಷ್ಟರಾದ ಈ ತತ್ವದೇವತೆಗಳು ಶ್ರೀಪರಮಾತ್ಮನನ್ನು ಸ್ತೋತ್ರ ಮಾಡಿದರು. ಆದರಿಂದ ಪ್ರೀತನಾದ ದೇವರು, ಇವುಗಳೆಲ್ಲದರಲ್ಲಿಯೂ ಪ್ರವೇಶಿಸಿ, ಪರಸ್ಪರ ಸಂಬಂಧಮಾಡಿ, ಸಂಘರ್ಷಣದಿಂದ ಸುವರ್ಣ ಬ್ರಹ್ಮಾಂಡವೆಂಬ, ಸರ್ವ ಸಂಸಾರಭಯಕ್ಕೂ ಕಾರಣವಾದ ಬ್ರಹ್ಮಾಂಡವನ್ನು ತನ್ನ ದಿವ್ಯಶಕ್ತಿಯಿಂದ ದೇವರು ನಿರ್ಮಿಸಿದನು.

## ಪುರುಷನಾಮಕ ಭಗವಂತನ ರೂಪ

ಬ್ರಹ್ಮಾಂಡವನ್ನು ಸೃಷ್ಟಿಸಿ ನಂತರ ಕಾಲ ಕರ್ಮ ಸ್ವಭಾವಗಳಲ್ಲಿ ಅಂತರ್ಯಾಮಿಯಾಗಿ ಪ್ರೇರಕನಾಗಿರುವ ಪರಮಾತ್ಮನು, ಒಂದು ಸಹಸ್ರ ವರ್ಷಗಳ ನಂತರ, ಬಾಹ್ಯ ಆವರಣ ಜಲದ ಮಧ್ಯದಲ್ಲಿದ್ದ ಬ್ರಹ್ಮಾಂಡವನ್ನು, ಈ ಇಪ್ಪತ್ನಾಲ್ಕು ತತ್ವ, ತತ್ವದೇವತೆಗಳ ಸಮೇತನಾಗಿ ಪ್ರವೇಶಿಸಿದನು. ನಂತರ ಬ್ರಹ್ಮಾಂಡದ ಒಳಗೆ ತನ್ನ ರೂಪವನ್ನು ಅಭಿವ್ಯಕ್ತಿಮಾಡಿ, ನಾಭಿಕಮಲದಿಂದ ಸಮಸ್ತ ಜೀವರಾಶಿಗಳಿಗೆ ಪ್ರಾಣಧಾರಣ ಶಕ್ತಿಯನ್ನು ಕೊಡುವ ಚತುರ್ಮುಖ ಬ್ರಹ್ಮದೇವರನ್ನು ಸೃಷ್ಟಿಸಿದನು.

ಪರಮಾತ್ಮನು ಸ್ವತಂತ್ರನೂ, ಪರಮಮುಖ್ಯ ಜೀವನೂ, ತನಗೆ ಬೇರೆಯಾದ ಜೀವವಿಲ್ಲದಿರುವವನೂ ಆದುದರಿಂದ ಅಜೀವನೆಂದು ಕರೆಸುತ್ತಾನೆ. ಬೇರೆ ಎಲ್ಲಾ ಜೀವರೂ ಈ ಅಜೀವನಾಮಕ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ, ಚತುರ್ಮುಖನಾಮಕ ಮುಖ್ಯಪ್ರಾಣನ ಅನುಗ್ರಹದಿಂದ ಪ್ರಾಣದಿಂದ ಕೂಡಿರುತ್ತಾರೆ. ಆದುದರಿಂದ ಶ್ರೀಪರಮಾತ್ಮನು ಸಕಲ ಜೀವರಿಂದ ಅತ್ಯಂತ ಭಿನ್ನನೂ, ವಿಲಕ್ಷಣನೂ, ಸರ್ವಸ್ವಾಮಿಯೂ ಆಗಿರುತ್ತಾನೆ. ಸಕಲ ಜೀವರಿಗೂ ಪ್ರಾಣನಾಗಿ ಧರಿಸುತ್ತಾನಾಗಿ, ದೇವರಿಗೆ ಜೀವನೆಂದೂ ಹೆಸರು. ನಂತರ ಸೃಷ್ಟಿ ಮಾಡಿದ ಬ್ರಹ್ಮನಲ್ಲಿ ಪ್ರವೇಶಿಸಿ ಮುಖ್ಯಪ್ರಾಣನನ್ನು ಸರ್ವಜೀವರ ಪ್ರಾಣಧಾರಣಾ ಶಕ್ತಿಗೆ

ಪ್ರೇರಕನನ್ನಾಗಿ ಸೃಷ್ಟಿಸಿದನು.

ಈ ಬ್ರಹ್ಮಾಂಡದಲ್ಲಿ ಅಭಿವ್ಯಕ್ತವಾದದ್ದು ಪುರುಷರೂಪ. ಸಹಸ್ರ ಶಿರಸ್ಸು, ಸಹಸ್ರ ಪಾದ, ಸಹಸ್ರ ಬಾಹುಗಳು, ಸಹಸ್ರ ಕಣ್ಣು, ಕಿವಿ, ಮೂಗು, ಬಾಯಿ ಮುಂತಾದ ಅವಯವಗಳುಳ್ಳ ಪರಮಾಶ್ಚರ್ಯವಾದ ಅದ್ಭುತ ದೇಹ ವುಳ್ಳವನಾಗಿ ಈ ಪುರುಷನಾಮಕನು ಬ್ರಹ್ಮಾಂಡವನ್ನು ಭೇಧಿಸಿಕೊಂಡು ಅಭಿವ್ಯಕ್ತನಾದನು. ಜ್ಞಾನಿಗಳು ಈ ಪುರುಷರೂಪವನ್ನೇ ವಿರಾಡ್ರೂಪವೆಂದೂ ಹೇಳುತ್ತರೆ. ತೊಡೆಯಿಂದ ಕೆಳಕ್ಕೆ ಏಳು ಲೋಕಗಳನ್ನೂ, ಮೇಲಕ್ಕೆ ಏಳು ಲೋಕಗಳನ್ನೂ ಪುರುಷನಾಮಕ ಪರಮಾತ್ಮನು, ಹಿಂದೆ ಎರಡನೆಯ ಅಧ್ಯಾಯದಲ್ಲಿ ನಿರೂಪಿಸಿರುವಂತೆ ಧರಿಸಿರುತ್ತಾನೆ. ಮುಖದಿಂದ ಬ್ರಾಹ್ಮಣರನ್ನೂ, ಬಾಹುಗಳಿಂದ ಕ್ಷತ್ರಿಯರನ್ನೂ, ತೊಡೆಗಳಿಂದ ವೈಶ್ಯರನ್ನೂ, ಪಾದಗಳಿಂದ ಶೂದ್ರರನ್ನೂ ಸೃಷ್ಟಿಸಿ, ಕಟಿಯಲ್ಲಿ ಅತಳ ಲೋಕವನ್ನೂ, ತೊಡೆಯಲ್ಲಿ ವಿತಳ ಲೋಕವನ್ನೂ, ಮಂಡಿಗಳಲ್ಲಿ ಸುತಳ ಲೋಕವನ್ನೂ, ಮೊಳಕಾಲುಗಳಲ್ಲಿ ತಳಾತಳ ಲೋಕವನ್ನೂ, ಮಹಾತಳವನ್ನು ಹೆಜ್ಜೆಯ ಮುಂಭಾಗದಲ್ಲಿಯೂ, ರಸಾತಳವನ್ನು ಹಿಮ್ಮಡಿಯ ಹಿಂಭಾಗದಲ್ಲಿಯೂ, ಪಾತಾಳವನ್ನು ಪಾದದ ಕೆಳಭಾಗದಲ್ಲೂ ಧರಿಸಿರುತ್ತಾನೆ. ಭೂಲೋಕವು ಕಿಬ್ಬೊಟ್ಟೆಯ ಪ್ರದೇಶದಲ್ಲಿಯೂ, ಭುವರ್ಲೋಕವು ಹೊಕ್ಕಳ ಸಮೀಪದಲ್ಲಿಯೂ, ಹೃದಯ ಸಮೀಪದಲ್ಲಿ ಸ್ವರ್ಗ ಲೋಕವೂ, ಎದೆಯ ಸಮೀಪದಲ್ಲಿ ಮಹರ್ಲೋಕವು, ಕುತ್ತಿಗೆಯ ಸಮೀಪದಲ್ಲಿ ಜನೋಲೋಕವೂ, ಕಣ್ಣುಗಳ ಸಮೀಪದಲ್ಲಿ ತಪೋಲೋಕವೂ ಶಿರಸ್ಸಿನಲ್ಲಿ ಸತ್ಯಲೋಕವೂ ಆಶ್ರಯ ಹೊಂದಿದೆ. ಪರ್ಯಾಯವಾಕ್ಯದಿಂದ ಪಾದದಿಂದ ಭೂಮಿಯನ್ನೂ, ನಾಭಿಯಿಂದ ಭುವರ್ಲೋಕವನ್ನೂ, ಹಣೆಯ ಸಮೀಪದಲ್ಲಿ ಸ್ವರ್ಲೋಕವನ್ನೂ ಧರಿಸಿರುತ್ತಾನೆಂದು ಪುರುಷನಾಮಕನನ್ನು ಚಿಂತಿಸುವ ಪ್ರಕಾರಾಂತವನ್ನೂ ಕೆಲವರು ಹೇಳುತ್ತಾರೆ.

**ಇತಿ ಶ್ರೀಮದ್ಭಾಗವತ ದ್ವಿತೀಯಸ್ಕಂಧದ ಐದನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

## अथ षष्ठोऽध्यायः

ब्रह्मोवाच

वाचो वह्नेर्मुखं क्षेत्रं छन्दसां सप्तधातवः ।
हव्यकव्यामृतान्नानां जिह्वा सर्वरसस्य च ॥ १ ॥

सर्वासूनाञ्च वायोश्च तन्नासे परमायने ।
अश्विनोरोषधीनाञ्च घ्राणो गन्धस्य चैव हि ॥ २ ॥

## अथ षष्ठोऽध्यायः

रूपाणां तेजसां चक्षुर्दिवः सूर्यस्य चाक्षिणी ।
कर्णौ दिशाश्च तीर्थानां श्रोत्रमाकाशशब्दयोः ॥ ३ ॥

तद्गात्रं वस्तुसाराणां सौभाग्यस्य च भाजनम् ।
त्वगस्य स्पर्शवायोश्च सर्वमेधस्य चैव हि ॥ ४ ॥

रोमाण्युद्भिजजातीनां यैर्वा यज्ञस्तु सम्भृतः ।
केशश्मश्रुनखान्यस्य शिलालोहाभ्रविद्युताम् ॥ ५ ॥

बाहवो लोकपालानां प्रायशः क्षेमकर्मणाम् ।
विक्रमो भूर्भुवः स्वश्च क्षेमस्य शरणस्य च

सर्वकामवरस्यापि हरेश्चरण आस्पदम् ॥ ६ ॥

अपां वीर्यस्य सर्गस्य पर्जन्यस्य प्रजापतेः ।
पुंसः शिश्न उपस्थस्तु प्रजात्यानन्दनिर्वृतेः ॥ ७ ॥

पायुर्यमस्य मित्रस्य परिमोक्षस्य नारद ।
हिंसाया निऋतेर्मृत्योर्निरयस्य गुदः स्मृतः ॥ ८ ॥

पराभूतेरधर्मस्य तमसश्चापि पश्चिमः ।
नाड्यो नदनदीनान्तु गोत्राणामस्थिसंहतिः ॥ ९ ॥

अव्यक्तरससिन्धूनां भूतानां निधनस्य च ।
उदरं विदितं पुंसो हृदयं मनसः पदम् ॥ १० ॥

धर्मस्य मम तुभ्यञ्च कुमाराणां भवस्य च ।
विज्ञानस्य च तत्वस्य परस्यात्मा परायणम् ॥ ११ ॥

अहं भवान् भवश्चैव य इमे मुनयोऽग्रजाः ।
सुरासुरनरा नागाः खगा(गावो) मृगसरीसृपाः ॥ १२ ॥

गन्धर्वाप्सरसो यक्षा रक्षोभूतगणोरगाः ।
पशवः पितरः सिद्धाः विद्याध्राश्चारणाद्रुमाः ॥ १३ ॥

अन्ये च विविधा जीवा जलस्थलनभौकसः ।

## अथ षष्ठोऽध्यायः

ग्रहर्क्षकेतवस्तारास्तडितः स्तनयित्नवः ॥ १४ ॥

सर्वं पुरुष एवेदं भूतं भव्यं भवच्च यत्।
तेनेदमावृतं विश्वं वितस्तिमधितिष्ठता॥ १५ ॥

स्वधिष्ण्यं प्रतपन् प्राणो बहिश्च प्रतपत्यसौ।
एवं विराजं प्रतपंस्तपत्यन्तर्बहिः पुमान्॥ १६ ॥

सोऽमृतस्याभयस्येशो मर्त्यमन्नं यदत्यगात्।
महिमैष ततो ब्रह्मन् पुरुषस्य दुरत्ययः ॥ १७ ॥

पादोऽस्य सर्वाभूतानि पुंसः स्थितिविदो विदुः।
अमृतं क्षेममभयं त्रिमूधर्नोऽधायि मूर्धसु॥ १८ ॥

पादास्त्रयो बहिस्त्वासन्नप्रजानां य आश्रयाः।
अन्तस्त्रिलोक्यास्त्वपरो गृहमेधैर्बृहद्व्रतः ॥ १९ ॥

सृती विचक्रमे विष्वक्साशनानशने उभे।
यदविद्या च विद्या च पुरुषस्तूभयाश्रयः ॥ २० ॥

तस्मादण्डाद्विरा जज्ञे भूतेन्द्रियगुणाश्रयः।
तद्द्रव्यमत्यगाद्विश्वं गोभिः सूर्य इवाश्रयम्॥ २१ ॥

यदाऽस्य नाभ्यान्नलिनादहमासं महात्मनः।
नाविन्दं यज्ञसम्भारान् पुरुषावयवानृते॥ २२ ॥

तेषु यज्ञाश्च पशवः सवनस्पतयः कुशाः।
इदञ्च देवयजनं कालश्चात्मगुणान्वितः ॥ २३ ॥

वसून्योषधयः स्नेहा रसलोहमृदो जलम्।
ऋचो यजूंषि सामानि चातुर्होत्रञ्च सत्तम॥ २४ ॥

नामधेयानि मन्त्राश्च दक्षिणाश्च व्रतानि च।
देवतानुक्रमः कल्पः सङ्कल्पः सूत्रमेव च॥ २५ ॥

गतयो मतयः श्रद्धा प्रायश्चित्तं समर्पणम्।

## अथ षष्ठोऽध्यायः

पुरुषावयवैरेतैः सम्भाराः सम्भृता मया ॥ २६ ॥

इति सम्भृतसम्भारः पुरुषावयवैरहम् ।
तमेव पुरुषं यज्ञं तेनैवायजमीश्वरम् ॥ २७ ॥

ततस्ते भ्रातर इमे प्रजानां पतयो नव ।
अयजन् व्यक्तमव्यक्तं पुरुषं सुसमाहिताः ॥ २८ ॥

ततश्च मनवः काल ईजिरे ऋषयोऽपरे ।
पितरो विबुधा दैत्याः मनुष्याः क्रतुभिर्विभुम् ॥ २९ ॥

नारायणे भगवति तदिदं विश्वमाहितम् ।
गृहीतमायोरुगुणे सर्गादावगुणे स्वतः ॥ ३० ॥

सृजामि तन्नियुक्तोऽहं हरो हरति तद्वशः ।
विश्वं पुरुषरूपेण परिपाति त्रिशक्तिधृक् ॥ ३१ ॥

इति तेऽभिहितं तात यथेदमनुपृच्छसि ।
नान्यद्भगवतः किञ्चिद्भाव्यं सदसदात्मकम् ॥ ३२ ॥

न भारती मेऽङ्ग मृषोपलक्ष्यते न कर्हिचिन्मे मनसो मृषा गतिः ।
न मे हृषीकाणि पतन्त्यसत्पथे यन्मे हृदौत्कण्ठ्यवता धृतो हरिः ॥ ३३ ॥

सोऽहं समाम्नायमयस्तपोमयः प्रजापतीनामभिवन्दितः पतिः ।
आस्थाय योगं निपुणं समाहितस्तन्नाध्यगच्छं यत आत्मसम्भवः ॥ ३४ ॥

नतोऽस्म्यहं तच्चरणं समीयुषां भवच्छिदं स्वस्त्ययनं सुमङ्गलम् ।
यः स्वात्ममायाविभवं स्वयं गतो नाहं नभस्वांस्तमथापरे कुतः ॥ ३५ ॥

नाहं न यूयं बत तद्गतिं विदुः न वामदेवः किमुतापरे सुराः ।
यन्मायया मोहितबुद्धयस्त्विदं विनिर्मितं स्वात्मसमं विचक्ष्महे ॥ ३६ ॥

यस्यावतारकर्माणि गायन्ति ह्यस्मदादयः ।
न यं विदन्ति तत्वेन तस्मै भगवते नमः ॥ ३७ ॥

स एष आद्यः पुरुषः कल्पे कल्पे सृजत्यजः ।

## अथ षष्ठोऽध्यायः

आत्माऽऽत्मन्यात्मनाऽऽत्मानं स संयच्छति पाति च ॥ ३८ ॥

विशुद्धं केवलं ज्ञानं प्रत्यक् सम्यगवस्थितम् ।
सत्यं पूर्णमनाद्यन्तं निर्गुणं नित्यमद्वयम् ॥ ३९ ॥

ऋतं विन्दन्ति मुनयः प्रशान्तात्मेन्द्रियाशयाः ।
यदा तदैवासत्तर्कैस्तिरोधीयेत विप्लुतम् ॥ ४० ॥

आद्योऽवतारः पुरुषः परस्य कालः स्वभावः सदसन्मनश्च ।
द्रव्यं विकारो गुण इन्द्रियाणि विराट् स्वराट् स्थास्नु चरिष्णु भूम्नः ॥ ४१ ॥
अहं भवो यज्ञ इमे प्रजेशाः दक्षादयो ये भवदादयश्च ।
स्वर्लोकपालाः खगलोकपालाः नृलोकपालास्तललोकपालाः ॥ ४२ ॥

गन्धर्वविद्याधरचारणेशाः ये यक्षरक्षोरगनागनाथाः ।
ये वा ऋषीणाम् ऋषभाः पितॄणां दैत्येन्द्रसिद्धेश्वरदानवेन्द्राः ॥ ४३ ॥

अन्ये च ये प्रेतपिशाचभूतकूष्माण्डयादोमृगपश्वधीशाः ।
यत्किञ्च लोके भगवन् महस्वदोजः सहस्वद्बलवत्क्षमावत् ।
ह्री श्री विभूत्यात्मवदद्भुतार्णं तत्तत्परं रूपवदस्वरूपम् ॥ ४४ ॥

प्राधान्यतो यानृषय आमनन्ति लीलावतारान् पुरुषस्य भूम्नः ।
आपीयतां कर्मकषायशोषाननुक्रमिष्ये त इमान् सुपेशलान् ॥ ४५ ॥

### ॥ इति श्रीमद्भागवते (द्वितीयस्कन्धे(*2) षष्ठोऽध्यायः ॥

**॥ ಆರನೆಯ ಅಧ್ಯಾಯ ॥**

## ತತ್ತ್ವಾಭಿಮಾನಿ ದೇವತೆಗಳ ಸೃಷ್ಠಿ

ಹಿಂದಿನ ಅಧ್ಯಾಯದಲ್ಲಿ ಬ್ರಹ್ಮದೇವರು, ಶ್ರೀಪರಮಾತ್ಮನಿಗೆ ನಮಸ್ಕಾರ ಮಾಡುವವರಾಗಿ ತನ್ಮೂಲಕ, ಶ್ರೀಪರಮಾತ್ಮನಿಂದ ಮಹರಾದಿ ಇಪ್ಪತ್ನಾಲ್ಕು ತತ್ವಗಳ, ಮತ್ತು ತತ್ವದೇವತೆಗಳ ಉತ್ಪತ್ತಿ ಕ್ರಮವನ್ನೂ, ಪರಮಾತ್ಮನ ವಿರಾಡ್ರೂಪವನ್ನೂ, ಆತನ ಅವಯವಗಳಲ್ಲಿ ಆಶ್ರಯ ಹೊಂದಿರುವ ಹದಿನಾಲ್ಕು ಲೋಕಗಳನ್ನೂ, ಚಾತುರ್ವರ್ಣ ಜೀವರ ಸೃಷ್ಟಿ ಕ್ರಮವನ್ನೂ, ತಿಳಿಸಿ ಶ್ರೀಪರಮಾತ್ಮನ ಮಹಾತ್ಮೆಯ

## अथ षष्ठोऽध्यायः

ಜ್ಞಾನಪೂರ್ವಕವಾಗಿ ವಂದನಾದಿಗಳನ್ನು ಪರಮಾತ್ಮನಿಗೆ ಮಾಡಬೇಕೆಂಬ ಸಂಪ್ರದಾಯವನ್ನು ನಾರದರಿಗೆ ತಿಳಿಸಿದರು.

ಈ ಅಧ್ಯಾಯದಲ್ಲಿ ಆಧ್ಯಾತ್ಮಿಕ, ಆಧಿದೈವಿಕ, ಆಧಿಬೌತಿಕ ರೂಪವಾದ ಈ ಜಗತ್ತು ಶ್ರೀಪರಮಾತ್ಮನ ಮುಖಾದಿ ಅವಯವಗಳಿಂದ ಉತ್ಪನ್ನವಾದ ಕ್ರಮವನ್ನೂ, ಅವುಗಳಿಂದ ಪರಮಾತ್ಮನಿಗೆ ಅತ್ಯಂತ ಭಿನ್ನತ್ವ, ವಿಲಕ್ಷಣತ್ವ, ಸರ್ವೋತ್ತಮತ್ವಗಳನ್ನೂ ನಿರೂಪಿಸುತ್ತಾರೆ. ಮೊದಲು ಆಧ್ಯಾತ್ಮಗಳೆನಿಸುವ ಇಂದ್ರಿಯಗಳ ಇಂದ್ರಿಯಾಭಿಮಾನಿ ದೇವತೆಗಳ ಮತ್ತು ಸಮಸ್ತ ವಸ್ತುಗಳ ಉತ್ಪತ್ತಿಯು, ಶ್ರೀಪರಮಾತ್ಮನ ಯಾವ ಯಾವ ಅಂಗಗಳಿಂದ ಆದವೆಂಬುದನ್ನು ನಿರೂಪಿಸುತ್ತಾರೆ:-

ವಾಗಿಂದ್ರಿಯವೂ, ವಚನಗಳೂ, ವಾಗಿಂದ್ರಿಯಾಭಿಮಾನಿದೇವತೆಯಾದ ಅಗ್ನಿಯೂ, ಪುರುಷನಾಮಕ ಪರಮಾತ್ಮನ ಮುಖದಿಂದ ಹುಟ್ಟಿದವು. ಗಾಯತ್ರಿ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತಿ, ತ್ರಿಷ್ಟುಪ್, ಜಗತೀ ಎಂಬ ಏಳು ಛಂದಸ್ಸುಗಳೂ ಪುರುಷನಾಮಕ ಪರಬ್ರಹ್ಮನ ತ್ವಕ್, ಮಾಂಸ, ರುಧಿರ, ಮೇಧಾ, ಮಜ್ಜ, ಅಸ್ತಿ, ಸ್ನಾಯುಗಳೆಂಬ ಸಪ್ತಧಾತುಗಳಿಂದ ಉತ್ಪನ್ನವಾದವು. ಹವ್ಯಾದಿ ಸರ್ವ ಅನ್ನಾದಿ ಪದಾರ್ಥಗಳೂ, ಕಷಾಯ, ಮಧುರಾದಿ ಷಡ್ರಸಗಳೂ, ಪುರುಷನ ನಾಲಿಗೆಯಿಂದ ಉತ್ಪನ್ನವಾದವು. ಸಮಸ್ತಜೀವರೂ, ನಲವತ್ತೊಂಭತ್ತು ಮರುತರೂ, ಮುಖ್ಯವಾಯುನಾಮಕ ಶ್ರೀಮುಖ್ಯಪ್ರಾಣನೂ ಪರಮಾತ್ಮನ ಶ್ವಾಸದಿಂದಲೂ, ಮೂಗಿನಿಂದ ಅಶ್ವಿನೀದೇವತೆಗಳೂ, ಘ್ರಾಣೇಂದ್ರಿಯದಿಂದ ಭತ್ತ ಮುಂತಾದ ಸಕಲ ಧಾನ್ಯಗಳೂ, ಗಂಧವೂ ಸುರಭಿ ಎಂಬ ನಾಮದಿಂದಲೂ ಉತ್ಪನ್ನವಾದವು. ಪರಮಾತ್ಮನ ಕಣ್ಣಿನಿಂದ ರೂಪವೂ, ಪ್ರಕಾಶಕೊಡತಕ್ಕ ಸಮಸ್ತಜ್ಯೋತಿಗಳೂ, ಸೂರ್ಯ, ಚಂದ್ರ, ನಕ್ಷತ್ರಾದಿಗಳೂ ಉತ್ಪನ್ನವಾದವು. ದಿಗ್ದೇವತೆಗಳೂ, ನದಿಗಳೂ, ಶಾಸ್ತ್ರಗಳೆಂಬ ಭಗವನ್ಮಹಿಮೆಗಳನ್ನು ಹೇಳುವ ಅನಂತವೇದಗಳೂ, ತದಂಗಗಳೂ ಸಹ, ನದಿಗಳಂತೆ ಪವಿತ್ರವನ್ನಾಗಿ ಮಾಡುವುದರಿಂದ ಅವು ತೀರ್ಥಗಳೆನಿಸುವವು. .

ಪರಮಾತ್ಮನ ದೇಹವು, ಸಾರರೂಪವಾದ, ಬಲಪ್ರದಗಳಾದ, ಸೌಭಾಗ್ಯಪ್ರದಗಳಾದ, ಸಕಲಶ್ರೇಷ್ಠವಸ್ತುಗಳಿಗೂ, ಉತ್ಪತ್ತಿ ಮತ್ತು ಆವಾಸಸ್ಥಾನವು. ತ್ವಗಿಂದ್ರಿಯವೂ, ವಾಯುವೂ ಸ್ಪರ್ಶಗುಣವೂ, ಸರ್ವಜ್ಞನಾದ ಪುರುಷನ ತ್ವಗೀಂದ್ರಿಯದಿಂದ ಹುಟ್ಟಿದವು. ಪರಮಾತ್ಮನ ಮೈಮೇಲಿನ ಕೂದಲುಗಳಿಂದ ಉದ್ಭಿಜಗಳೆಂಬ ಯಜ್ಞೋಪಯೋಗ ಸರ್ವ ಪದಾರ್ಥಗಳೂ, ಯೂಪಸ್ತಂಭ ಮುಂತಾದವಕ್ಕೆ ಬೇಕಾದ ಮತ್ತು ಇತರ ಮಹಾವೃಕ್ಷಗಳೂ ಇತರ ರೋಮಗಳಿಂದ ಜನರಿಗೆ ಬೇಕಾದ ಜೀವನೋಪಾಯ ಸಾಧಕಗಳಾದ ಉದ್ಭಿಜಗಳೂ ಹುಟ್ಟಿದವು. ಪರಮಾತ್ಮನ ತಲೆಯ ಕೂದಲಿಂದ

ಮೇಘಗಳೂ, ಮುಖ ಕೂದಲುಗಳಿಂದ ಮಿಂಚುಗಳೂ, ಉಗುರುಗಳಿಂದ ಲೋಹಗಳೂ, ಕಲ್ಲುಗ್ಗಳೂ, ಉತ್ಪನ್ನವಾದವು. ಭೂಲೋಕ, ಭುವರ್ಲೋಕ, ಸ್ವರ್ಗಲೋಕಗಳೆಂಬ ಮೂರು ಲೋಕಗಳೂ, ಪರಮಾತ್ಮನ ಪಾದವಿಕ್ಷೇಪ ಪಾತ್ರಾಸ್ಥಾನಗಳು. ಪರಮಾತ್ಮನು ಅಲೌಕಿಕ ಪರಾಕ್ರಮವನ್ನು ತೋರಿಸುವುದಕ್ಕಾಗಿ ವಾಮನರೂಪದಿಂದ ಬಲಿಚಕ್ರವರ್ತಿಯನ್ನು ಮೂರುಪಾದ ಭೂಮಿ ಬೇಡಿ, ನಂತರ, ತ್ರಿವಿಕ್ರಮರೂಪವನ್ನು ತಾಳಿದಾಗ, ಒಂದೊಂದೇ ಪಾದದಿಂದ ಹೇಗೆ, ಈ ಮೂರು ಲೋಕಗಳೂ, ಅದ್ಭುತ ಪರಾಕ್ರಮದಿಂದ ಆಳೆಯಲ್ಪಟ್ಟವೋ, ಆ ತ್ರಿವಿಕ್ರಮನ ಪಾದವಿಕ್ಷೇಪವೆಂಬ ಪಾದಸ್ಪರ್ಶವನ್ನು ಹೊಂದಿದವೋ ಅಂತಹ ಸ್ಥಾನಗಳೆಂದು ತಾತ್ಪರ್ಯ.

ಲೋಕದ ಜನರ ಕ್ಷೇಮಕ್ಕಾಗಿ ಲೋಕಾಧಿಪತ್ಯವನ್ನು ಪಡೆದಿರುವ ಅಷ್ಟದಿಕ್ಪಾ ಲಕರೂ, ಚಕ್ರವರ್ತಿಗಳೂ, ಪರಮಾತ್ಮನ ಭುಜಗಳಿಂದ ಉತ್ಪನ್ನರು. ಕ್ಷೇಮಕ್ಕೂ, ಆಶ್ರಯಕ್ಕೂ, ಮೋಕ್ಷಕ್ಕೂ ಸಮಸ್ತ ಅಭೀಷ್ಟಗಳನ್ನು ಪಡೆಯುವುದಕ್ಕೂ, ವರಗಳನ್ನು ಬೇಡುವುದಕ್ಕೂ ಶ್ರೀಪರಮಾತ್ಮನ ಪಾದಗಳು ಮೂಲ ಆಶ್ರಯಸ್ಥಾನಗಳಾಗಿವೆ. ವೀರ್ಯದಿಂದ ಜಲವೂ, ಪರ್ಜನ್ಯನೂ; ಶಿಶ್ನದಿಂದ ಪ್ರಜೋತ್ಪತ್ತಿಯೂ ಪ್ರಜಾಪತಿಯೂ; ಗುಹ್ಯೇಂದ್ರಿಯದಿಂದ ರತಿಸುಖವೂ; ಮಿತ್ರನಾಮಕ ಸೂರ್ಯನೂ, ಯಮನೂ, ವಿಸರ್ಜನವೂ, ಗುದೇಂದ್ರಿಯದಿಂದಲೂ; ಗುದೇಂದ್ರಿಯವು ಪರಹಿಂಸೆಗಳನ್ನು ಮಾಡುವ ಪಾಪಿಜೀವರು, ಪಾಪಾಭಿಮಾನಿಯಾದ ನಿರಋತಿ ಲೋಕದಲ್ಲೂ, ಯಮಲೋಕದಲ್ಲೂ ನರಕದುಃ ಖಗಳನ್ನನುಭವಿಸುವುದಕ್ಕಾಗಿ, ಪ್ರಾಣತ್ಯಾಗಮಾಡುವ ದ್ವಾರವೆಂದೂ ಭಾವ. ಪರಾಜಯವೆಂಬ ಅಲಕ್ಷ್ಮಿಗೂ, ಅಧರ್ಮಕ್ಕೂ, ತಮಸ್ಸಿಗೂ ಪರಮಾತ್ಮನ ಪೃಷ್ಠಭಾಗವು ಆಶ್ರಯವಾಗಿರುತ್ತೆ. ನಾಡಿಗಳು ನದಿಗಳಿಗೂ, ಪರ್ವತಗಳಿಗೆ ಅಸ್ಥಿಗಳೂ ಉತ್ಪತ್ತಿ ಸ್ಥಾನಗಳು. ಮೂಲಪ್ರಕೃತಿಗೂ ಮಧುರಾದಿ ರಸಗಳಿಗೂ, ಸಮುದ್ರಗಳಿಗೂ ಜೀವರಿಗೂ, ಸಂಸಾರಸುಖಕ್ಕೂ ಪರಮಾತ್ಮನ ಉದರವು ಉತ್ಪತ್ತಿಸ್ಥಾನವು. ಸುಕೃತಗಳಿಗೂ, ತದಭಿಮಾನಿಧರ್ಮಾದಿ ದೇವತೆಗಳಿಗೂ, ಚತುರ್ಮುಖನೆಂಬ ನನಗೂ, ನಿಮ್ಮೆಲ್ಲರಿಗೂ, ಸನಕಾದಿಗಳಿಗೂ, ರುದ್ರನಿಗೂ, ವಿಜ್ಞಾನತತ್ವಕ್ಕೂ, ವಿಜ್ಞಾನದೇವತೆಗಳಿಗೂ, ಪರಮಾತ್ಮನ ಮಧ್ಯದೇಹವು ಉತ್ಪತ್ತಿಸ್ಥಾನವು.

ದೇವತೆಗಳು, ದೈತ್ಯರು, ಮನುಷ್ಯರು, ಸರ್ಪಗಳು, ಪಕ್ಷಿ ಮೃಗಾದಿಗಳು, ತಿಮಿಂಗಿಲಾದಿ ಜಲಜಂತುಗಳೂ, ಗಂಧರ್ವ, ಅಪ್ಸರೆಯರು, ಯಕ್ಷ, ರಾಕ್ಷಸ, ಭೂತಗಣಗಳೂ, ಮಹಾಸರ್ಪಗಳೂ, ಪಶುಗಳೂ, ಪಿತೃಗಳೂ, ಸಿದ್ಧವಿದ್ಯಾಧರ ಚಾರಣರೂ, ಮಹಾವೃಕ್ಷಗಳೂ, ಇತರರಾದ ಭೂ, ಜಲ, ಆಕಾಶಗಳಲ್ಲಿ ಜೀವಿಸುವ ಸರ್ವಪ್ರಾಣಿಗಳೂ, ಗ್ರಹ, ರಕ್ಷೋಗಣ, ಧೂಮಕೇತು ಮುಂತಾದವು,

अथ षष्ठोऽध्यायः

ನಕ್ಷತ್ರಗಳೂ, ಮಿಂಚುಗಳು, ಸಿಡಿಲುಗಳು ಮುಂತಾದ ಸರ್ವವೂ, ಪುರುಷನಾಮಕ ಪರಮಾತ್ಮನಿಂದಲೇ ಉತ್ಪನ್ನವಾಗಿ, ಅವನಿಂದ ಅಧಿಷ್ಠಿತಗಳಾಗಿ ಧರಿಸಲ್ಪಟ್ಟಿವೆ. ಸರ್ವಜೀವರ ಹೃದಯದಲ್ಲೂ ಹೊರಗೂ ಇದ್ದು, ಜೀವರಿಗೆ ದೇಹಾನುಭವವನ್ನೂ, ಹೊರಗಿನ ವಿಷಯಸಂಬಂಧವಾದ ಪದಾರ್ಥ ಜ್ಞಾನವನ್ನೂ, ವೇದಾದಿ ಸರ್ವಜ್ಞಾನವನ್ನೂ ಕೊಟ್ಟು, ತಾನೂ ನೋಡಿ ಸಾಕ್ಷಿರೂಪನಾಗಿರುತ್ತಾನೆ. ಈ ರೀತಿಯಾಗಿ ಸರ್ವಜ್ಞಾನ ಸರ್ವಚೇಷ್ಟಾಪ್ರದನಾದ್ದರಿಂದ ಪ್ರಾಣನೆಂದೂ, ದೇಹದಲ್ಲಿದ್ದು ದೇಹಿಗಳಿಗೆ ತಾಪವನ್ನುಂಟು ಮಾಡುತ್ತಲೂ, ಹೊರಗೆ ಸೂರ್ಯಾದಿಗಳಲ್ಲಿದ್ದು ತಾಪ ಉಂಟುಮಾಡುತ್ತಲೂ, ದೇಹದಲ್ಲಿ ಹಸಿವು, ಬಾಯಾರಿಕೆ, ಆಯಾಸಾದಿಗಳನ್ನು ಮಾಡಿ ದೇಹಪೋಷಣೆಗೆ ಸಾಧನವನ್ನೂ, ಹೊರಗೆ ಸಮಸ್ತ ಓಷಧಿ ಗಳಿಗೆ ಉಷ್ಣದಿಂದ ಉಪಚಯಮಾಡಿ ಅವುಗಳು ಬೆಳೆದು ಫಲಪ್ರದವಾಗುವಂತೆ ಮಾಡುವುದರಿಂದಲೂ, ಜಗತ್ತನ್ನು ಈ ತನುತಪನ ಕಾರ್ಯದಿಂದ ರಕ್ಷಿಸುತ್ತಿರುತ್ತಾನೆ.

ಆ ಪರಮಾತ್ಮನೇ ಜನನಮರಣಭಯರಹಿತರಾಗಿ ಶಾಶ್ವತಸುಖವೆಂಬ ಮುಕ್ತಿಯನ್ನು ಪಡೆದವರಿಗೂ ಸ್ವಾಮಿಯು. ಜಡಪ್ರಕೃತಿಗೆ ಅಭಿಮಾನಿಯಾದ ಚಿತ್ಪ್ರಕೃತಿ ಎಂಬ ಲಕ್ಷ್ಮೀದೇವಿಯ ಸಹಿತನಾಗಿ, ಜಗತ್ತಿನಲ್ಲಿ ಸ್ಥಿತಿಕಾಲದಲ್ಲಿ ಸರ್ವರಿಗೂ ಅನ್ನಾದಿ ಸಕಲ ಪದಾರ್ಥಗಳನ್ನೂ ಸೃಷ್ಟಿಸಿ ಕೊಟ್ಟು ರಕ್ಷಿಸುವವನು. ಪ್ರಳಯಕಾಲದಲ್ಲಿ ಸಂಕರ್ಷಣರೂಪದಿಂದ ತನ್ನಮುಖದ ಅಗ್ನಿಯಿಂದ ಸರ್ವವನ್ನೂ ಲಯಮಾಡುವವನು. ಅಮೃತಾಖ್ಯ ಅನಂತಾಸನವನ್ನೂ, ಈ ಮೂರು ಶಾಶ್ವತವಾದ ಮುಕ್ತಸ್ಥಾನಗಳನ್ನೂ ಶಿರಸ್ಸಿನಲ್ಲಿ ಧರಿಸಿರತಕ್ಕವನು. ಈ ಲೋಕಗಳ ಒಳಗೂ, ಹೊರಗೂ ಸರ್ವತ್ರದಲ್ಲಿದ್ದು ಬ್ರಹ್ಮಾದಿಗಳಾದ ನಮಗೆ ಆಶ್ರಯನೂ, ಸುಖಕೊಡುವವನೂ ಆಗಿರುತ್ತಾನೆ.

**ತ್ರಿಪಾತ್ಸ ಏವ ಭಗವಾನ್ಸರ್ವಪ್ರಾಣಿಷು ಸಂಸ್ಥಿತಃ।**
**ನಿರನ್ನೇಷು ಚ ವಿದ್ವತ್ಸು ತ್ರಿದಶೇಷ್ವಿತರೇಷು ಚ ॥**

ಎಂಬ ಪ್ರಮಾಣಾನುಸಾರ, ಅನಂತಾಸನದಲ್ಲಿ, ಅನಂತನೆಂಬ ಹೆಸರಿನಿಂದಿದ್ದು, ಸಾಶನರೆಂಬ ಮನುಷ್ಯ, ಪಿತೃಗಳೂ, ಅನಶನರೆಂಬ ದೇವತೆಗಳೂ, ಯಜ್ಞರೂಪ ಆರಾಧನೆಂದ ಹವಿಸ್ಸುಗಳನ್ನು ತನಗೆ ಅರ್ಪಿಸಿದ್ದನ್ನು ಸ್ವೀಕರಿಸಿ, ಹವಿಶ್ಶೇಷವನ್ನು ಅಮೃತವನ್ನಾಗಿ ಮಾಡುವುದರಿಂದಲೂ, ಅಮೃತಾಖ್ಯಮೋಕ್ಷಸುಖವನ್ನು ಅವರಿಗೆ ಕೊಡುವುದರಿಂದಲೂ, ಅಮೃತನೆಂದು ಕರೆಸಿಕೊಳ್ಳುತ್ತಾನೆ. ಅಪಮೃತ್ಯುರೂಪವಾದ ಕ್ಲೇಶವು ಪ್ರಾಪ್ತವಾದಾಗ ಜೀವರು ತಲೆತಗ್ಗಿಸಿ ಕುಗ್ಗಿರೋಣದರಿಂದ ಈ ರೀತಿ ಇರುವ ವಿಕುಂಠರಿಗೆ, ಅಪಮೃತ್ಯು ನಿವಾರಕನಾದ ಕಾರಣ ವೈಕುಂಠನಾಮಕನು, ಶ್ರೀಪರಮಾತ್ಮನು.

## अथ षष्ठोऽध्यायः

ಭಾ-ಎಂದರೆ, ಕಾಂತಿ, ಅಭ-ಅಂದರೆ ಕಾಂತಿ ಇಲ್ಲದಂತೆ ಕಾಂತಿಯುಳ್ಳ ಅಗ್ನಿಯನ್ನು ಮಾಡತಕ್ಕ ಜಲ. ಜಲಕ್ಕೆ ಆಶ್ರಯವಾದ ಸಮುದ್ರದಲ್ಲಿ-ಯ-ಪ್ರವೇಶಿಸಿ ಮಲಗಿರುವವನಾದ್ದರಿಂದ, ಅಭಯನಾಮಕನು, ಶ್ವೇತದ್ವೀಪಸ್ಥಿತ ಕ್ಷೀರಸಮುದ್ರಶಾಯಿಯಾದ ನಾರಾಯಣನು. ಈ ರೀತಿಯಾಗಿ ತ್ರಿಪಾತ್-ಎಂದು ಕರೆಸುವ, ಅನಂತ, ವೈಕುಂಠ, ನಾರಾಯಣಾಖ್ಯ ಮೂಲರೂಪಗಳಿಂದಲೇ, ಅನೇಕರೂಪಗಳನ್ನು ಧರಿಸಿ, ಮುಕ್ತಸ್ಥಾನಗಳ ಹೊರಗೆ, ಸ್ವರ್ಗಾದಿಲೋಕಗಳಲ್ಲೂ, ದೇವ, ದೈತ್ಯ, ಮನುಷ್ಯಾದಿ ಸರ್ವರನ್ನೂ ರಕ್ಷಿಸುತ್ತಾನೆ.

ಇಂತ ಬ್ರಹ್ಮಾಂಡಾಂತರ್ಗತ ವಿರಾಟ್ಪು ರುಷನ ನಾಭಿಕಮಲದಲ್ಲಿ ನಾನು ಉತ್ಪನ್ನನಾದೆನು. ಕಮಲದಲ್ಲಿ ಉತ್ಪನ್ನನಾದ ನನಗೆ, ಸೂರ್ಯೋದಯವಾದರೆ ಹೇಗೆ ಸರ್ವತ್ರವೂ ಉಜ್ವಲವಾದ ತೇಜಸ್ಸು ಹರಡುತ್ತದೆಯೋ ಅದರಂತೆ, ಜ್ಞಾನ ಭಕ್ತಿ ವಿಜ್ಞಾನಗಳು ಉದ್ರೇಕವಾಗಿ ಪರಮಾತ್ಮನನ್ನು ಆರಾಧಿಸಬೇಕೆಂದು ಅಪೇಕ್ಷೆಯಾಯಿತು. ಯಜ್ಞಕ್ಕೆ ಬೇಕಾದ ಎಲ್ಲಾ ವಸ್ತುಗಳೂ, ಪರಮಾತ್ಮನ ಅಂಗಗಳಲ್ಲೇ ಹುಟ್ಟಿ, ಅಲ್ಲೇ ಆಶ್ರಯಹೊಂದಿ, ಆ ಪರಮಾತ್ಮನಿಂದಲೇ ವ್ಯಾಪ್ತವಾದದ್ದನ್ನು ನಾನು ನೋಡಿ, ಪರಮಾತ್ಮನ ಅಂಗಗಳಲ್ಲದ ಬೇರೆ ಯಜ್ಞಸಾಧನ ಪದಾರ್ಥಗಳನ್ನು ಕಾಣದವನಾದೆ. ಆದುದರಿಂದ, ಆ ಪರಮಾತ್ಮನ ಅಂಗಗಳಲ್ಲಿರುವ, ಯಜ್ಞಶಾಲೆ ಏನು, ಪಶುಗಳೇನು, ವನಸ್ಪತಿ, ದರ್ಭೆ, ಬಂಗಾರಾದಿ ದ್ರವ್ಯಗಳು, ಓಷದಿಗಳು, ಎಣ್ಣೆತುಪ್ಪ , ಗಂಗಾದಿ ಜಲಗಳು, ಷಡ್ರಸೋಪೇತವಸ್ತುಗಳು, ಮೃತ್ತಿಕೆ, ಋಗ್ಯಜುಸ್ಸಾಮ ವೇದಗಳು, ಚಾತುರ್ಹೋತ್ರ ಸಾಮಗ್ರಿಗಳೂ, ಮಂತ್ರಗಳೂ, ಋತ್ವಿಕರೂ, ಸಾಮಗಾನ ಮಾಡುವವರೂ, ಯಾಗ ಹೋಮ ಮಾಡುವವರೂ, ದಕ್ಷಿಣೆಯೂ, ವ್ರತಗಳು, ತಾರತಮ್ಯದಂತೆ ದೇವತಾ ಸಮೂಹಗಳೂ, ಕಾಲನಿರ್ಣಯ ಶಾಸ್ತ್ರವೂ, ಸಂಕಲ್ಪ ಪ್ರಕಾರವೂ, ಬ್ರಹ್ಮಮೀಮಾಂಸಾ ಸೂತ್ರವೂ, ಗತಿ, ಮತಿ, ಶ್ರದ್ಧಾ, ಪ್ರಾಯಶ್ಚಿತ್ತಾದಿಗಳು, ಸರ್ವಸಮರ್ಪಣ ವಿಧಾನವೂ, ಪರಮಾತ್ಮನ ಅಂಗಗಳಲ್ಲೇ ಇರತಕ್ಕವುಗಳನ್ನು ತೆಗೆದುಕೊಂಡು ಮೊದಲು, ನಾನು ಯಜ್ಞನಾಮಕನಾದ ಪರಮಾತ್ಮನನ್ನು, ಅನೇಕ ವಿಧ ಜ್ಞಾನಯಜ್ಞಗಳಿಂದ, ಅರ್ಚಿಸಿ, ಪರಮಾತ್ಮನಿಗೆ ಸಮರ್ಪಿಸಿದೆನು.

ನಂತರ ರುದ್ರಾದಿದೇವತೆಗಳೂ, ಇಂದ್ರಾದಿಗಳೂ, ಶೌನಕಾದಿಋಷಿಗಳೂ ಈ ರೀತಿಯಲ್ಲಿಯೇ, " ಯಜ್ಞೇನ ಯಜ್ಞ ಮಯಜಂತ ದೇವಾಃ " ಎಂಬ ಪುರುಷಸೂಕ್ತೋಕ್ತಿಯಂತೆ ಆರಾಧಿಸಿದರು. ನಂತರ ಭಗವತ್ಪ್ರಸಾದದಿಂದ ಭಗವದಂಗದಲ್ಲಿದ್ದ ಯಜ್ಞಪದಾರ್ಥಗಳೇ ಹೊರಗೆ ಸೃಷಿಸಲ್ಪಟ್ಟು, ಆ ಯಜ್ಞೋಪಕರಣಗಳಿಂದ ಮನುಗಳೂ, ಪಿತೃಗಳೂ, ದೈತ್ಯರೂ, ಮನುಷ್ಯರೂ, ಅನೇಕ ಹೋಮ, ಯಾಗಾದಿಗಳಿಂದ ಶ್ರೀಪರಮಾತ್ಮನನ್ನು ಅರ್ಚಿಸಿದರು. ಈಗಲೂ ಅರ್ಚಿಸುತ್ತಿರುತ್ತಾರೆ.

## अथ षष्ठोऽध्यायः

## ಭಗವಂತನ ನಾನಾವತಾರಗಳ ಸೂಕ್ಷ್ಮ ಪರಿಚಯ

ಭಗವಂತನಾದ ನಾರಾಯಣನಲ್ಲಿ ಈ ಪ್ರಪಂಚವು ಏಕಾಂಶದಲ್ಲಡಗಿದೆ. ನಿರ್ಗುಣನಾದ ಪರಮಾತ್ಮನು ಸೃಷ್ಟಿಕಾಲದಲ್ಲಿ ಸತ್ವರಜಸ್ತಮೋಗುಣಗಳನ್ನು ತನ್ನಧೀನಮಾಡಿಕೊಂಡು ಬ್ರಹ್ಮಾಂಡವನ್ನೂ ನನ್ನನ್ನೂ ಸೃಷ್ಟಿಮಾಡಿ, ನಂತರ ನನ್ನಲ್ಲಿ ಪ್ರವೇಶಿಸಿ ಬ್ರಹ್ಮಸೃಷ್ಟಿ ಎಂಬ ಸ್ಥೂಲಸೃಷ್ಟಿಯನ್ನು ಮಾಡಿಸಿದ್ದರಿಂದ, ನಾನು ಸೃಷ್ಟಿಮಾಡುತ್ತಿರುತ್ತೇನೆ. ರುದ್ರನಲ್ಲಿ ಪ್ರವೇಶಿಸಿದ ಆ ಶ್ರೀಹರಿಯ ಸಾಮರ್ಥ್ಯದಿಂದಲೇ ರುದ್ರ ಲೋಕಸಂಹಾರ ಕಾರ್ಯಮಾಡುತ್ತಾನೆ. ತಾನೇ ಪುರುಷ ರೂಪದಿಂದ ಸ್ವಯಂ ನಮ್ಮೆಲ್ಲರಿಂದ ಕೂಡಿದ ಪ್ರಪಂಚವನ್ನು ಸಂರಕ್ಷಿಸುತ್ತಾನೆ. ಈ ರೀತಿ ಅಚಿಂತ್ಯಾದ್ಭುತಶಕ್ತನಾದ ಶ್ರೀಪರಮಾತ್ಮನ ಮಹಿಮೆಗಳನ್ನು, ನಿನ್ನ ಪ್ರಶ್ನೆಗಳಿಗೆ ಉತ್ತರವಾಗಿ ಹೇಳಿದೆನು. ಸದಾ ಸನ್ನಾಮಕ ಸರ್ವ ವಸ್ತುಗಳೂ ಅವನ ಅನುಗ್ರದಿಂದಿವೆ.

ಈ ರೀತಿಯಾಗಿ, ಪರಮಾತ್ಮನ ಪ್ರಸಾದದಿಂದ ಅತ್ಯಂತ ಉದ್ರೇಕವಾದ ಭಕ್ತಿಯಿಂದ ನಾನು ನಿರಂತರ ಬಾಷ್ಪ ಪೂರಿತನಾಗಿ, ಗದ್ಗದ ಸ್ವರದಿಂದ ಶ್ರೀಪರಮಾತ್ಮನ ಗುಣಗಾನಮಾಡಿ, ಯಾವಾಗಲೂ ಸತ್ಯವಾದ ದೃಷ್ಟಿ ಜ್ಞಾನಗಳಿಂದ ಕೂಡಿರುತ್ತೇನೆ. ನಾನು ಆಡುವ ಮಾತುಗಳೂ ನಿರ್ದುಷ್ಟವಾಗಿ ಸತ್ಯವಾದವುಗಳೇ, ಎಂದಿಗೂ ಸುಳ್ಳಾಗುವುದಿಲ್ಲ. ನನ್ನ ಇಂದ್ರಿಯಗಳು ಪರಮಾತ್ಮನ ಪ್ರಸಾದದಿಂದ, ಅತ್ಯಂತ ಉನ್ನತ ಸ್ವಭಾವವುಳ್ಳವುಗಳಾಗಿ ನಿರಂತರ ಇರುತ್ತವೆ. ಹೀನ ವಿಷಯಾದಿಗಳಿಂದ ಮುಟ್ಟಲ್ಪಡುವುದಿಲ್ಲ. ಜ್ಞಾನಭಕ್ತಿಗಳ ಉನ್ನತಿಗೆ ಕಾರಣಗಳಾಗುವುವೇ ಹೊರತು, ತಿರೋಧನ ಮಾಡಲಿಕ್ಕೆ ಶಕ್ತವಾದುವುಗಳಾಗಿಲ್ಲ. ಆದುದರಿಂದ ಶ್ರೇಯಸ್ಸನ್ನಪೇಕ್ಷಿಸುವವರು ಭಕ್ತಿಜ್ಞಾನಗಳಿಂದ ಪರಮಾತ್ಮನನ್ನು ನಿರಂತರ ಆರಾಧಿಸಿ, ಆತನ ಪ್ರಸಾದ ಪಡೆದರೇ, ಇಂತಹ ಇಂದ್ರಿಯ ನಿಗ್ರಹ ಸಾಧ್ಯವಾಗುವುದು.

ಈ ರೀತಿಯಾಗಿ ನನ್ನಲ್ಲಿ ಪ್ರಸನ್ನನಾದ ಪರಮಾತ್ಮನನ್ನು ನಾನು, ವೇದಮಯನೆಂದೂ, ತಪೋಮಯನೆಂದೂ, ಪ್ರಜೆಗಳಿಗೆ ಸ್ವಾಮಿಯಾದ ಪ್ರಜಾಪತಿ ಎಂದೂ ಉಪಾಸನೆಮಾಡಿ, ಮನೋಯೋಗದಿಂದ ಹೇಗೆ ದೇವರು ನನಗೆ ನಿರಂತರ ಪ್ರತ್ಯಕ್ಷನಾಗುವನೋ ಆ ರೀತಿಯಲ್ಲಿ ನಾನು ಭಗವದುಪಾಸನಾ ದೀಕ್ಷಿತನಾಗಿರುತ್ತೇನೆ. ಯಾವ ವಿಷ್ಣುವು ಸ್ವರೂಪಭೂತ ಮಹಿಮೆಗಳಿಂದ, ಅನಂತ ವೈಭವಗಳುಳ್ಳ ಅನಂತ ರೂಪಗಳನ್ನು ಸ್ವೀಕರಿಸಿ, ವ್ಯಾಪಾರಗಳನ್ನು ಮಾಡುವುದನ್ನು, ತನಗೆ ತಾನೇ ತಿಳಿಯಬಲ್ಲನೇ ಹೊರತು, ಬೇರೆ ಅಸ್ಮದಾದಿಗಳು ಯಾವ ಕಾಲಕ್ಕೂ ತಿಳಿಯಲು ಶಕ್ತರಲ್ಲ. ಇನ್ನು ಮಾಯಾಮೋಹಿತರಾದ ಅಜ್ಞಾನಿಗಳು ಆತ್ಮಶಬ್ದವಾಚ್ಯನಾದ ಶ್ರೀಪರಮಾತ್ಮನನ್ನು ಹೇಗೆ ತಿಳಿದಾರು?

ಯಾವ ಪರಮಾತ್ಮನ ಅನಂತ ಗುಣ, ರೂಪ, ಕಾರ್ಯದ ಮಹಾತ್ಮೆಗಳನ್ನು, ಅತ್ಯಂತ ಭಕ್ತಿಯಿಂದ,

ಪರಮ ಆದರದಿಂದ, ನಾನೇ ಮೊದಲಾದವರು ನಿರಂತರ ಗಾನಮಾಡಿ, ಆ ಅಮೃತಪಾನದಿಂದ ಮತ್ತರಾಗಿರುವೆವೋ ಅಂತಹ ನಾವು ದುರಂತಮಹಿಮನಾದ ನಾರಾಯಣನ ವ್ಯಾಪಾರಗಳನ್ನು ತಿಳಿಯದೇ ಭಕ್ತಿಪಾರವಶ್ಯತೆಯಿಂದ ಪುನಃ ಪುನಃ ನಮಸ್ಕಾರ ಮಾಡುತ್ತೇವೆ.

ಸಹಸ್ರಬಾಹುಗಳುಳ್ಳ ಶೇಷನೂ ಇದುವರಿಗೂ ವರ್ಣಿಸಿ ಪರಮಾತ್ಮನ ಮಹಿಮೆಗಳನ್ನು ಮನಗಾಣದವನಾಗಿರುತ್ತಾನೆ. ಇಂತಹಃ ಅಗಮ್ಯ ಮಹಿಮನಾದ ಪುರುಷೋತ್ತಮನು ಪ್ರತಿ ಬ್ರಹ್ಮಕಲ್ಪದಲ್ಲಿಯೂ, ಜೀವ ಜಡಾತ್ಮಕ ಪ್ರಪಂಚವನ್ನು ಲೀಲೆಯಿಂದ ಸೃಷ್ಟಿಮಾಡಿ, ಅವುಗಳಲ್ಲಿ ಪ್ರವೇಶಿಸಿ, ಅವುಗಳು ಹುಟ್ಟುವಾಗ ತಾನೂ ಅಂತರ್ಯಾಮಿಯಾಗಿ ತದ್ರೂಪ ತದಾಕರ ತದ್ಭಿನ್ನ ಅಂತಃಪ್ರವಿಷ್ಟರೂಪದಿಂದ, ಹುಟ್ಟುವಂತೆಯೂ, ಸ್ಥಿತಿಯಲ್ಲಿ ಅವರಲ್ಲಿದ್ದು ಪಾಲಕನಂತೆಯೂ, ಅಂತ್ಯದಲ್ಲಿ ದೇಹ ನಾಶಮಾಡಿ ಲಯಮಾಡುವನಂತೆಯೂ, ತನ್ನ ಸ್ವೇಚ್ಛೆಯಿಂದ, ತನ್ನಲ್ಲಿ ತಾನೇ ಸಕಲ ಜಗದ್ವ್ಯಾಪಾರ ಮಾಡುತ್ತಾನೆ. ಈ ರೀತಿಯಾಗಿ, ನಿರ್ಮಲವಾದ, ನಿರ್ದುಷ್ಟವಾದ ಜ್ಞಾನವು, ಸದಾಕಾಲದಲ್ಲಿ ಜಗತ್ತಿನ ನಿಜಸ್ಥಿತಿಯನ್ನು ತಿಳಿಸತಕ್ಕದ್ದನ್ನು ನಿರೂಪಿಸಲ್ಪಟ್ಟಿತು.

ಮನನಶೀಲರಾದ ಮುನಿಗಳೂ, ಈ ಜ್ಞಾನವನ್ನವಲಂಭಿಸಿ, ಸ್ತುತ್ಯನೂ, ಪೂರ್ಣನೂ, ಆದ್ಯಂತರಹಿತನೂ, ನಿರ್ಗುಣ ಎಂದರೆ ತ್ರೈಗುಣ್ಯವರ್ಜಿತನೂ, ನಿತ್ಯ ಎಂದರೆ ಶಾಶ್ವತನೂ, ಅದ್ವಯ-ಎಂದರೆ ಸಮಾನಾಧಿಕ ರಹಿತನೂ, ಸರ್ವೋತ್ತಮನೂ ಆದವನೆಂದು ಪರಮಾತ್ಮನನ್ನು ಉಪಾಸನೆಮಾಡಿ ದುಸ್ತರ್ಕಗಳಿಂದ ತಿರೋಹಿತವಾದ ಜ್ಞಾನವನ್ನು, ಪರಿಶುದ್ಧವನ್ನಾಗಿ ಮಾಡಿಕೊಂಡು, ಪರಮಪದವೆಂಬ ಮೋಕ್ಷಕ್ಕೆ ದಾರಿಮಾಡಿಕೊಳ್ಳುವರು.

**ಇಲ್ಲಿಗೆ ಶ್ರೀಮದ್ಭಾಗವತ ದ್ವಿತೀಯಸ್ಕಂಧದ ಆರನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

## अथ सप्तमोऽध्यायः

ब्रह्मोवाच

यत्रोद्गतः क्षितितलोद्धरणाय बिभ्रत् क्रौडीं तनुं सकलयज्ञमयीमनन्तः ।
अन्तर्महार्णव उपागतमादिदैत्यं तं दंष्ट्रयाऽद्रिमिव वज्रधरो ददार ॥ १ ॥

जातो रुचेरजनयत्सुयशाः सुयज्ञः आकूतिसूनुरमरानथ दक्षिणायाम् ।
लोकत्रयस्य महतीमहरद्य आर्तिं स्वायम्भुवेन मनुना हरिरित्यनूक्तः ॥ २ ॥

## अथ सप्तमोऽध्यायः

जज्ञे च कर्दमगृहे द्विज देवहूत्यां स्त्रीभिः समं नवभिरात्मगतिं स्वमात्रे।
ऊचे य आत्मशमलं गुणसङ्गपङ्कमस्मिन् विधूय कपिलः स्वगतिं प्रपेदे॥ ३ ॥

अत्रेरपत्यमभिकाङ्क्षत आह तुष्टो दत्तो मयाहमिति यद्भगवान् स दत्तः।
यत्पादपङ्कजपरागपवित्रदेहा योगर्धिमापुरमयीं यदुहैहयाद्याः ॥ ४ ॥

तप्तं तपो विविधलोकसिसृक्षया मे आदौ सनात्सुतपसस्तपतः सनोभूत्।
प्राक्कल्पसम्प्लवविनष्टमिहात्मतत्वं सम्यग्जगाद मुनयो यदचक्षतात्मन्॥ ५ ॥

धर्मस्य दक्षदुहितर्यजनि स्वमूर्त्या नारायणो नर इति स्वतपः प्रभावः।
दृष्टात्मनो भगवतो नियमावलोपं देव्यस्त्वनङ्गपृतना घटितुं न शेकुः ॥ ६ ॥

कामं दहन्ति कृतिनो ननु रोषदृष्ट्या रोषं दहन्तमुतते न दहन्त्यसह्यम्।
सोऽयं यदन्तरमलं निविशन् बिभेति कामः कथं नु पुनरस्य मनः श्रयेत॥ ७ ॥

विद्धः सपत्न्युदितपत्रिभिरन्ति राज्ञो बालोऽपि सन्नुपगतस्तपसे वनाय।
तस्मा अदाद्ध्रुवगतिं गृणते प्रसन्नो दिव्याः स्तुवन्ति मुनयो यदुपर्यधस्तात्॥ ८ ॥

यद्वेनमुत्पथगतं द्विजवाक्यवज्रनिष्पिष्टपौरुषभगं निरये पतन्तम्।
ज्ञात्वाऽर्थितो जगति पुत्रपदञ्च लेभे दुग्धा वसूनि वसुधा सकलानि येन॥ ९ ॥

नाभेरसावृषभ आस सुदेविसूनुः  यो वै चचार समदृग् हृदि योगचर्याम्।
यत्पारमहंस्यमृषयः पदमामनन्ति स्वस्थः प्रशान्तकरणः परिमुक्तसङ्गः ॥ १० ॥

सत्रे ममास भगवान्हयशीर्ष एषः साक्षात्सयज्ञपुरुषस्तपनीयवर्णः।
छन्दोमयो मखमयोऽखिलदेवतात्मा वाचो बभूवुरुशतीः श्वसतोऽस्य नस्तः ॥ ११ ॥

मत्स्यो युगान्तसमये मनुनोपलब्धः  क्षोणीमयो निखिलजीवनिकायकेतः।
विस्रंसितानुरुभये सलिले मुखान्मे आदाय तत्र विजहार ह वेदमार्गान्॥ १२ ॥

क्षीरोदधावमरदानवयूथपानां उन्मथ्नताममृतलब्धय आदिदेवः।
पृष्ठेन कच्छपवपुर्विदधार गोत्रं निद्रेक्षणोऽद्रिपरिवर्तकषाणकण्डुः ॥ १३ ॥

त्रैविष्टपोरुभयहारिनृसिंहरूपं कृत्वा भ्रमद्भ्रुकुटिदंष्ट्रकरालवक्त्रम्।
दैत्येन्द्रमाशु गदयाऽभिपतन्तमारात् ऊरौ निपात्य विददार नखैः स्फुरन्तम्॥ १४ ॥

## अथ सप्तमोऽध्यायः

अन्तः सरस्युरुबलेन पदे गृहीतो ग्राहेण यूथपतिरम्बुजहस्त आर्तः।
आहेदमादिपुरुषाखिललोकनाथतीर्थश्रवः श्रवणमङ्गलनामधेय॥ १५ ॥

स्मृत्वा हरिस्तमरणार्थिनमप्रमेयः चक्रायुधः पतगराजभुजाधिरूढः।
चक्रेण नक्रवदनं विनिपाट्य तस्मात् हस्ते प्रगृह्य भगवान् कृपयोज्जहार॥ १६ ॥

ज्यायान्गुणैरवरजोऽप्यदितेः सुतानां लोकान् विचक्रम इमान्यदथोऽधियज्ञः।
क्ष्मां वामनेन जगृहे त्रिपदच्छलेन याञ्चामृते पथिचरन् प्रभुभिर्न चाल्यः ॥ १७ ॥

नार्थो बलेरयमुरुक्रमपादशौचम् अम्भः शिवं धृतवतो विबुधाधिपत्यम्।
यो वै प्रतिश्रुतमृतेऽपि च शीर्षमाणम् आत्मन्यमङ्ग मनसा हरयेऽभिमेने॥ १८ ॥

तुभ्यञ्च नारद भृशं भगवान् विवृद्धभावेन साधु परितुष्ट उवाच योगम्।
ज्ञानञ्च भागवतमात्मसुतत्वदीपं यद्वासुदेवशरणा विदुरञ्जसैव॥ १९ ॥

चक्रञ्च दिक्ष्वविहतं दशसु स्वतेजो मन्वन्तरेषु मनुवंशधरो बिभर्ति।
दुष्टेषु राजसु दमं विदधत्स्वकीर्तिं सत्ये निविष्ट उशतीं प्रथयंश्चरित्रैः ॥ २० ॥

धन्वन्तरिश्च भगवान् स्वयमास देवो नाम्ना नृणां पुरुरुजां रुज आशु हन्ति।
यज्ञे च भागममृतायुरवाप चाद्धा आयुश्च वेदमनुशास्त्यवतीर्य लोके॥ २१ ॥

क्षत्रं क्षयाय विधिनोपहृतं महात्मा ब्रह्मध्रुगुज्झितपथं नरकार्तिलिप्सु।
उद्धन्त्यसाववनिकण्टकमुग्रवीर्यः त्रिः सप्तकृत्व उरुधारपरश्वधेन॥ २२ ॥

कृत्स्नप्रसादसुमुखः कलया कलेशः इक्ष्वाकुवंश अवतीर्य गुरोर्निदेशे।
तिष्ठन् वनं सदयितानुज आविवेश यस्मिन् विरुध्य दशकन्धर आर्तिमार्च्छत्॥ २३ ॥

यस्मा अदादुदधिरूढभयाङ्गवेपो मार्गं सपद्यरिपुरं हरवद्दिधक्षोः।
दूरेसुहृन्मथितरोषसुशोषदृष्ट्या तातप्यमानमकरोरगनक्रचक्रः ॥ २४ ॥

वक्षस्थलस्पर्शरुग्णमहेन्द्रवाहदन्तैर्विलम्बितककुब्जयरूढहासः।
सद्योऽसुभिः सह विनेष्यति दारहर्तुः विस्फूर्जितैर्धनुष उच्चरितैः ससैन्यः ॥ २५ ॥

भूमेः सुरेतरवरूथविमर्दितायाः क्लेशव्ययाय कलयासितकृष्णकेशः।
जातः करिष्यति जनानुपलक्ष्यमार्गः कर्माणि चात्ममहिमोपनिबन्धनानि॥ २६ ॥

## अथ सप्तमोऽध्यायः

तोकेन जीवहरणं यदुलूपिकायाः  त्रैमासिकस्य च पदा शकटोपवृत्तः।
यद्रिङ्गताऽन्तरगतेन दिवि स्पृशोर्वा उन्मूलनं त्वितरथाऽर्जुनयोर्न भाव्यम्॥ २७ ॥

यद्वै व्रजे व्रजपशून् विषतोयपीतान् गोपांस्तु जीवयदनुग्रहदृष्टिवृष्ट्या।
तच्छुद्धयेऽतिविषवीर्यविलोलजिह्वम् उच्चाटयिष्यदुरगं व्यहरद् ह्रदिन्याम्॥ २८ ॥

तत्कर्म दिव्यमिव यन्निशि निः शयानं दावाग्निनाशु विपिने परिदह्यमाने।
उन्नेष्यति व्रजमितोऽवसितान्तकालं नेत्रे पिधाप्य सबलोऽनधिगम्यवीर्यः ॥ २९ ॥

गृह्णीत यद्यदुपबद्धुममुष्य माता शुल्बं सुतस्य न तु तत्तदमुष्य माति।
यज्जृम्भतोऽस्य वदने भुवनानि गोपी संवीक्ष्य शङ्कितमनाः प्रतिबोधितस्य॥ ३० ॥

नन्दञ्च मोक्ष्यति भयाद्वरुणस्य पाशात् गोपान् बिलेषु पिहितान्मयसूनुना च।
जलप्यावृतं निशि शयानमतिश्रमेण लोके विकुण्ठ उपधास्यति गोकुलं स्म॥ ३१ ॥

गोपैर्मखे प्रतिहते व्रजविप्लवाय देवेऽभिवर्षति पशून् कृपया रिरक्षुः।
धर्तोच्छिलीन्ध्रमिव सप्तदिनानि सप्तवर्षो महीध्रमनघैककरे सलीलम्॥ ३२ ॥

क्रीडन् वने निशि निशाकररश्मिगौर्यां रासोन्मुखः कलपदायतमूर्च्छितेन।
उद्दीपितस्मररुजां व्रजसद्वधूनां हर्तुर्हरिष्यति शिरो धनदानुगस्य॥ ३३ ॥

ये च प्रलम्बखरदर्दुरकेश्यरिष्ट मल्लेभकंसयवनाः कुजपौण्ड्रकाद्याः।
अन्येऽपि शाल्वकपिबल्वलदन्तवक्रसप्तोक्षशंबरविडूरथ रुग्मिमुख्याः ॥ ३४ ॥

ये वा मृधे समितिशालिन आत्तचापाः  काम्भोजमत्स्यकुरुसृञ्जयकैकयार्णाः ।
यास्यन्त्यदर्शनमिता बलपार्थभीमव्याजाह्वयेन हरिणा निलयं तदीयम्॥ ३५ ॥

कालेन मीलितदृशामवमृश्य नॄणां स्तोकायुषां स्वनिगमो बत दूरपारः।
आविर्हितस्त्वनुयुगं स हि सत्यवत्यां वेदद्रुमं विटपशो विभजिष्यति स्म॥ ३६ ॥

देवद्विषां निगमवर्त्मनि विष्ठितानां पूर्भिर्मयेन विहिताभिरदृश्यमूर्तिः।
लोकान् घ्नतां मतिविमोहमतिप्रलोभं वेषं विधाय यदभाषत औपधर्म्यम्॥ ३७ ॥

यर्ह्यालयेष्वपि सतां न कथा हरेः स्युः  पाषण्डिनो द्विजजनाः वृषला नृदेवाः।
स्वाहा स्वधा वषडिति स्म गिरो न यत्र शास्ता भविष्यति कलेर्भगवान्युगान्ते॥ ३८ ॥

## अथ सप्तमोऽध्यायः

सर्गे तु योऽहमृषयो नव ये प्रजेशाः  स्थानेऽथ धर्ममखमन्वमरावनीशाः।
अन्ते त्वधर्महरमन्युवशासुराद्याः  मायाविभूतय इमाः पुरुशक्तिभाजः ॥ ३९ ॥

विष्णोर्नु वीर्यगणनां कतमोऽर्हतीह यः पार्थिवान्यपि कविर्विममे रजांसि।
चस्कम्भ यः स्वरभसा स्खलितं त्रिपृष्ठं यन्मां निशाम्य सदनादुरुकम्पमानम् ॥ ४० ॥

नान्तं विदाम्यहममी मुनयः प्रजेशा मायाबलस्य पुरुषस्य कुतोऽपरे ये।
गायन् गुणान् दशशतानन आदिदेवः  शेषोऽधुनाऽपि समवस्यति नास्य पारम् ॥ ४१ ॥

येषां स एव भगवान् दययेदनन्तः  सर्वात्मनाश्रितपदो यदि निर्व्यलीकम्।
ते वै विदन्त्यतितरन्ति च देवमायां नैषां ममाहमिति धीः श्वसृगालभक्ष्ये ॥ ४२ ॥

वेदाहमङ्ग परमस्य हि योगमायां यूयं भवश्च भगवानथ दैत्यवर्यः।
पत्नी मनोः स च मनुस्तदपत्यभूताः  प्राचीनबर्हिऋभुरङ्ग उत ध्रुवश्च ॥ ४३ ॥

इक्ष्वाकुरैलमुचुकुन्दविदेहगाधिरघ्वम्बरीषसगरागयनाहुषाद्याः।
मान्धात्रलकशतधन्वनरन्तिदेवदेवव्रता बलिरमूर्तरयो दिलीपः ॥ ४४ ॥

सौभर्युदङ्कशिबिदेवलपिप्पलादाः  सारस्वतोद्धवपराशरभूरिषेणाः।
येऽन्ये विभीषणहनूमदुपेन्द्रदत्तपार्थार्ष्टिषेणविदुरश्रुतदेवमुख्याः ॥ ४५ ॥

ते वै विदन्त्यतितरन्ति च देवमायां स्त्रीशूद्रहूणशबरा अपि पापजीवाः।
यद्यद्भुतक्रमपरायणशीलशिक्षाः  तिर्यग्जना अपि किमु श्रुतधारणा ये ॥ ४६ ॥

शश्वत्प्रशान्तमभयं प्रतिबोधमात्रं शुद्धं समं सदसतः परमात्मतत्वम्।
शब्दो न यत्र पुरुकारकवान् क्रियार्थो माया परैत्यभिमुखे च विलज्जमाना ॥ ४७ ॥

तद्वै पदं भगवतः परमस्य पुंसो ब्रह्मेति यद्विदुरजस्रसुखं विशोकम्।
सम्य निशाम्य यतयो यमलोकहेतुं जह्युः सुधामिव निपानखनित्रमिन्द्रः ॥ ४८ ॥

स श्रेयसामपि विभुर्भगवान्यतोऽस्य भावस्वभावविहितस्य सतः प्रसिद्धः।
देहे स्वधातुविगमे तु विशीर्यमाणे व्योमेव तत्र पुरुषो न विशीर्यतेऽजः ॥ ४९ ॥

सोऽयं तेऽभिहितस्तात भगवान्विश्वभावनः।
समासेन हरेर्नान्यदन्यस्मात्सदसच्च यत् ॥ ५० ॥

**अथ सप्तमोऽध्यायः**

इदं भागवतं नाम यन्मे भगवतोदितम् ।
सङ्ग्रहोऽयं विभूतीनां तदेतद्विपुलीकुरु ॥ ५१ ॥

यथा हरौ भगवति नृणां भक्तिर्भविष्यति ।
सर्वात्मन्यखिलाधार इति सङ्कल्प्य वर्णय ॥ ५२ ॥

नृजन्मनि न तुष्येत किं फलं यमनश्वरे ।
कृष्णे यद्यपवर्गेशे भक्तिः स्यान्नानपायिनी ॥ ५३ ॥

किं स्याद्वर्णाश्रमाचारैः किं दानैः किं तपः श्रुतैः ।
सर्वाघघ्नोत्तमश्लोके न चेद्भक्तिरधोक्षजे ॥ ५४ ॥

मायां वर्णयतोऽमुष्य ईश्वरस्यानुमोदतः ।
शृण्वतः श्रद्धया नित्यं माययाऽऽत्मा न मुह्यति ॥ ५५ ॥

**॥ इति श्रीमद्भागवते (द्वितीयस्कन्धे(*2) सप्तमोऽध्यायः ॥**

**॥ ಏಳನೆಯ ಅಧ್ಯಾಯ ॥**

## ಭಗವಂತನ ನಾನಾವತಾರಗಳ ವರ್ಣನೆ

ಬ್ರಹ್ಮದೇವರು ಶ್ರೀಪರಮಾತ್ಮನ ಅವತಾರಕ್ರಮಗಳನ್ನೂ, ಆ ಅವತಾರಗಳಲ್ಲಿ ದೇವರು ಮಾಡಿದ ಕಾರ್ಯಗಳನ್ನೂ ನಿರೂಪಿಸುತ್ತಾರೆ. ವರಾಹಕಲ್ಪದಿಂದ ಆರಂಭಿಸಿ ಕ್ರಮವಾಗಿ ದೇವರು ಮಾಡಿದ ಅವತಾರಗಳನ್ನು ಹೇಳಲುದ್ದೇಶಿಸಿ, ಮೊದಲು ವರಹಾವತಾರಕ್ರಮವನ್ನು ಹೇಳುತ್ತಾರೆ.

ವರಾಹಕಲ್ಪದಲ್ಲಿ ಹಿರಣ್ಯಾಕ್ಷ ಅಥವಾ ತಮನೆಂಬ ಆದಿದೈತ್ಯನು ಸಕಲ ಜೀವರ ಜೀವನಕ್ಕೂ ಆಧಾರವಾದ ಭೂಲೋಕವನ್ನು ತನ್ನ ಪರಾಕ್ರಮದಿಂದ, ಸಮುದ್ರದಲ್ಲಿ ಮುಳುಗಿಸಿ, ಕೆಳಗಿನ ಲೋಕವಾದ ರಸಾತಳಕ್ಕೆ ಭೂಮಿಯನ್ನು ತೆಗೆದುಕೊಂಡು ಹೋದನು. ಬ್ರಹ್ಮದೇವರಿಂದ ಸೃಷ್ಟರಾದ ಪ್ರಜೆಗಳಿಗೆ ಆವಾಸ ಸ್ಥಾನವಿಲ್ಲದೆ ಹೋಯಿತು. ಪ್ರಜೆಗಳು ಬ್ರಹ್ಮದೇವರನ್ನು ನಮಗೆ ಆವಾಸ ಸ್ಥಾನವನ್ನು ಕೊಡಿ ಎಂದು ಪ್ರಾರ್ಥಿಸಲಾಗಿ, ಬ್ರಹ್ಮದೇವರು ಮೂಲಕಾರಣನಾದ ಶ್ರೀಮನ್ನಾರಾಯಣನನ್ನು ಧ್ಯಾನಿಸಿ ನಮಸ್ಕರಿಸಿದರು. ಆವಾಗ ಬ್ರಹ್ಮದೇವರಿಗೆ ಒಂದು ಶೀನು ಬಂತು. ಬ್ರಹ್ಮದೇವರ ಮನೋ ಇಂಗಿತವನ್ನರಿತ ಸ್ವಾಮಿಯು, ಬ್ರಹ್ಮದೇವರ ಶರೀರದಿಂದಲೇ ಒಂದು ಅಂಗುಷ್ಟ ಪ್ರಮಾಣ ವುಳ್ಳ, ಶಂಖ, ಚಕ್ರ, ಗದಾ,

ಪದ್ಮಗಳಿಂದಲೂ, ಸರ್ವಾಭರಣ, ಮಾಲ್ಯಾದಿಗಳಿಂದಲೂ ಭೂಷಿತನಾಗಿ, ಪೃಟ್ಟ ವರಹಮುಖ ವುಳ್ಳವನಾಗಿ, ಸ್ವಚ್ಛವರ್ಣದಿಂದ ಪ್ರಜ್ವಲಿಸುತ್ತಾ, ಆ ಬ್ರಹ್ಮದೇವರ ಶೀನಿನ ಮುಖಾಂತರವಾಗಿಯೇ ಈಚೆಗೆ ಬಂದನು. ನಂತರ ದೊಡ್ಡದಾದ ಅದೇ ಆಕೃತಿ ಹೊಂದಿ, ಬ್ರಹ್ಮದೇವರ ಮುಂದೆ ನಿಂತು, ಏನು ನನ್ನಿಂದಾಗಬೇಕೆಂದು ಕೇಳಿದನು.

ಬ್ರಹ್ಮದೇವರು ಪ್ರತ್ಯಕ್ಷನಾದ ಆ ಶ್ವೇತವರಾಹಮೂರ್ತಿಗೆ ಸಾಷ್ಟಾಂಗ ಪ್ರಣಾಮ ಮಾಡಿ, ಸೃಷ್ಟಿಮಾಡಲ್ಪಟ್ಟ ಪ್ರಜೆಗಳಿಗೆ, ಭೂಲೋಕವು ಕಾಣದಂತೆ ಸಮುದ್ರದಲ್ಲಡಗಿ ಹೋದದ್ದರಿಂದ, ಆವಾಸಸ್ಥಾನವೇ ಇಲ್ಲದಂತಾಗಿದೆ ಎಂದು ವಿಜ್ಞಾಪಿಸಿದರು. ಆ ಕ್ಷಣವೇ ಸರ್ವಯಜ್ಞಮಯ ಶರೀರನಾದ ಆ ವರಹಾವತಾರನು, ಸಮುದ್ರದಲ್ಲಿ ಮುಳುಗಿ, ರಸಾತಳವನ್ನು ಪ್ರವೇಶಿಸಿ, ಅಲ್ಲಿ ಭೂಲೋಕವನ್ನೂ, ಅದನ್ನು ಕದ್ದುಕೊಂಡು ಹೋಗಿದ್ದ ಆದಿದೈತ್ಯ ಹಿರಣ್ಣಾಕ್ಷನನ್ನೂ ಕಂಡು, ಯುದ್ಧಕ್ಕೆ ಬಂದ ಹಿರಣ್ಯಾಕ್ಷನನ್ನು ಗದೆಯಿಂದ ತಿವಿದು, ಕೈಯಿಂದ ಮೆತ್ತಗೆ ಕಪಾಳಕ್ಕೆ ಹೊಡೆಯೋಣ ಮಾತ್ರದಿಂದಲೇ ಅವನನ್ನು ಸಂಹರಿಸಿ, ತನ್ನ ಕೋರೆಹಲ್ಲಿನಿಂದ ಭೂಲೋಕವನ್ನು ಸಮುದ್ರದ ಮೇಲಕ್ಕೆತ್ತಿ ತಂದು, ಜಲದಮೇಲೆ ಸ್ಥಾಪಿಸಿದನು.

## ಯಜ್ಞನಾಮಕ ಪರಮಾತ್ಮನ ಅವತಾರ

ಲೋಕಪೂಜ್ಯ ಯಶಸ್ಸುಳ್ಳವನೂ, ಉತ್ಕೃಷ್ಠಚರಿತನೂ, ತನಗೆ ಅರ್ಪಿಸಲ್ಪಟ್ಟ ಸಮಸ್ತ ಯಜ್ಞಗಳನ್ನೂ ಸ್ವೀಕರಿಸಿ ಅದಕ್ಕೆ ಅನುಸಾರ ಶುಭಫಲಗಳನ್ನೂ ಕೊಡತಕ್ಕ, ಯಾವ ಇಂದ್ರಪುತ್ರನಾಗಿ ಅವತರಿಸಿದ ಯಜ್ಞನಾಮಕ ಪರಮಾತ್ಮನೋ, ಅವನೇ ಪುನಃ ರುಚಿನಾಮಕ ಋಷಿಯ ಪತ್ನಿ ಆಕೂತಿದೇವಿಯ ಗರ್ಭದಿಂದ, ಅವರ ಮಗನಾಗಿ ಯಜ್ಞನಾಮಕನಾಗಿ ಅವತರಿಸಿದನು. ಈ ಯಜ್ಞನಾಮಕ ಪರಮಾತ್ಮನು ರಮಾವತಾರಳಾದ ದಕ್ಷಿಣಾದೇವಿಯನ್ನು ಪತ್ನಿಯನ್ನಾಗಿ ಸ್ವೀಕರಿಸಿ, ದಕ್ಷಿಣಾದೇವಿಯಲ್ಲಿ, ಸ್ವಾಯಂಭುವ ಮನ್ವಂತರದ ಕೊನೆಚು ಕಾಲದಲ್ಲಿ ತುಷಿತರೆಂಬ ದೇವತೆಗಳನ್ನು ಮಕ್ಕಳನ್ನಾಗಿ ಪಡೆದನು ಮತ್ತು ಯಜ್ಞನಾಮಕನು ಇಂದ್ರಪದವಿಯನ್ನೂ ಆಳಿ, ಲೋಕಕಂಟಕರಾದ ಸಮಸ್ತ ದೈತ್ಯರನ್ನೂ ಸಂಹರಿಸಿ, ಲೋಕದ ಜನರಿಗೆ ಸುಖ, ಅಭಯಗಳನ್ನಿತ್ತನು. ಯಜ್ಞನಾಮಕ ಶ್ರೀಪರಮಾತ್ಮನ ಈ ಅದ್ಭುತಮಹಿಮೆಗಳನ್ನು ನೋಡಿ, ಸ್ವಾಯಂಭುವ ಮನುಗಳು, ಏಕಾಂತವಾಗಿ ಕುಳಿತು "ಈಶಾವಾಸ್ಯಮಿದಂಜಗತ್ "ಇತ್ಯಾದಿ ಈಶಾವಾಸ್ಯ ಉಪನಿಷತ್ಪ್ರತಿಪಾದ್ಯ ಪರಮಾತ್ಮನ ಮಹಿಮೆಗಳು, ಲೋಕದ ಆಪತ್ತುಗಳನ್ನೂ, ದರಿದ್ರತೆಯನ್ನೂ, ಪಾಪಗಳನ್ನೂ ಪರಿಹರಿಸುವುದರಿಂದ ಹರಿಶಬ್ದವಾಚ್ಯನೆಂದೂ ಧ್ಯಾನಿಸುತ್ತಾ, ಘಟ್ಟಿಯಾಗಿ ವೇದಮಂತ್ರಗಳಿಂದ ಪರಮಾತ್ಮನನ್ನು ಕೊಂಡಾಡುತ್ತಿದ್ದರು. ಅದನ್ನು ಸಹಿಸದೇ ಕೆಲವು ದೈತ್ಯರು ಇವರನ್ನು ಸಂಹರಿಸಿ ತಿನ್ನುವುದಕ್ಕೆ ಬಂದರು. ಸರ್ವಜ್ಞನಾದ ಯಜ್ಞನಾಮಕನು ಸ್ವಾಯಂಭುವ

ಮನುಗಳಿಗೆ ಪ್ರಾಪ್ತವಾದ ವಿಪತ್ತನ್ನು ತಿಳಿದು ತಕ್ಷಣ ಪ್ರತ್ಯಕ್ಷನಾಗಿ, ಆ ದೈತ್ಯರನ್ನು ಸಂಹರಿಸಿದನು. ಇದು ಕ್ರಮದಿಂದ ಎರಡನೆಯ ಅವತಾರ.

## ಕಪಿಲಾವತಾರ

ಕರ್ದಮ ಪ್ರಜೇಶ್ವರರಿಂದ, ಮರೀಚಿ, ಅತ್ರಿ ಮೊದಲಾದ ನವ ಪ್ರಜೇಶ್ವರರ ಪತ್ನಿಯರಿಗೆ ತಾಯಿಯಾದ, ದೇವಹೂತಿದೇವಿಯಲ್ಲಿ ಕಪಿಲನಾಮದಿಂದ ದೇವರು ಅವತರಿಸಿ, ಸಾಂಖ್ಯಯೋಗಜ್ಞಾನವೆಂಬ ನಿಖಿಳ ತತ್ವಜ್ಞಾನವನ್ನು ತನ್ನ ತಾಯಿಗೆ ಉಪದೇಶಿಸಿದ್ದಲ್ಲದೆ, ಈ ಸಮಸ್ತ ಸಜ್ಜನಸಮೂಹದಲ್ಲಿ ಇರುವ ಗುಣಸಂಬಂಧಕಶ್ಮಲವೆಂಬ ನಿರಂತರ ಶಬ್ದಾದಿ ಗುಣ ವುಳ್ಳ ವಿಷಯಸೇವನೆಯಿಂದ ಉಂಟಾದ ಅವಿದ್ಯಾಕಾಮಕರ್ಮವೆಂಬುದನ್ನೂ, ಮನೋಕಲ್ಮಷವನ್ನೂ, ಈ ಸಾಂಖ್ಯಶಾಸ್ತ್ರಾರ್ಥಜ್ಞಾನವೆಂಬ ಪವಿತ್ರ ಗಂಗಾಜಲದಿಂದ ತೊಳೆದು, ಅವರಿಗೂ ತನ್ನ ಸುಜ್ಞಾನವನ್ನಿತ್ತು, ಮೋಕ್ಷಸಾಧನೆಗೆ ಮಾರ್ಗಮಾಡಿ ಕೊಟ್ಟನು. ಇದು ಮೂರನೆಯ ಅವತಾರ.

## ದತ್ತಾತ್ರೇಯ ಅವತಾರ

ಅತ್ರಿ ಋಷಿಗಳು ಪರಮಾತ್ಮನಿಗೆ ಸಮನಾದ ಮಗನು ಬೇಕೆಂದಪೇಕ್ಷಿಸಿ ಘೋರವಾದ ತಪಸ್ಸನ್ನು ಮಾಡಿದರು. ತಪಸ್ಸಿಗೆ ಮೆಚ್ಚಿದೇವರು ಅವರ ಅಪೇಕ್ಷೆಯನ್ನು ಸಲ್ಲಿಸುವುದಕ್ಕಾಗಿ ಪ್ರತ್ಯಕ್ಷನಾಗಿ, "ನಿಮ್ಮ ಪತ್ನಿಯಲ್ಲಿ ನಾನೇ ಅವತಾರ ಮಾಡುವೆ"ನೆಂದು ಹೇಳಿ, ನಂತರ ಅವರ ಪತ್ನಿಯಾದ ಅನಸೂಯಾದೇವಿಯ ಗರ್ಭದಲ್ಲಿ ದತ್ತಾತ್ರೇಯನೆಂಬ ಹೆಸರಿನಿಂದ, ಪರಮಯೋಗೇಶ್ವರನೂ, ನೈಷ್ಠಿಕ ಬ್ರಹ್ಮಚಾರಿಯೂ, ಆಗಿ ಅವತರಿಸಿದನು. ಈ ದತ್ತಾತ್ರೇಯನ ಪರಮಪಾವನ ಶ್ರೀಚರಣಾರವಿಂದಗಳನ್ನು, ಆಶ್ರಯಿಸಿ ಆರಾಧಿಸಿ, ಯದುಚಕ್ರವರ್ತಿಯೂ, ಅವರ ವಂಶಜನಾದ ಕಾರ್ತವೀರ್ಯಾರ್ಜುನನೂ ಪವಿತ್ರರೂ, ಕೃತಾರ್ಥರೂ ಆದರು. ಆತನ ಪ್ರಸಾದದಿಂದ ಯೋಗೀಶ್ವರರೂ ಆಗಿ, ಅಣಿಮಾದ್ಯಷ್ಟಸಿದ್ಧಿಗಳನ್ನೂ ಪಡೆದರು. ಇದು ನಾಲ್ಕನೆಯ ಅವತಾರ.

## ಸುತಪಸನ ಅವತಾರ

ಹಿಂದೆ ನಾನು ವಿಧವಿಧ ಸೃಷ್ಟಿಗಳನ್ನು ಮಾಡಲಪೇಕ್ಷಿಸಿ ಮಹತ್ತಾದ ತಪಸ್ಸನ್ನು ಮಾಡುತ್ತಿದ್ದೆನು. ಆವಾಗ, ಸನಕಸನಂದನಾದಿಗಳು ಉತ್ಪನ್ನರಾಗುವುದಕ್ಕೆ ಮುಂಚೆ, ಸರ್ವಪೂಜ್ಯ ತಪಃ ಸ್ವಭಾವ ವುಳ್ಳ ಸುತಪಸ ನಾಮಕನಾಗಿ ವಿಷ್ಣುವೇ ಅವತರಿಸಿ, ನನಗೆ ವಿವಿಧ ಸೃಷ್ಟಿಗಳ ಮಾರ್ಗವನ್ನು ತೋರಿಸಿ, ಜ್ಞಾನೋಪದೇಶ

ಮಾಡಿದನು. ಹಿಂದಿನ ಬ್ರಹ್ಮಕಲ್ಪ ಪ್ರಳಯದಲ್ಲಿ ವಿಜ್ಞಾನವು ತಿರೋಹಿತವಾಗಿದ್ದುದರಿಂದ, ಆ ವಿಜ್ಞಾನವನ್ನೇ ನನಗೆ, ಉರುಕ್ರಮನಾದ ವಿಷ್ಣುನಾಮಕ ಸುತಪಸರೂಪಿ ಪರಮಾತ್ಮನು ಉಪದೇಶಿಸಿದನು. ನಂತರ ಚೆನ್ನಾಗಿ ಜ್ಞಾನಭಕ್ತಿಗಳಿಂದ ಕೂಡಿದ ಪೂಜೆಯನ್ನು ನಾನು ಸುತಪಸನಾಮಕ ಪರಮಾತ್ಮನಿಗೆ ಮಾಡಿದೆನು. ನಂತರ ಆ ಸುತಪಸರೂಪದಿಂದ, ಸಮಾನರೂಪ ವುಳ್ಳ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತರು ಉತ್ಪನ್ನರಾದರು. ಇವರು, ಸುತಪಸನಾಮಕ ವಿಷ್ಣುವಿನಿಂದ ನನಗೆ ಉಪದೇಶ ಮಾಡಲ್ಪಟ್ಟಿದ್ದ ವಿಜ್ಞಾನಸ್ವರೂಪವನ್ನು, ನನ್ನಿಂದ ಉಪದೇಶಹೊಂದಿ, ಅದರಂತೆ ಧ್ಯಾನಿಸಿ, ತಮ್ಮ ಹೃತ್ಸ್ಥಲಗಳಲ್ಲಿ ಪರಮಾತ್ಮನನ್ನು ಕಾಣುವವರಾದರು. ಇದು ಐದನೆಯ ಅವತಾರ.

## ನರನಾರಾಯಣನ ಅವತಾರ

ಯಮಧರ್ಮನ ಪತ್ನಿಯಾದ, ದಕ್ಷನ ಮಗಳು ಮೂರ್ತಿದೇವಿಯಲ್ಲಿ, ನಿರವಧಿಕ ಜ್ಞಾನಾನಂದ ಸ್ವರೂಪನಾದ ಶ್ರೀಮನ್ನಾರಾಯಣನೇ, ನರನಾರಾಯಣರೂಪಗಳಿಂದ ಆವಿರ್ಭವಿಸಿ, ಬದರಿಕಾಶ್ರಮದ ಸಮೀಪದಲ್ಲಿ ನರನಾರಾಯಣಾಶ್ರಮವನ್ನು ಮಾಡಿಕೊಂಡು, ಲೋಕದ ಜನರಿಗೆ ತಪಸ್ಸೇ ಸರ್ವಸುಖಗಳಿಗೂ ಕಾರಣವೆಂಬುದನ್ನು ತೋರಿಸುವುದಕ್ಕಾಗಿ, ಚೆನ್ನಾಗಿ ತನಗೆ ತಿಳಿದಿರುವ ತನ್ನ ಸ್ವರೂಪವನ್ನೇ ಧ್ಯಾನಿಸುತ್ತಾ, ಬ್ರಹ್ಮಾದಿಗಳಿಗೂ ಅಸಾಧ್ಯವಾದ ನಿಯಮಗಳುಳ್ಳ ಮಹದಾಶ್ಚರ್ಯವಾದ ತಪಸ್ಸನ್ನು ಮಾಡಿ ತೋರಿಸಿದನು. ನಾರಾಯಣ, ನರರ ತಪಸ್ಸನ್ನು ನೋಡಿ ಸಹಿಸದ ಇಂದ್ರನು, ಸ್ವರ್ಗಲೋಕದಲ್ಲಿದ್ದ ಪರಮಸುಂದರ ಅಪ್ಸರ ಸ್ತ್ರೀಯರನ್ನು ಮೋಹಗೊಳಿಸಿ ತಪೋಭಂಗ ಮಾಡಿರೆಂದು ಕಳಿಸಿದನು. ಈ ದೇವತಾಸ್ತ್ರೀಯರು ಬಂದು ನರನಾರಾಯಣರ ಮುಂದೆ ನಾಟ್ಯ, ಸಂಗೀತಾದಿಗಳಿಂದ ಶೃಂಗಾರ ಚೇಷ್ಟೆ ಮಾಡಿದರು. ತಕ್ಷಣ ನಾರಾಯಣನು ತನ್ನ ತೊಡೆಯಿಂದ, ಲಕ್ಷ್ಮೀದೇವಿಯರ ರೂಪವನ್ನು ಹೋಲುವ, ದೇವತಾಸ್ತ್ರೀಯರ ರೂಪಕ್ಕೆ ಕೋಟಿಪಾಲು ರೂಪವತಿಯರಾದ ಸ್ತ್ರೀಯರನ್ನು ಸೃಷ್ಟಿಸಿ, ಬಂದಂತಹ ದೇವತಾಸ್ತ್ರೀಯರಿಗೆ ಆದರ, ಉಪಚಾರ, ಆತಿಥ್ಯಗಳನ್ನು ಮಾಡಿ ಎಂದು ಆಜ್ಞಾಪಿಸಿದನು.

ದೇವತಾಸ್ತ್ರೀಯರು, ಉತ್ಪನ್ನರಾದ ಸ್ತ್ರೀಯರ ಅದ್ಭುತ ಸೌಂದರ್ಯ, ಸೌಜನ್ಯ, ವಿನಯ, ದಿವ್ಯಪರಿಮಳಯುಕ್ತ ದೇಹದ ಗಂಧ, ಇವುಗಳಿಂದ ಮೋಹಿತರಾಗಿ ಲಜ್ಜೆಯಿಂದ ತಮ್ಮ ಚೇಷ್ಟೆಗಳನ್ನು ನಿಲ್ಲಿಸಿ ತಲೆಬಾಗಿ ನಿಂತರು. ನಂತರ ನರನಾರಾಯಣರು ಅವರನ್ನು ನೀವು ಯಾರ ಕಡೆಯವರೆಂದು ಕೇಳಿ, ದೇವೇಂದ್ರನ ಕಡೆಯವರೆಂದು ಅವರಿಂದ ತಿಳಿದು, ನಂತರ ತನ್ನ ತೊಡೆಯಿಂದ ಊರ್ವಶಿ ಎಂಬ ಸೃಷ್ಟರಾದ ಸ್ತ್ರೀಯರ ಪೈಕಿ ಒಬ್ಬಳನ್ನು, ನಿಮ್ಮ ಇಂದ್ರನಿಗೆ ಕರೆದುಕೊಂಡು ಹೋಗಿ ಕೊಡಿ ಎಂದು ಹೇಳಿ ಅವರ ಜೊತೆಯಲ್ಲಿ ಕಳುಹಿಸಿದನು. ದೇವತಾಸ್ತ್ರೀಯರು ಕಾಮನ ತಂದೆಯಾದ ನಾರಾಯಣನನ್ನು

ಮೋಹಿಸಲಾಗದೇ ಹಿಂತಿರುಗಿದರು.

ಕಾಮವೆಂಬುದು ಯಾರಲ್ಲಿ ಕ್ರೋಧವೆಂಬ ದೋಷವು ಇರುತ್ತದೆಯೋ ಅವರನ್ನಾಶ್ರಯಿಸುತ್ತದೆ. ಈಶ್ವರನು ತನ್ನ ಕ್ರೋಧವೆಂಬ ದೃಷ್ಟಿಯಿಂದ ನೋಡಿ ಮನ್ಮಥನನ್ನು ಸುಟ್ಟನಲ್ಲದೆ, ತನ್ನ ರೋಷವನ್ನು ಸುಡಲು ಸಮರ್ಥನಾಗಲಿಲ್ಲ. ರೋಷವು ಉಳಿದದ್ದರಿಂದಲೇ ಈಶ್ವರನು ಪುನಃ ಕಾಮದಿಂದ ಮೋಹಿತನಾಗಿ ಪಾರ್ವತಿಯನ್ನು ಮಾದುವೆಯಾದನು. ಯಾವ ನರನಾರಾಯಣರ ಮನಸ್ಸಿನಲ್ಲಿ, ಈ ದೇವತಾಸ್ತ್ರೀಯರ ಮತ್ತು ಇಂದ್ರದೇವರ ಅಪಚಾರಗಳು ರೋಷದ ಸುಳುವನ್ನೇ ಉಂಟುಮಾಡದೇ, ಅವರಿಗೇ ಉಪಕಾರ ಮಾಡುವ ಉದಾರಭಾವವನ್ನುಂಟು ಮಾಡಿತೋ, ಅಂತಹ ಮಹಾಮಹಿಮನಾದ ನಾರಾಯಣನನ್ನು ಕ್ಷುದ್ರಕಾಮಾದಿಗಳು ಹೇಗೆ ತಾನೇ ಮುಟ್ಟ್ಯಾವು? ಇದು ಆರನೆಯ ಅವತಾರ. ಕಾಮವು ರಾಗ, ದ್ವೇಷ ಲಕ್ಷಣ ವುಳ್ಳ ಕ್ರೋಧದ ರೂಪಾಂತರವು.

## ಧೃವನಿಗೆ ಅನುಗ್ರಹಿಸಿದ ವಾಸುದೇವ

ತನ್ನ ಬಲತಾಯಿಯಾದ ಸುರುಚಿಯ ವಾಗ್ಬಾಣಗಳಿಂದ ನೊಂದ ಉತ್ತಾನಪಾದರಾಯನ ಮಗನಾದ ಯಾವ ಧೃವರಾಯನು, ತನ್ನ ಬಾಲ್ಯದಲ್ಲಿಯೇ ರಾಜ್ಯ, ತಂದೆತಾಯಿಗಳನ್ನೂ ತ್ಯಜಿಸಿ, ಕಾಡನ್ನು ಪ್ರವೇಶಿಸಿ, ದಾರಿಯಲ್ಲಿ ಪ್ರತ್ಯಕ್ಷರಾದ ನಾರದ ಮುನಿಗಳಿಂದ ಜ್ಞಾನೋಪದೇಶ, ವಾಸುದೇವ ಮಂತ್ರೋಪದೇಶಗಳನ್ನು ಪಡೆದು, ಯಮುನಾತೀರದ ಮಧುವನದಲ್ಲಿ, ತಪಸ್ಸು ಮಾಡಿ ಒಲಿಸಿ, ಪರಮಮಂಗಳವಿಗ್ರಹನಾದ ಶ್ರೀವಾಸುದೇವಮೂರ್ತಿಯನ್ನು ಪ್ರತ್ಯಕ್ಷ ಮಾಡಿಕೊಂಡು, ಶಾಶ್ವತ ಲೋಕವಾದ ಧೃವಪದವಿಯನ್ನು ಪಡೆದನೋ; ಯಾವ ದೇವತೆಗಳೂ, ಋಷಿಗಳೂ, ಸ್ವರ್ಗನಿವಾಸಿಗಳೂ ದೂರದಲ್ಲೇ ಇದ್ದು ಈ ವೈಕುಂಠಲೋಕಕ್ಕೆ ಸದೃಶವಾದ ಧೃವಲೋಕವನ್ನೂ, ಅಲ್ಲಿ ಧೃವನಿಂದ ಅರ್ಚಿತನಾದ ವಾಸುದೇವನನ್ನೂ ನೋಡಿ, ಸಮೀಪಸ್ಥರಾಗಿ ನೋಡಲು ಅಪೇಕ್ಷಿಸುವರೋ, ಅಂತಹ ಪರಮ ಭಾಗವತೋತ್ತಮನಾದ ಧೃವರಾಯನಿಗೆ ಪ್ರತ್ಯಕ್ಷವಾದ ವಾಸುದೇವರೂಪವು ಏಳನೆಯ ಅವತಾರ.

## ಪೃಥು ಚಕ್ರವರ್ತಿಯ ಅವತಾರ

ವೇನನೆಂಬರಾಜನು, ನಾನೇ ದೇವರು, ಎಲ್ಲರೂ ನನ್ನನ್ನೇ ಯಜ್ಞಾದಿಗಳಿಂದ ಅರ್ಚಿಸಬೇಕು ಎಂದು ಸಾರಿ ಸಜ್ಜನರನ್ನು ಹಿಂಸೆ ಮಾಡುತ್ತಿದ್ದನು. ಅವನಿಗೆ ಬುದ್ಧಿಹೇಳುವುದಕ್ಕಾಗಿ ಬಂದ ಬ್ರಾಹ್ಮಣರನ್ನು ಇವನು ಉಪೇಕ್ಷಿಸಿ ಅವರಿಗೂ ಈ ರೀತಿಯಾಗಿಯೇ ಆಜ್ಞಾಪಿಸಿದನು. ಬ್ರಾಹ್ಮಣರಿಗೆ ಲೋಕಕಂಟಕನಾದ ಈ ವೇನನು ನರಕವಾಸಕ್ಕೆ ಯೋಗ್ಯನೆಂದು ತಿಳಿದು, ತಕ್ಷಣ ಹೂಂಕಾರ ಮಾತ್ರದಿಂದ ಆ ವೇನನಿಗೆ ಮರಣ

## अथ सप्तमोऽध्यायः

ಉಂಟಾಗಲೆಂದು ಶಪಿಸಿದರು. ಆ ವಾಗ್ಬಾಣದಿಂದ ವೇನನು ಮೃತನಾಗಿ ಕೆಳಗೆ ಬಿದ್ದನು. ನಂತರ, ಇವನಿಗೆ ಮಕ್ಕಳಿರಲಿಲ್ಲವಾಗಿ, ರಾಜ್ಯಪರಿಪಾಲನೆ ಮಾಡುವುದಕ್ಕಾಗಿ, ಒಬ್ಬ ರಾಜನನ್ನು ಸೃಷ್ಟಿಸೆಂದು ದೇವರನ್ನು ಬ್ರಾಹ್ಮಣರು ಮನಸ್ಸಿನಲ್ಲಿ ಪ್ರಾರ್ಥಿಸಿ, ಸತ್ತು ಬಿದ್ದಿದ್ದ ವೇನನ ಎರಡು ತೋಳುಗಳನ್ನೂ ಹಿಡಿದುಕೊಂಡು, ಮಂತ್ರಪೂರ್ವಕವಾಗಿ, ಮಥನ ಎಂದರೆ ಒಂದಕ್ಕೊಂದನ್ನು ಉಜ್ಜಿದರು. ಆ ತೋಳುಗಳ ಸಂಘರ್ಷಣೆಯಿಂದ ಉಂಟಾದ ಅಗ್ನಿಯಲ್ಲಿ ಹೊಳೆಹೊಳೆಯುತ್ತಾ ಕಿರೀಟ, ಆಭರಣ, ಆಯುಧಗಳ ಸಮೇತನಾಗಿ, ರಾಜರೂಪದಿಂದ, ವಿಷ್ಣುವಿನಿಂದ ಆವಿಷ್ಟನಾಗಿ ಪೃಥುಚಕ್ರವರ್ತಿಯು ಹುಟ್ಟಿದನು. ಬ್ರಾಹ್ಮಣರು ಪೃಥುರಾಜನನ್ನು ರಾಜ್ಯದಲ್ಲಿ ಅಭಿಷೇಕ ಮಾಡಿದರು.

ವೇನರಾಜನ ಪರಮ ಅಧರ್ಮ, ಪಾಪಗಳಿಂದ ಭೂಮಿಯು ಬರಡಾಗಿ, ಏನೂ ಬೆಳೆಯದೆ, ಲೋಕದ ಜನರು ಹೊಟ್ಟೆಗಿಲ್ಲದೆ ಸಾಯುವಂತಾಗಿತ್ತು. ಆಗ ಪೃಥುರಾಜನು, ಜನರ ಜೀವನಕ್ಕೆ ಬೇಕಾದ ಎಲ್ಲಾ ಪದಾರ್ಥಗಳನ್ನೂ ಉತ್ಪತ್ತಿಮಾಡೆಂದು ಭೂಮಿಗೆ ಆಜ್ಞಾಪಿಸಿದನು. ಭೂದೇವಿಯು ಅದೃಶ್ಯಳಾಗಿ ಒಂದು ಗೋರೂಪ ತೆಗೆದುಕೊಂಡು ಓಡಿಹೋಗುತ್ತಿದ್ದಳು. ಆವಾಗ ಪೃಥುರಾಜನು, ಆ ಗೋವನ್ನು ತಡೆದು ಏಕೆ ಓಡಿಹೋಗುವೆ? ಎಂದು ಕೇಳಲು, ಎಲೈ! ರಾಜನೆ! ಯಜ್ಞಯಾಗಾದಿರೂಪವಾದ ಅರ್ಚನೆಯನ್ನು, ಲೋಕಸೃಷ್ಟಿಕರ್ತನಾದ ಶ್ರೀಪರಮಾತ್ಮನಿಗೆ ಮಾಡದೆ, ಪಾಪದಲ್ಲಿಯೇ ನಿರತರಾಗಿ, ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳುತ್ತಿರುವ, ಧರ್ಮಬಾಹಿರರಾದ ಕಳ್ಳರಂತಿರುವ ಜೀವರಿಗೆ, ನಾನು ಧನಧಾನ್ಯಾದಿಗಳನ್ನು ಕೊಡಲಪೇಕ್ಷಿಸುವುದಿಲ್ಲ.

ನೀನು ಈಗ ವಿಷ್ಣುವಿನ ಆವೇಶದಿಂದ ರಾಜನಾಗಿರುವುದರಿಂದ ನಿನಗೆ ಹೆದರಿ ಓಡಿಹೋಗುತ್ತೇನೆಂದು ಆ ಗೋವು ಹೇಳಲು, ಆಗ ಪೃಥುರಾಜನು ಎಲೈ ಪೃಥ್ವಿಯೇ ನಿನ್ನ ಗುಣಕ್ಕೆ ನಾನು ಮೆಚ್ಚಿದ್ದೇನೆ. ನೀನೂ ನನ್ನಿಂದ ಪಾಲಿತಳಾಗಲು ಅರ್ಹಳಾದುದರಿಂದ ನೀನು ನನಗೆ ಮಗಳು ಆಗಬೇಕು. ಲೋಕದಲ್ಲಿ ಇನ್ನೂ ದೇವತಾರಾಧನಾಪರರಾದ ಧರ್ಮಿಷ್ಠರಿರುತ್ತಾರೆ. ನಾನು ಈಗ ರಾಜನಾದುದರಿಂದ ನಿನಗೆ ವ್ಯಥೆ ಕೊಡುವ ಅಧರ್ಮವನ್ನು ನಿರ್ಮೂಲ ಮಾಡಿ, ಶುದ್ಧಧರ್ಮವನ್ನೂ, ಲೋಕಕ್ಕೆ ಕ್ಷೇಮವನ್ನೂ ಉಂಟುಮಾಡುತ್ತೇನೆ. ಆದುದರಿಂದ ಸರ್ವ ಪದಾರ್ಥಗಳನ್ನೂ ಕೊಡೆಂದು ಹೇಳಿದನು. ಆವಾಗ ಭೂದೇವಿಯು ಎಲೈ ರಾಜನೇ! ನಾನು ಈಗ ಗೋರೂಪದಿಂದ್ದೇನೆ. ನಿನಗೆ ಏನೇನು ಬೇಕೋ ಎಲ್ಲವನ್ನೂ ನನ್ನ ಸ್ತನಗಳಿಂದ ಹಾಲಿನಂತೆ ಕರೆದು ನಿನಗೆಷ್ಟುಬೇಕೋ ಅಷ್ಟೂ ಕೊಡುತ್ತೇನೆ, ನನಗೆ ಬೇರೆ ಬೇರೆ ಕರುಗಳನ್ನು ನೀನು ಉಣಲಿಕ್ಕೆ ಬಿಟ್ಟು, ನನ್ನ ಸ್ತನಗಳಿಂದ ಸರ್ವವಸ್ತುಗಳನ್ನೂ ಪಡೆದುಕೋ ಎನ್ನಲು, ಹಾಗೆಯೇ ದೇವತೆಗಳು, ಋಷಿಗಳು, ಗಂಧರ್ವರು, ದೈತ್ಯರು, ಮನುಷ್ಯರು, ಪ್ರಾಣಿಗಳು ಇವರುಗಳ

ಪೈಕಿ ಶ್ರೇಷ್ಠರಾದವರೊಬ್ಬರನ್ನು ಕರುವನ್ನಾಗಿ ಮಾಡಿಕೊಂಡು, ಸಮಸ್ತವಸ್ತುಗಳನ್ನೂ ಲೋಕಕ್ಕೆ ಸಂಪಾದಿಸಿ ಕೊಟ್ಟನು. ಇಂತಹ ಪೃಥುಚಕ್ರವರ್ತಿಯ ಅವತಾರವು ವಿಷ್ಣುವಿನ ಎಂಟನೆಯ ಆವಿಷ್ಟರೂಪವು.

## ಋಷಭಾವತಾರ

ನಾಭಿರಾಜನಿಂದ ಮೇರುದೇವಿಯಲ್ಲಿ, ಸುದೇವಿ ಎಂದೂ ಕರೆಯಲ್ಪಡುವ ನಾಭಿರಾಜನ ಪತ್ನಿಯಲ್ಲಿ, ಒಂಭತ್ತನೆಯದಾದ ಋಷಭಾವತಾರವನ್ನು ಮಾಡಿ, ಮಹತಪಸ್ಸಿನಿಂದ ಪರಮಹಂಸವೆಂಬ ಯತ್ಯಾಶ್ರಮವನ್ನು ಸ್ವೀಕರಿಸಿ, ಅನ್ಯರಿಂದ ಆಚರಿಸಲು ಅಶಕ್ಯವಾಗುವಂತೆ ಪರಮಹಂಸಧರ್ಮಗಳಾದ, ಸಮದೃಷ್ಟಿ, ಪರಿಶುದ್ಧತೆ, ನಿರ್ಮಲಾಚಾರ, ನಿರಪೇಕ್ಷತ್ವ, ಜ್ಞಾನಪ್ರಚಾರಾದಿಕಾರ್ಯಗಳನ್ನು ತೋರಿಸಿದನು. .

## ಹಯಗ್ರೀವಾವತಾರ

ಹಿಂದೆ ನಾನು ಸತ್ರಯಾಗ ಮಾಡುತ್ತಿದ್ದಾಗ ಆ ಯಜ್ಞಕುಂಡದಿಂದ ಹಯಮುಖ ವುಳ್ಳವನಾಗಿ, ಬಂಗಾರವರ್ಣನೂ, ಸಕಲವೇದ ಛಂದಸ್ಸುಗಳಿಂದ ಪ್ರತಿಪಾದ್ಯನೂ, ಯಜ್ಞಸ್ವರೂಪನೂ, ಸಮಸ್ತದೇವತಾಸ್ವರೂಪನೂ, ತನ್ನ ಉಚ್ಛ್ವಾಸ ನಿಶ್ವಾಸರೂಪ ಉಸಿರುಬಿಡುವ ವ್ಯಾಜದಿಂದ ನಿರಂತರ ಸಕಲ ವೇದಮಂತ್ರೋಚ್ಚಾರಣೆಗಳನ್ನೂ ಸುಸ್ವರದಿಂದ ಮಾಡುವವನೂ ಆಗಿ, ಮೂಲರೂಪ ನಾರಾಯಣನೇ, ಈ ಹಯಗ್ರೀವರೂಪದಿಂದ ಆವಿರ್ಭವಿಸಿ, ಸಕಲವೇದಗಳನ್ನೂ ನನಗೆ ಉಪದೇಶಿಸಿದನು. ಇದು ಹತ್ತನೆಯ ಅವತಾರ.

## ಮತ್ಸ್ಯಾವತಾರ

ನಾನು ನನ್ನ ನಾಲ್ಕು ಮುಖಗಳಿಂದಲೂ ವೇದಮಂತ್ರಗಳನ್ನು ಘಟ್ಟಿಯಾಗಿ ಉಚ್ಚರಿಸುತ್ತಿದ್ದಾಗ, ಹಯಗ್ರೀವನೆಂಬ ದೈತ್ಯನು ಆ ವೇದಮಾರ್ಗಗಳನ್ನು ಕೇಳಿ ಮನಸ್ಸಿನಲ್ಲಿ ಧಾರಣೆ ಮಾಡಿದನು. ಆವಾಗ ನನಗೆ ವೇದಗಳಲ್ಲಿ ವಿಸ್ಮೃತಿಯುಂಟಾಗುತ್ತಿರಲಾಗಿ ಶ್ರೀಮನ್ನಾರಾಯಣನು ಮತ್ಸ್ಯಾವತಾರವೆಂಬ ಹನ್ನೊಂದನೆಯ ಅವತಾರಮಾಡಿ, ಆ ಹಯಗ್ರೀವಾಸುರನನ್ನು ಕೊಂದು, ಪುನಃ ನನಗೆ ವೇದಗಳನ್ನುಪದೇಶಿಸಿದನು. ಈ ಮತ್ಸ್ಯಾವತಾರನೇ ಪುನಃ ವೈವಸ್ವತ ಮನ್ವಂತರ ಪ್ರಳಯದಲ್ಲಿ ದೊಡ್ಡ ಮೀನಿನರೂಪವನ್ನು ತಾಳಿ, ಕ್ಷೋಣಿಮಯನೆಂದರೆ, ಸರ್ವಜೀವರಿಗೆ ಆಶ್ರಯವಾದ ಸಕಲ ಭೂಮಿಗೂ ಆಶ್ರಯನಾದವನಾಗಿ, ಒಂದು ಹಡಗಿನ ರೂಪದಿಂದ ಪ್ರಳಯೋದಕದಲ್ಲಿ ಮನುವಿಗೆ ಪ್ರತ್ಯಕ್ಷನಾಗಿ,

ಮುಂದಿನ ಕಲ್ಪಕ್ಕೆ ಧಾನ್ಯಗಳನ್ನು ಆ ಹಡಗಿನಲ್ಲಿ ತುಂಬಿಸಿ, ಮನುವನ್ನೂ ಸಪ್ತಋಷಿಗಳನ್ನೂ ಆ ಪ್ರಳಯೋದಕದಲ್ಲಿ ಮತ್ಸ್ಯರೂಪದಿಂದ ಧರಿಸಿ ಕಾಪಾಡಿದನು ಮತ್ತು ಸಪ್ತಋಷಿಗಳಿಗೂ ಮನುವಿಗೂ ವೇದ ಮಾರ್ಗಗಳನ್ನುಪದೇಶಿಸಿದನು.

## ಕೂರ್ಮಾವತಾರ

ದೇವದೈತ್ಯರು ಅಮೃತಪ್ರಾಪ್ತಿಗಾಗಿ ಕ್ಷೀರಸಮುದ್ರವನ್ನು ಕಡೆಯುವುದಕ್ಕಾಗಿ, ಮಂದರಪರ್ವತವನ್ನಿಟ್ಟು ವಾಸುಕಿಯಿಂದ ಕಟ್ಟಿ, ಕಡೆಯಲುಪಕ್ರಮಿಸಿದಾಗ, ಮಂದರ ಪರ್ವತವು ಮುಳುಗುತ್ತಿರಲಾಗಿ, ದೇವದೈತ್ಯರಿಂದ ಪ್ರಾರ್ಥಿತನಾದ ನಾರಾಯಣನು ಕೂರ್ಮರೂಪವನ್ನು ಧರಿಸಿ, ಕ್ಷೀರಸಮುದ್ರವನ್ನು ಹೊಕ್ಕು, ತನ್ನ ಬೆನ್ನಿಂದ ಮುಳುಗುತ್ತಿದ್ದ ಮಂದರ ಪರ್ವತವನ್ನು ಮೇಲಕ್ಕೆತ್ತಿ ಹಿಡಿದುಕೊಂಡನು. ಯಾವ ಅದ್ಭುತವಾದ, ಭಾರವಾದ ಮಂದರಪರ್ವತವನ್ನು ರಭಸದಿಂದ ದೇವದೈತ್ಯರು ಕಡೆಯುತ್ತಿದ್ದರೆ, ಅಚಿಂತ್ಯಪರಾಕ್ರಮಿಯಾದ ಈ ಕೂರ್ಮನ ಬೆನ್ನಿಗೆ, ನವೆಯಾದಾಗ ಮೆತ್ತಗೆ ಕೆರೆದರೆ ಹಿತವಾಗುವಂತೆ ಆಗುತ್ತಿತ್ತೋ ಆದರಿಂದ ನಿದ್ರೆ ಬರುವಂತೆ ಅರೆಗಣ್ಣು ಮುಚ್ಚಿಕೊಂಡಿದ್ದ, ಅಂತಹ ಕೂರ್ಮಾವತಾರವು ಹನ್ನೆರಡನೆಯದು.

## ಪ್ರಹ್ಲಾದವರದ ನರಸಿಂಹಾವತಾರ

ದೇವತೆಗಳಿಗೆ ಯಾವ ಹಿರಣ್ಯಕಶಿಪುವೆಂಬ ಮಹಾದೈತ್ಯನಿಂದುಂಟಾದ ಭಯ ಪರಿಹಾರ ಮಾಡುವುದಕ್ಕಾಗಿಯೂ, ಭಕ್ತನಾದ ಪ್ರಹ್ಲಾದನನ್ನು ಸಂರಕ್ಷಿಸುವುದಕ್ಕಾಗಿಯೂ, ದೇದೀಪ್ಯಮಾನನಾಗಿ, ಘರ್ಜಿಸುತ್ತಲೂ, ಹಾರುತ್ತಲೂ ನೃಸಿಂಹರೂಪದಿಂದ ಬಂದು ಗದೆಯಿಂದಪ್ಪಳಿಸಲು ಬಂದ ಹಿರಣ್ಯಕಶಿಪುವನ್ನು ಕುತ್ತಿಗೆಯಿಂದ ಹಿಡಿದು, ತೊಡೆಯಲ್ಲಿ ಕೆಡಹಿ, ಉಗುರುಗಳಿಂದ ಅವನನ್ನು ಶೀಳಿ ಸಂಹಾರ ಮಾಡಿ, ಲೋಕಕ್ಕೆ ಅಭಯದಾನ ಮಾಡಿದನು. ಇದು ಹದಿಮೂರನೆಯ ಅವತಾರ.

## ಗಜೇಂದ್ರವರದ ಶ್ರೀಹರಿಯ ಅವತಾರ

ಗಜೇಂದ್ರನು ಸರೋವರದಲ್ಲಿ ಪ್ರಬಲವಾದ ಮೊಸಳೆಯಿಂದ ಕಾಲು ಹಿಡಿದು ಎಳೆಯಲ್ಪಡುತ್ತಿರಲಾಗಿ, ಭಯಾರ್ತನಾದ ಗಜರಾಜನು ಸೊಂಡಿಲಿನಿಂದ ಒಂದು ಕಮಲಪುಷ್ಪವನ್ನು ಮೇಲಕ್ಕೆತ್ತಿ ಹಿಡಿದು, ಎಲೈ! ಆದಿಪುರುಷನೇ! ನಾಮಶ್ರವಣ ಮಾತ್ರದಿಂದ ಲೋಕವನ್ನುದ್ಧಾರ ಮಾಡತಕ್ಕವನೆಂಬ ಪರಮ ಮಂಗಳಚರಿತ್ರನೇ! ಪ್ರಣತ ಭಕ್ತಾರ್ತಿನಾಶಕನಾದ ಶ್ರೀಮನ್ನಾರಾಯಣನೇ

ನನ್ನನ್ನು ಅಪಮೃತ್ಯುವಿನಿಂದ ಉದ್ಧಾರಮಾಡು! ಎಂದು ಕೂಗಿದಾಗ, ತಕ್ಷಣವೇ ಚಕ್ರಧಾರಿಯಾಗಿ ಗರುಡನ ಮೇಲೆ ಕುಳಿತು ವೇಗದಿಂದ ಬಂದು, ಮೊಸಳೆಯನ್ನು ಚಕ್ರದಿಂದ ಸೀಳಿ ಗಜರಾಜನ ಭಯ ಪರಿಹಾರ ಮಾಡಿದನು. ಗಜರಾಜನ ಸ್ತೋತ್ರರೂಪ ತಪಸ್ಸಿಗೆ ಮೆಚ್ಚಿ ಪ್ರಸನ್ನನಾದುದರಿಂದ, ಇದು ಪರಮಾತ್ಮನ ತಾಪಸನೆಂಬ ಹದಿನಾಲ್ಕನೆಯ ಅವತಾರವು.

## ವಾಮನ ತ್ರಿವಿಕ್ರಮ ಅವತಾರಗಳು

ಗುಣದಿಂದ ಸರ್ವಶ್ರೇಷ್ಠನಾದಾಗ್ಯೂ ಇಂದ್ರದೇವರಿಗೆ ತಮ್ಮನಾಗಿ ಅದಿತಿದೇವಿಯಲ್ಲಿ ಸಾಕ್ಷಾತ್ಪರಮಾತ್ಮನು, ದೈತ್ಯರ ಮದಪರಿಹಾರಕನೂ, ಬಹಳ ಸುಂದರರೂಪನೂ ಆದಕಾರಣ ವಾಮನನೆಂಬ ವಟುರೂಪದಿಂದ ಆವಿರ್ಭವಿಸಿ, ಬಲಿಚಕ್ರವರ್ತಿಯ ಯಜ್ಞಶಾಲೆಗೆ ಹೋಗಿ ಮೂರು ಹೆಜ್ಜೆ ಭೂಮಿಯ ದಾನವನ್ನು ಬೇಡಿ,ನಂತರ ತ್ರಿವಿಕ್ರಮರೂಪವನ್ನು ತಾಳಿ ಭೂಲೋಕ, ಭುವರ್ಲೋಕ, ಸ್ವರ್ಗಲೋಕಗಳನ್ನೂ ಎರಡೇಪಾದದಿಂದ ಆಕ್ರಮಿಸಿ ಪಾದಾಂಗುಷ್ಠದಿಂದ ಬ್ರಹ್ಮಾಂಡ ಕಟಾಹವನ್ನು ಭೇದಿಸಿ ದೇವಗಂಗೆಯನ್ನು ಸತ್ಯಲೋಕ ಆರಂಭಿಸಿ ಭೂಲೋಕ ಪರ್ಯಂತ ಬರುವಂತೆ ಮಾಡಿ, ಮೂರನೆಯ ಪಾದವನ್ನು ಕೊಡಲು ಬೇರೆ ಭೂಮಿ ಇಲ್ಲದೇ, ಈ ದೇಹವೂ ಕ್ಷೇತ್ರವೆಂದು ಕರೆಸುವುದರಿಂದ, ಪರಮಭಕ್ತಿಯಿಂದ ಬಲಿಚಕ್ರವರ್ತಿಯು ತನ್ನ ತಲೆಯನ್ನೇ ಕೊಡಲಾಗಿ ಮೂರನೆಯ ಪಾದವಿಟ್ಟು, ಮೂರು ಪಾದ ಭೂಮಿಯನ್ನು ಬಲಿಚಕ್ರವರ್ತಿಯು ಕೊಟ್ಟನೆಂಬ ಕೀರ್ತಿಯನ್ನು ನನಗೆ ಕೊಡು ಸ್ವಾಮಿ! ಎಂದು ಪ್ರಾರ್ಥಿಸಲು, ಬಲಿಯ ತಲೆಯನ್ನು ಮೆಟ್ಟಿ, ಅವನನ್ನು ಸುತಳಲೋಕಕ್ಕೆ ಒತ್ತಿ, ಅಲ್ಲಿ ಪರಮೈಶ್ವರ್ಯವನ್ನು ಬಲಿಚಕ್ರವರ್ತಿಗೆ ಕೊಟ್ಟು, ಭಕ್ತಿಗೆ ಪರವಶನಾಗಿ ಅವನರಮನೆಯ ಬಾಗಿಲನ್ನು ಕಾಯುತ್ತಾ ಅದ್ಯಾಪಿ ಇರುತ್ತಾನೆ. ಭಗವದರ್ಪಣಬುದ್ಧಿಯಿಂದಲೂ, ಭಕ್ತಿಯಿಂದಲೂ, ನಿರಪೇಕ್ಷೆಯಿಂದಲೂ, ತನ್ನ ಸರ್ವೈಶ್ವರ್ಯ, ದೇಹವನ್ನೂ ಬಲಿಚಕ್ರವರ್ತಿಯು ಸಮರ್ಪಿಸಿದ್ದರಿಂದ, ಶ್ರೀವಾಮನರೂಪ ಪರಮಾತ್ಮನು ಬಲಿಚಕ್ರವರ್ತಿಗೆ, ಮುಂದಿನ ಮನ್ವಂತರದಲ್ಲಿ ಇಂದ್ರಪದವಿಯನ್ನೂ ಕೊಡುತ್ತಾನೆ. ನಂತರ ಮೋಕ್ಷವೂ ಕೊಡಲ್ಪಡುತ್ತದೆ. ಈ ವಾಮನಾವತಾರವು ಹದಿನೈದನೆಯ ಅವತಾರ.

## ಮಹಿದಾಸಾವತಾರ

ನಾರದನೇ, ರಮಾಬ್ರಹ್ಮಾದಿಗಳಿಗೂ ಜ್ಞಾನೋಪದೇಶವನ್ನು ಮಾಡುವುದರ ಮೂಲಕ ಜ್ಞಾನಯೋಗ ಕರ್ಮಯೋಗರೂಪ ಭಗವತ್ತತ್ವಗಳನ್ನೂ ಲೋಕಕ್ಕೆ ತಿಳಿಸುವುದಕ್ಕಾಗಿ ಸಾಕ್ಷಾತ್ಪರಮಾತ್ಮನು

ಮಹಿದಾಸಾವತಾರವನ್ನು ಮಾಡಿ ನನಗೆ ಐತರೆಯೋಪನಿಷತ್ತೆಂಬ ತನ್ನ ಸ್ವರೂಪಜ್ಞಾನವನ್ನು ಉಪದೇಶಿಸಿದನು. ಇದು ಹದಿನಾರನೆಯ ಅವತಾರ. ಉಕ್ಕುತ್ತಿರುವ ಭಕ್ತಿಗಳುಳ್ಳ ಪರಮಾತ್ಮನ ಭಕ್ತರು ಈ ಐತರೇಯ ಉಪದೇಶದ ರಹಸ್ಯಗಳನ್ನು ತಿಳಿಯಬಲ್ಲರೇ ಹೊರತು, ಭಗದ್ವಿಮುಖರಾದ ದೀನರಿಗೆ ಈ ಬ್ರಹ್ಮಜ್ಞಾನವು ತಿಳಿಯುವುದಿಲ್ಲ.

## ರಾಜರಾಜೇಶ್ವರಾವತಾರ

ನಂತರ ಹದಿನೇಳನೆಯದಾಗಿ ರಾಜರಾಜೇಶ್ವರನೆಂಬ ಹೆಸರಿನಿಂದ ಪರಮಾತ್ಮನು ಅವತರಿಸಿ, ಸ್ವಾಯಂಭುವ ಮನುವಿನ ವಂಶವನ್ನು ಕಾಪಾಡತಕ್ಕವನಾಗಿ, ದುಷ್ಟರೂ ಉನ್ಮತ್ತರೂ ಆದ ರಾಜರನ್ನು ನಿಗ್ರಹಿಸಿ ಅವರನ್ನು ಇಂದ್ರಿಯನಿಗ್ರಹಾದಿಗಳುಳ್ಳವರನ್ನಾಗಿಯೂ, ಶಿಷ್ಟರನ್ನಾಗಿಯೂ ಮಾಡಿ, ಸತ್ಯ, ಧರ್ಮಗಳನ್ನು ಸ್ಥಾಪಿಸಿ, ತನ್ನ ಮಹೋನ್ನತ ಸತ್ಸ್ವಭಾವದಿಂದ ಎಲ್ಲೆಲ್ಲೂ ಅತಿಶಯ ಕೀರ್ತಿಯನ್ನು ಪಡೆದು, ಆ ಮನ್ವಂತರದ ಕೊನೆಯವರಿವಿಗೂ, ಪ್ರಿಯವ್ರತಾದಿ ಚಕ್ರವರ್ತಿಗಳಲ್ಲಿ ಆವಿಷ್ಟನಾಗಿದ್ದು, ಅವರಿಗೆ ದಶದಿಕ್ಕುಗಳಲ್ಲೂ ಜಯವನ್ನು ಕೊಟ್ಟು, ಲೋಕಕ್ಷೇಮವನ್ನುಂಟು ಮಾಡಿದನು.

## ಧನ್ವಂತರೀ ಅವತಾರ

ಹದಿನೆಂಟನೆಯದಾಗಿ ಪರಮಾತ್ಮನು ಧನ್ವಂತರೀ ಅವತಾರಮಾಡಿ, ಹಠಯೋಗವನ್ನೂ, ವೈದ್ಯಶಾಸ್ತ್ರವನ್ನೂ ಪ್ರಕಟಿಸಿ, ತಾನು ನಿತ್ಯ ಅಮೃತಮಯ ಶರೀರನಾಗಿ, ಅಮೃತ ಕಲಶವನ್ನು ಕೈಲಿ ಹಿಡಿದುಕೊಂಡು ತನ್ನನ್ನು ಸ್ಮರಿಸಿ ನಾಮೋಚ್ಚಾರಣೆ ಮಾಡುವ ಮಾತ್ರಕ್ಕೇ ಭಕ್ತರ ಸಕಲ ಮಹಾವ್ಯಾಧಿಗಳನ್ನು ಪರಿಹರಿಸಿ, ದೇಹಾರೋಗ್ಯ, ಜ್ಞಾನಭಕ್ತಿಗಳಿತ್ತು ಅಮೃತವೆಂಬ ಮೋಕ್ಷವನ್ನೂ ಕೊಡುವವನಾಗಿರುತ್ತಾನೆ. ಜನರು ಮಾಡುವ ಯಜ್ಞಗಳಲ್ಲಿ ಹವಿಸ್ಸಿನ ಭಾಗವನ್ನೂ ಅವರ ಉದ್ಧಾರಾರ್ಥವಾಗಿ ಸ್ವೀಕರಿಸುತ್ತಾನೆ.

## ಪರಶುರಾಮಾವತಾರ

ರಾಜರುಗಳು ಲೋಕಕಂಟಕರಾಗಿಯೂ, ಬ್ರಾಹ್ಮಣದ್ರೋಹಿಗಳಾಗಿಯೂ, ಪಾಪಾಚರಣೆ ವುಳ್ಳವರಾಗಿಯೂ, ಇದ್ದು ನಾನಾ ನರಕಯಾತನೆಗಳನ್ನನುಭವಿಸಲು ಜಾಗ್ರತೆಯಾಗಿ ಸಿದ್ಧರಾಗುತ್ತಿರುವಂತೆ ತೋರಿಬರುತ್ತಿದ್ದಾಗ, ಪರಮಾತ್ಮನು ಋಷಿಕುಲದಲ್ಲಿ ಜಮದಗ್ನಿ ಋಷಿಗಳ ಮಗನಾಗಿ ಅಗ್ನಿಯಂತೆ ಪ್ರಜ್ವಲಿಸುತ್ತಾ, ಈ ಬ್ರಹ್ಮಾಂಡವನ್ನು ಒಂದೇ ಏಟಿನಿಂದ ಎರಡು ಹೋಳು ಮಾಡುತ್ತೋ ಎಂಬಂತೆ ತೋರುವ ಮಹಾಹರಿತವಾದ ಕೊಡಲಿ ಎಂಬ ಆಯುಧವನ್ನು ಧರಿಸಿ ಅವತರಿಸಿ, ಪಾಪಿಸದೃಶರಾಗಿ

ಭೂಭಾರಕರಾಗಿದ್ದ ದುಷ್ಟ ಕ್ಷತ್ರಿಯ ರಾಜರನ್ನು ನಿರ್ಮೂಲಮಾಡುವುದಕ್ಕಾಗಿ, ಇಪ್ಪತ್ತೊಂದು ಸಲ ಭೂಮಂಡಲವನ್ನೆಲ್ಲಾ ಸುತ್ತಿ, ರಾಜರುಗಳನ್ನು ಕೊಡಲಿಯಿಂದ ಕತ್ತರಿಸಿ, ಲೋಕದಲ್ಲಿ ಜನರ ಕಷ್ಟವನ್ನು ಪರಿಹರಿಸಿ, ಭೂಲೋಕವನ್ನೇ ಬ್ರಾಹ್ಮಣರಿಗೆ ದಾನರೂಪದಿಂದ ಹಂಚಿಕೊಟ್ಟನು. ಇದು ಹತ್ತೊಂಭತ್ತನೆಯ ಅವತಾರ.

## ರಾಮಾವತಾರ

ಯಾರ ಉದಾರ ಕೃಪಾಕಟಾಕ್ಷ ವೀಕ್ಷಣದಿಂದ ಶ್ರೀಹನುಮಂತದೇವರು ಪ್ರಬಲನಾದ ರಾವಣನನ್ನು ನಿರ್ಲಕ್ಷ್ಯದಿಂದ ಜೀವನ್ಮೃತಪ್ರಾಯನನ್ನಾಗಿ ಮಾಡಿದರೋ ಮತ್ತು ಅತ್ಯುನ್ನತ ಶ್ರದ್ಧಾ, ಭಕ್ತಿ, ಶಕ್ತಿ, ದೇಹಬಲಗಳನ್ನು ಪಡೆದಿರುವರೋ ಅಂತಹ ಪರಮಸುಂದರ ಮಂಗಳವಿಗ್ರಹನಾದ ಶ್ರೀರಾಮಚಂದ್ರನು, ಶ್ರೀಪರಮಾತ್ಮನ ಸಾಕ್ಷಾತ್ ಅವತಾರನು. ಶ್ರೀರಾಮನು ದಶರಥರಾಜನ ಸುತನಾಗವತರಿಸಿ, ತಂದೆಯ ಆಜ್ಞೆಯನ್ನು ಪಾಲಿಸುವುದಕ್ಕಾಗಿ, ಸೀತಾಲಕ್ಷ್ಮಣರೊಡನೆ ಅರಣ್ಯಪ್ರವೇಶಮಾಡಿ ಸೀತಾದೇವಿಯು ತನ್ನಿಂದ ಅಪಹರಿಸಲ್ಪಟ್ಟಾಗ, ಹೆಂಗಸಿನ ಕಳ್ಳ, ಪರರ ಹೆಂಡತಿಯ ಕಳ್ಳ ರಾವಣನನ್ನು ಸಂಹರಿಸಿಲಿಚ್ಛಿಸಿ, ಸಮುದ್ರತೀರಕ್ಕೆ ಕಪಿಸೈನ್ಯ ಸಮೇತ ಬಂದು, ದಾರಿಗೆ ಅಡ್ಡಲಾಗಿರುವ ಸಮುದ್ರವನ್ನು ಸ್ವಲ್ಪ ರೋಷದಿಂದ ನೋಡಿದ ಮಾತ್ರಕ್ಕೇ ಸಮುದ್ರದ ನೀರು ಕುದಿದು ಜಲಚರ ಪ್ರಾಣಿಗಳೆಲ್ಲಾ ಬೆಂದುಹೋಗುತ್ತಿರಲಾಗಿ, ತಕ್ಷಣ ಸಮುದ್ರರಾಜನಾದ ವರುಣನು, ಪ್ರತ್ಯಕ್ಷನಾಗಿ ಶ್ರೀರಾಮನಿಗೆ ನಮಸ್ಕರಿಸಿ, ಸೇತುಬಂಧನಕ್ಕೆ ದಾರಿಕೊಟ್ಟನೋ ಅಂತಹ ಪ್ರತಾಪವುಳ್ಳ ರಾಮನ ಧನುಷ್ಟಂಕಾರ ಮಾತ್ರದಿಂದುಂಟಾದ ಧ್ವನಿ ಕೇಳಿ ಯಾವ ಐರಾವತದ ದಂತದ ಘಾಯದಿಂದ ಕೆಂಪಾದ ಎದೆ, ಭುಜಗಳುಳ್ಳ ರಾವಣನು ಸಸೈನ್ಯಬಾಂಧವರಿಂದ ಸಹಿತನಾಗಿ ಹೆದರಿ ಮೃತಪ್ರಾಯನಾದನೋ ಮತ್ತು ರಾಮನ ಒಂದೇ ಬಾಣದಿಂದ ಸಂಹೃತನಾದನೋ, ಪರಿವಾರವೆಲ್ಲವೂ ಒಟ್ಟಿಗೆ ಸಂಹೃತವಾಯಿತೋ ಅಂತಹ ದುಷ್ಟಶಿಕ್ಷಾ, ಶಿಷ್ಟರಕ್ಷಣಾ ಧುರೀಣ, ಅದ್ಭುತ ಪರಾಕ್ರಮಿ, ಅಸದೃಶ ಕರುಣೆಯಾದ ಶ್ರೀರಾಮಾವತಾರವು ಇಪ್ಪತ್ತನೆಯದು.

## ಶ್ರೀಕೃಷ್ಣಾವತಾರ

ದೇವತೆಗಳಿಗೆ ಶತೃಗಳಾದ ಬಹಳ ದೈತ್ಯರು ಭೂಲೋಕದಲ್ಲಿ ಹುಟ್ಟಿ, ಭೂಲೋಕದ ಪ್ರಜೆಗಳನ್ನು ನಾನಾ ವಿಧ ಹಿಂಸೆಗಳಿಂದ ಬಹಳ ಆರ್ತರನ್ನಾಗಿಯೂ, ಸಂಕಟಪಟ್ಟವರನ್ನಾಗಿಯೂ ಮಾಡುತ್ತಿರಲಾಗಿ, ಪ್ರಾಣಿಗಳಲ್ಲಿ ನಿರ್ವ್ಯಾಜ ದಯಾಪರ ಮೂರ್ತಿಯಾದ ಶ್ರೀಮನ್ನಾರಾಯಣನು ಕೃಷ್ಣಕೇಶವೆಂಬ ರೂಪದಿಂದ ಶ್ರೀಕೃಷ್ಣನಾಗಿಯೂ, ಶುಕ್ಲಕೇಶವೆಂಬ ಆವೇಶದಿಂದ ಶೇಷನಲ್ಲಿ ಪ್ರವೇಶಿಸಿ

ಬಲರಾಮಾವತಾರವನ್ನೂ ಮಾಡಿದನು. ಈ ಅವತಾರದಲ್ಲಿ ಇತರರಿಂದ ಎಲ್ಲೂ ಮಾಡಲಾಗದ ಅನೇಕ ಕಾರ್ಯಗಳನ್ನು ಮಾಡಿ ಶ್ರೀಕೃಷ್ಣನು ಅನಂತಗಳಾದ ತನ್ನ ಮಹಿಮೆಗಳನ್ನು ಲೋಕದಲ್ಲಿ ಪ್ರಕಟಿಸಿದನು.

ಹೊಲೆಮನೆ ಮಗುವಾಗಿದ್ದಾಗಲೇ ಮಗುವಿನ ಪ್ರಾಣ ತೆಗೆಯುವ ಉದ್ದೇಶ್ಯದಿಂದ ಬಂದ ಕಾರಣ ಉಲೂಪಿಕಾ ಎಂದು ಕರೆಯಲ್ಪಡುವ ಪೂತನಿ ಎಂಬ ಘೋರ ರಾಕ್ಷಸಿಯ ಸ್ತನ್ಯಪಾನಮಾಡಿ, ಜೊತೆಗೆ ಅವಳ ಪ್ರಾಣವನ್ನು ಹೀರಿ ಸಂಹರಿಸಿದನು. ಮೂರು ತಿಂಗಳ ಮಗುವಾದ ಶ್ರೀಕೃಷ್ಣನನ್ನು ಸಂಹರಿಸಲು ಬಂದ ಶಕಟಾಸುರನನ್ನೂ ತನ್ನ ಪುಟ್ಟಪಾದದಿಂದ ಒದೆದು, ಆ ಕೋಮಲ ಪಾದಸ್ಪರ್ಶದಿಂದ ಶಕಟಾಸುರನ ದೇಹವನ್ನು ಪುಡಿಪುಡಿ ಮಾಡಿದನು.

ತುಂಟನೆಂದು ಅಂಬೆಗಾಲಿಡುತ್ತಿದ್ದ ಶ್ರೀಕೃಷ್ಣನನ್ನು ಗೋಪಿಯು ಒರಳಿಗೆ ಹಗ್ಗದಿಂದ ಕಟ್ಟಿಹಾಕಿ ಅವಳು ಬೇರೆ ಕಡೆಗೆ ಹೋದನಂತರ, ಆ ಒರಳನ್ನೂ ಎಳೆದುಕೊಂಡು ಅಂಗಳಕ್ಕೆ ಹೋಗಿ, ಅಲ್ಲಿ ಹತ್ತು ಅಂಬುಗಳ ಎಂದರೆ ಬಾಣಪ್ರಯೋಗಗಳಷ್ಟು ಎತ್ತರವಾದ ಗಗನಚುಂಬಿತವಾಗಿ ಬೆಳೆದಿದ್ದ ಎರಡು ಅರ್ಜುನವೃಕ್ಷಗಳ ಸಂದಿಯಲ್ಲಿ ತೂರಿಕೊಂಡು ಹೋಗಿ, ಎಳೆದುಕೊಂಡು ಹೋಗುತ್ತಿದ್ದ ಒರಳನ್ನು ಕಾಂಡಕ್ಕೆ ಸೋಕಿಸುವ ಮಾತ್ರದಿಂದ ಕೋಟಿಸಿಡಿಲಿನಂತೆ ಶಬ್ದಮಾಡುತ್ತಾ ಬೀಳುವಂತೆ ಆ ಗಿಡಗಳನ್ನು ಮಾಡಿ, ಅದರಲ್ಲಿ ಶಾಪಗ್ರಸ್ತರಾಗಿ ಯಮಳಾರ್ಜುನವೃಕ್ಷಗಳಾಗಿ ಹುಟ್ಟಿದ್ದ ನಳಕೂಬರ ಮಣಿಗ್ರೀವರೆಂಬ ಇಬ್ಬರು ಗಂಧರ್ವರಿಗೆ ಶಾಪವಿಮೋಚನೆ ಮಾಡಿದನು.

ಯಮುನಾ ನದಿಯಲ್ಲಿರುವ ಕಾಳಿಂದೀ ಮಡುವಿನ ವಿಷಮಿಶ್ರಿತವಾದ ನೀರನ್ನು ಗೋವುಗಳೂ, ಗೋಪಾಲಕರೂ ಕುಡಿದು ಗತಪ್ರಾಣರಾಗಿ ಬಿದ್ದಿರಲು, ಅವರನ್ನು ಶ್ರೀಕೃಷ್ಣನು ಕೃಪಾದೃಷ್ಟಿಯಿಂದ ನೋಡಿದ ಮಾತ್ರದಿಂದಲೇ ಬದುಕಿಸಿ ಎಬ್ಬಿಸಿದನು. ಕಾಳಿಂದೀ ಮಡುವಿನ ಜಲದ ವಿಷವನ್ನು ನಾಶಮಾಡಿ, ಶುದ್ಧ ಜಲವನ್ನಾಗಿ ಮಾಡುವುದಕ್ಕಾಗಿ, ಕಾಳಿಂದೀ ಮಡುವಿಗೆ ಧುಮುಕಿ ರೋಷದಿಂದ ಬಂದ ಕಾಳಿಂಗನೆಂಬ ಸರ್ಪದ ಹೆಡೆಯ ಮೇಲೆ ಹಾರಿ ನಿಂತು ನರ್ತನಮಾಡಿ, ಆ ಸರ್ಪವನ್ನು ನಿರ್ವೀರ್ಯವನ್ನಾಗಿ ಮಾಡಿ, ಬಳಗ ಸಹಿತ ಆ ಸರ್ಪವನ್ನು ಅಲ್ಲಿಂದೋಡಿಸಿ, ತನ್ನ ದೇಹಸ್ಪರ್ಶದಿಂದ ಆ ವಿಷಜಲವನ್ನು ಅಮೃತಸದೃಶವಾದ ಜಲವನ್ನಾಗಿ ಮಾಡಿದನು.

ರಾತ್ರಿಯ ಕಾಲದಲ್ಲಿ ಕಾಡ್ಗಿಚ್ಚು ಅಗಾಧವಾಗಿ ಹುಟ್ಟಿ ನಂದವ್ರಜವನ್ನು ಆವರಿಸಿಕೊಂಡು ಬರುತ್ತಿರಲಾಗಿ, ವ್ರಜದ ಜನರು ಭೀತರಾಗಿ ಮರಣಕಾಲವು ಪ್ರಾಪ್ತವಾಯಿತೆಂದು ನಿರ್ಧರಿಸಿರಲಾಗಿ, ಕೃಷ್ಣನು ಎಲ್ಲರೂ ಕಣ್ಣು ಮುಚ್ಚಿಕೊಳ್ಳಿರೆಂದು ಹೇಳಿ, ಅವರು ಕಣ್ಣುಮುಚ್ಚಿಕೊಂಡು ಕಣ್ಣುಬಿಡುವುದರೊಳಗಾಗಿ

## अथ सप्तमोऽध्यायः

ಅದ್ಭುತರೂಪದಿಂದ ಆ ದಾವಾಗ್ನಿ ಎಲ್ಲವನ್ನೂ ನೀರಿನಂತೆ ಪಾನಮಾಡಿ ಬಿಟ್ಟಿದ್ದನು. ಎಲ್ಲರೂ ಕಾಡ್ಗಿಚ್ಚಿನಿಂದ ಪಾರಾದರು.

ತುಂಟನೆಂದು ಕೃಷ್ಣನನ್ನು ಹಗ್ಗದಿಂದ ಸೊಂಟಕ್ಕೆ ಕಟ್ಟಲು ಹೋದ ಗೋಪಿಗೆ ಕಟ್ಟಲಾಗದೇ, ಆಯಾಸಪಟ್ಟು ಕೃಷ್ಣನ ಮುಖವನ್ನು ನೋಡುತ್ತಿದ್ದಾಗ, ಕೃಷ್ಣನು ಆಕಳಿಸಿ ತನ್ನ ಬಾಯಲ್ಲಿ ಸಮಸ್ತ ಜಗತ್ತನ್ನೂ, ಗೋಕುಲವನ್ನೂ, ಕೃಷ್ಣನನ್ನು ಕಟ್ಟುತ್ತಿದ್ದ ಗೋಪಿಯನ್ನೂ ತೋರಿಸಿ, ತಾಯಿಗೆ ಕಷ್ಟವಾಯಿತೆಂಬ ಕೃಪೆಯಿಂದ, ಕಟ್ಟಲು ಸಾಲದೇ ಇದ್ದ ಆ ಹಗ್ಗದಿಂದಲೇ ತಾಯಿಯ ಕೈಯಿಂದ ಕಟ್ಟಿಹಾಕಿಸಿಕೊಂಡು ಅತ್ತನು. "ತಂಟೇ ಮಾಡುವುದಿಲ್ಲ ಹೇಳಿದ ಹಾಗೆ ಕೇಳುತ್ತೇನೆ "ಎಂದು ಹೇಳಿ, ತಾಯಿಯ ಕೈಯಿಂದ ಬಿಡಿಸಿಕೊಂಡನು. ಇಂತಹ ಅಸದೃಶ ಬಾಲಲೀಲೆಯನ್ನು ನೋಡಿದ ಆ ಯಶೋದಾದೇವಿಯು ಎಷ್ಟು ಪುಣ್ಯವಂತಳೋ!

ತಂದೆಯಾದ ನಂದಗೋಪನನ್ನು ವರುಣಪಾಶದಿಂದ ಕಟ್ಟಿಹಾಕಿದ್ದ ವರುಣನ ಮುಂದೆ ಪ್ರತ್ಯಕ್ಷನಾಗಿ, ಅವನ ಪೂಜೆಗಳನ್ನು ಸ್ವೀಕರಿಸಿ ಬಹುಮಾನದೊಡನೆ ತಂದೆಯನ್ನು ಬಿಡಿಸಿಕೊಂಡು ಬಂದನು. ಅಜ್ಞಾನಾಖ್ಯ ಸಂಸಾರದಲ್ಲಿ ಮುಳುಗಿದ್ದ ಗೋಕುಲದ ಜನರನ್ನು ತನ್ನ ದರ್ಶನ, ಲೀಲೆಗಳಿಂದ ವೈಕುಂಠದಲ್ಲಿ ವಾಸಮಾಡುವರ ಸದೃಶರನ್ನಾಗಿ ಮಾಡಿದನು. ಗೋಪಾಲಕರು ಇಂದ್ರನಿನಾಗಿ ಪ್ರತಿವರುಷವೂ ಮಾಡುತ್ತಿದ್ದ ಯಜ್ಞವನ್ನು ಕೃಷ್ಣನು, ಗೋವರ್ಧನ ಬೆಟ್ಟಕ್ಕೆ ಆ ಯಜ್ಞವನ್ನು ಸಮರ್ಪಿಸಿ ಇಂದ್ರನಿಗೆ ಬೇಡವೆಂದು ಹೇಳಿ, ತಾನೇ ಗೋವರ್ಧನ ಬೆಟ್ಟ ರೂಪದಿಂದ ಆ ಯಜ್ಞದಲ್ಲಿ ಅರ್ಪಿಸಿದ್ದೆಲ್ಲವನ್ನೂ ತಿಂದನು. ಇಂದ್ರನು ಇದನ್ನು ನೋಡಿ ಸಹಿಸದೆ ಪ್ರಳಯ ಮೇಘಗಳಿಗೆ ಆಜ್ಞಾಪಿಸಿ, ಗೋಕುಲವನ್ನೂ, ಅಲ್ಲಿನ ಜನರನ್ನೂ ಮಳೆಯಿಂದ ಸಮುದ್ರಕ್ಕೆ ಕೊಚ್ಚಿಹಾಕಿರೆಂದು ಹೇಳಿದನು.

ಘೋರವಾಗಿ ಗಾಳಿ ಮಳೆ ಶುರುವಾಗಲು ಶ್ರೀಕೃಷ್ಣನು ಎಡಗೈ ಕಿರುಬೆರಳಿಂದ, ಆ ಗೋವರ್ಧನ ಬೆಟ್ಟವನ್ನು ಬುಡ ಸಹಿತ ಕಿತ್ತು ಮೇಲಕ್ಕೆತ್ತಿ ಹಿಡಿದು, ಗೋಪರನ್ನೂ ಗೋವುಗಳನ್ನೂ ಏಳು ದಿನಗಳು, ಅವಿಚ್ಛಿನ್ನವಾಗಿ ಸುರಿಯುತ್ತಿದ್ದ ಪ್ರಳಯಾಂತಕ ಮಳೆಂದ ರಕ್ಷಿಸಿದನು. ನಂತರ ಇಂದ್ರನಿಗೆ ಜ್ಞಾನ ಉಂಟಾಗಿ ತನ್ನ ತಪ್ಪು ತಿಳಿದು, ಪಶ್ಚಾತ್ತಾಪದಿಂದ ಸಕಲ ದೇವತೆಗಳೊಡನೆ ಕೃಷ್ಣನ ಸಮೀಪಕ್ಕೆ ಬಂದು, ಗೋವಿಂದನೆಂಬ ಹೆಸರಿನಿಂದ ಸ್ತೋತ್ರಮಾಡಿ ಅನರ್ಘ್ಯವಾದ ರತ್ನಾದಿಗಳಿಂದ ಕೃಷ್ಣನನ್ನು ಪೂಜಿಸಿ ಕ್ಷಮೆ ಬೇಡಿದನು.

ರಾತ್ರಿಕಾಲದಲ್ಲಿ ಗೋಪಸ್ತ್ರೀಯರಿಂದ ಕೂಡಿ ರಾಸಕ್ರೀಡಾ ವಿನೋದದಲ್ಲಿ ಶ್ರೀಕೃಷ್ಣನು ಇದ್ದಾಗ,

## अथ सप्तमोऽध्यायः

ಆ ಸ್ತ್ರೀಯರನ್ನು ನೋಡಿ ಮೋಹಿತನಾದ ಶಂಖಚೂಡನೆಂಬ ಕುಬೇರನ ಸ್ನೇಹಿತನು, ಸ್ತ್ರೀಯರಲ್ಲಿ ಕೆಲವರನ್ನು ಹೊತ್ತುಕೊಂಡು ಹೋಗ ಲಪೇಕ್ಷಿಸಿ ಸುಂಟರಗಾಳಿ ರೂಪದಿಂದ ಬರಲು, ತಕ್ಷಣ ಶ್ರೀಕೃಷ್ಣನು ಅವನನ್ನು ಹಿಡಿದು ತಲೆಯನ್ನು ಕತ್ತರಿಸಿ ಕೆಡಹಿದನು. ಅದೂ ಅಲ್ಲದೆ, ಪ್ರಲಂಬಾಸುರ, ಖರ, ದರ್ದುರ, ಕೇಶಿ, ಅರಿಷ್ಟ, ಮಲ್ಲ, ಇಭ, ಕಂಸ, ಯವನರು, ಕುಜರು ಪೌಂಡ್ರಕರು, ಶಾಲ್ವಕರು, ಬಲ್ವಲರು, ಮೈಂದ ದ್ವಿವಿದರೆಂಬ ಕಪಿಗಳು, ದಂತವಕ್ತ್ರ, ಸಪ್ತೋಕ್ಷ, ಶಂಬರ, ವಿಡೂರಥ, ರುಕ್ಮಿ ಮೊದಲದ ದೈತ್ಯರನ್ನೂ, ಕೌರವಪಾಂಡವರ ಸೇನೆಯಲ್ಲಿ ಯುದ್ಧಮಾಡಿದ ಅನೇಕ ವೀರರನ್ನೂ, ಪಾರ್ಥ, ಭೀಮ, ಭೀಷ್ಮ, ದ್ರೋಣಾದಿಗಳ ನೆವದಿಂದ ತಾನೇ ಸಂಹರಿಸಿ ಭೂಭಾರವನ್ನಿಳುಹಿದನು. ಇವರಲ್ಲಿ ಪರಮಾತ್ಮನಲ್ಲಿ ದ್ವೇಷಮಾಡಿದವರು ಶಾಶ್ವತದುಃಖಸ್ವರೂಪವಾದ ನಿತ್ಯನರಕ ಅಂಧತಮಸ್ಸನ್ನು ಹೊಂದಿದರು. ಉದಾಶೀನ ವುಳ್ಳವರು ನರಕಗಳಿಗೇ ಹೋದರು. ಜ್ಞಾನಪೂರ್ವಕ ಭಕ್ತಿ ಮಾಡಿದವರು ಶಾಶ್ವತಸುಖ ಕೊಡುವ ಲೋಕಗಳಿಗೇ ಹೋದರು. ಈ ಶ್ರೀಕೃಷ್ಣಾವತಾರವು ಇಪ್ಪತ್ತೊಂದನೆಯ ಅವತಾರ.

### ಶ್ರೀವೇದವ್ಯಾಸಾವತಾರ

ದ್ವಾಪರಯುಗವು ಪ್ರಾಪ್ತವಾಗಲು, ಕಲಿವೃದ್ಧಿಯಿಂದ ಲೋಕದಲ್ಲಿ ಅಜ್ಞಾನವು ಪ್ರಬಲವಾಗಿ, ಜನರು ದುರ್ಬಲರಾಗಿಯೂ, ಅಲ್ಪಾ ಯುಷ, ಅಲ್ಪ ಮೇಧಾಶಕ್ತಿಯುಳ್ಳವರಾಗಿಯೂ ಆಗುತ್ತಿರಲು, ಈ ಇಪ್ಪತ್ತೆಂಟನೆಯ ದ್ವಾಪರಯುಗದಲ್ಲಿ ಸಾಕ್ಷಾತ್ಪರಮಾತ್ಮನೇ, ಪರಾಶರ ಋಷಿಗಳಿಂದ ಸತ್ಯವತೀದೇವಿಯಲ್ಲಿ ವೇದವ್ಯಾಸರೆಂಬ ಋಷಿರೂಪದಿಂದ ಆವಿರ್ಭವಿಸಿ, ಈ ಅಲ್ಪಬಲ ವುಳ್ಳ ಪಾಮರಜನರ ಉದ್ಧಾರಾರ್ಥವಾಗಿ, ಅಖಂಡವಾಗಿದ್ದ ಒಂದೇ ವೇದವನ್ನು ಅಲ್ಪರ ಜ್ಞಾನಕ್ಕೆ ಗೊತ್ತಾಗುವಂತೆ, ಒಂದೇ ಆದ ಮಹಾವೃಕ್ಷದಲ್ಲಿ ಹೇಗೆ ಬೇರೆ ಬೇರೆ ಕೊಂಬೆಗಳಿರುತ್ತವೆಯೋ, ಹಾಗೆ ಋಗ್ಯಜುಸ್ಸಾಮಾಥರ್ವಣ ವೇದಗಳೆಂದು ವಿಭಾಗಿಸಿದ್ದಲ್ಲದೆ, ಹದಿನೆಂಟು ಪುರಾಣರೂಪಗಳಿಂದಲೂ, ಬ್ರಹ್ಮಸೂತ್ರಗಳೆಂಬ ಮೀಮಾಂಸಾ ಶಾಸ್ತ್ರದಿಂದಲೂ ವೇದಾರ್ಥಗಳನ್ನು ನಿರೂಪಿಸಿದನು. ಇದಲ್ಲದೇ, ಮೂರನೇ, ಏಳನೇ, ಹದಿನಾರನೇ ಮತ್ತು ಇಪ್ಪತ್ತೈದನೆಯ ದ್ವಾಪರಯುಗಗಳಲ್ಲಿ, ಬೇರೆ ಬೇರೆ, ಪರಮಾತ್ಮೇತರ ಋಷಿಗಳು ವ್ಯಾಸರೆಂಬ ಹೆಸರಿನಿಂದ ಅವತರಿಸಿ ವೇದಗಳನ್ನು ಭಾಗಮಾಡಿರುತ್ತಾರೆ. ಇಪ್ಪತ್ತೆಂಟನೆಯ ದ್ವಾಪರಯುಗದಲ್ಲಿ ಸಾಕ್ಷಾತ್ ಪರಮಾತ್ಮನೇ ವೇದವ್ಯಾಸರೆಂಬ ಹೆಸರಿನಿಂದ ಅವತಾರ ಮಾಡಿರುತ್ತಾನೆ.

## ಬುದ್ಧಾವತಾರ

ರುದ್ರದೇವರ ಫಾಲನೇತ್ರದ ಅಗ್ನಿಜ್ವಾಲೆಯಿಂದ, ಅಂತರಿಕ್ಷದಲ್ಲಿದ್ದ ತ್ರಿಪುರವೆಂಬ ಪಟ್ಟಣವೂ, ಅಲ್ಲಿದ್ದ ದೈತ್ಯರೂ ಸುಟ್ಟು ಭಸ್ಮವಾದರು. ಅವರು ಕಲಿಯುಗದಲ್ಲಿ ಬ್ರಾಹ್ಮಣರ ವಂಶದಲ್ಲಿ ಹುಟ್ಟಿ, ವೇದಗಳಲ್ಲಿ ನಂಬಿಕೆ ಇಲ್ಲದಿದ್ದರೂ ಕಾಮ್ಯಾರ್ಥವಾಗಿ, ವೇದಾರ್ಥಗಳನ್ನು ತಿಳಿಯದೇ ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ಈ ರೀತಿ ಬ್ರಾಹ್ಮಣರಂತೆ ತೋರುತ್ತಾ ನಿಷೇಧಕರ್ಮಗಳಲ್ಲಿ ಆಸಕ್ತರಾದ ಇವರಿಗೆ, ಸಹಜ ಜ್ಞಾನವಾದ, ವೇದರಹಿತ ಜ್ಞಾನವನ್ನು, ವೇದಗಳು ಸುಳ್ಳೆಂಬ ಭಾವವನ್ನು ಇವರಿಗೆ ಜ್ಞಾಪಿಸಿಕೊಡುವುದಕ್ಕಾಗಿ, ಜಿನವಂಶದಲ್ಲಿ ದೇವರು ಬೌದ್ಧಾವತಾರ ಮಾಡಿ, ವೇದಗಳು ಅಪ್ರಮಾಣ, ದೇವರಿಲ್ಲ ಇತ್ಯಾದಿ ಮೋಹಶಾಸ್ತ್ರವನ್ನು ರಚಿಸಿ ಇವರಿಗೆ ಯತಿವೇಷದಿಂದ ಬೋಧಿಸಿದನು. ಈ ಮೋಹಶಾಸ್ತ್ರಕ್ಕೆ ತಾನೇ ಅರ್ಥನಿರ್ಣಾಯಕ ಸೂತ್ರಗಳನ್ನು ಮಾಡಿ, ಆ ಸೂತ್ರಗಳ ಮೂಲಕ ಈ ಮೋಹಶಾಸ್ತ್ರಕ್ಕೇ ಸಜ್ಜನರಿಗೆ ವೇದಪ್ರಮಾಣಾನುಸಾರ ಅರ್ಥವಾಗುವಂತೆಯೂ, ವೇದಗಳಲ್ಲಿ ನಂಬಿಕೆ ಇಲ್ಲದೆ, ದೇವರಲ್ಲಿ ವಿಶ್ವಾಸವಿಲ್ಲದವರಿಗೆ ವೇದಗಳು ಅಪ್ರಮಾಣಗಳೆಂಬ ಅರ್ಥದಲ್ಲಿ ನಂಬಿಕೆ ಉಂಟಾಗುವಂತೆಯೂ ರಚಿಸಿದನು. ಅದರಿಂದ ಬ್ರಾಹ್ಮಣರಲ್ಲಿ ಹುಟ್ಟಿದ್ದ ದೈತ್ಯರು ಈ ಮೋಹಶಾಸ್ತ್ರವೆಂಬ ಪಾಷಂಡಮತಾವಲಂಬಿಗಳಾದರು.

## ಕಲ್ಕ್ಯವತಾರ

ಕಲಿಯುಗದ ಅಂತ್ಯಕಾಲದಲ್ಲಿ ಧರ್ಮವೆಲ್ಲಾ ನಿಶ್ಶೇಷವಾಗಿ ಅಳಿಸಿ ಹೋಗಿ, ಲೋಕದಲ್ಲಿ ಸ್ವಧಾ, ಸ್ವಾಹಾ, ವಷಟ್ಕಾರಾದಿಗಳೂ, ಮಂತ್ರೋಚ್ಚಾರಣೆಯೂ, ಕಡೆಗೆ ಭಗವಂತನ ನಾಮೋಚ್ಚಾರಣೆಯ ಶಬ್ದವೇ ಎಲ್ಲೂ ಕೇಳದಂತಾಗಲು, ಆವಾಗ ಪರಮಾತ್ಮನು ವಿಷ್ಣುಯಶನೆಂಬ ಬ್ರಾಹ್ಮಣನ ಮನೆಯಲ್ಲಿ ಕಲ್ಕ್ಯಾವತಾರ ಮಾಡಿ, ಲಕ್ಷ್ಮಿಯನ್ನು ಕುದುರೆಯನ್ನಾಗಿಯೂ, ಪ್ರಾಣದೇವರನ್ನು ಕತ್ತಿಯನ್ನಾಗಿಯೂ ಮಾಡಿಕೊಂಡು, ಮ್ಲೇಚ್ಛಪ್ರಾಯರಾಗಿ, ಹಗಲುಗಳ್ಳರಂತಿದ್ದ ಎಲ್ಲಾ ಪ್ರಜಾಕಂಟಕರಾಜರನ್ನೂ ಸಂಹರಿಸಿ ಭೂಭಾರವನ್ನಿಳುಹುವನು.

ಸೃಷ್ಟಿಕಾಲವು ಪ್ರಾಪ್ತವಾದಾಗ ನಾನೂ, ಮರೀಚಿ, ಅತ್ರ್ಯಾದಿ ಋಷಿಗಳೂ, ಕರ್ದಮಾದಿ ನವಪ್ರಜೇಶ್ವರರೂ, ಹದಿನಾಲ್ಕು ಮನುಗಳೂ, ಇಂದ್ರರೂ, ದೇವತೆಗಳೂ, ಮನುಷ್ಯಚಕ್ರವರ್ತಿಗಳು, ಪರಮಾತ್ಮನ ಇಚ್ಛಾ ಎಂಬ ಮಾಯೆಯಿಂದ ಬದ್ಧರಾಗಿ, ಅವನಿಂದ ಅನುಗ್ರಹೀತವಾದ ಶಕ್ತಿ ಜ್ಞಾನಗಳಿಂದ ಸೃಷ್ಟ್ಯಾದಿ ಕ್ರಿಯೆಗಳನ್ನು ಮಾಡುವೆವು. ಪ್ರಳಯಕಾಲದಲ್ಲಿ ಅಧರ್ಮವೂ, ರುದ್ರನೂ,

ಕೋಪಿಷ್ಠ ಪಾಪಿಷ್ಠರಾದ ದೈತ್ಯರೂ, ಸಹ ಆ ಪರಮಾತ್ಮನ ಇಚ್ಛೆಯಿಂದಲೇ ಲೋಕನಾಶ ಕಾರ್ಯದಲ್ಲಿ ಶಕ್ತರಾಗುವರು. ಸ್ಥಿತಿಕಾಲದಲ್ಲಿ ತಾನೇ ಸ್ವಯಂ ಇದ್ದು ತನ್ನ ಸ್ವಶಕ್ತಿಯಿಂದಲೇ ದೇವರು ಸರ್ವರನ್ನೂ ರಕ್ಷಿಸುವನು. ಆದುದರಿಂದ ನಾವುಗಳೆಲ್ಲಾ ಪರಮಾತ್ಮನ ಮಾಯಾವಿಭೂತಿರೂಪರು. ಮತ್ಸ್ಯಾದಿ ರೂಪಗಳೂ, ಅನಿರುದ್ಧಾದಿ ಆತ್ಮಾದಿ ರೂಪಗಳೂ ಪರಮಾತ್ಮನ ಸ್ವಸ್ವರೂಪಗಳು ಮತ್ತು ಪೂರ್ಣಸ್ವತಂತ್ರ ಜ್ಞಾನ, ಬಲ, ಕ್ರಿಯಾಶಕ್ತಿಯುಳ್ಳವು.

## ಭಗವಂತನ ಎಲ್ಲಾ ರೂಪಗಳೂ ಅನಂತ ವೀರ್ಯರೂಪಗಳು

ಆನಂದಪೂರ್ಣ ರೂಪಗಳು ವಾಮನರೂಪಿ ಪರಮಾತ್ಮನು ತ್ರಿವಿಕ್ರಮಾವತಾರವನ್ನು ಧರಿಸಿ ತನ್ನ ಒಂದು ಪಾದವನ್ನು ಊರ್ಧ್ವಲೋಕಗಳ ಕಡೆಗೆ ಎತ್ತಿದಾಗ, ಆ ರಭಸಕ್ಕೆ ನಾನು ವಾಸಮಾಡುವ ಈ ಸತ್ಯಲೋಕವು ನಡುಗಿತು, ನಾನು ದಿಗ್ಭ್ರಾಂತನಾಗಿ, ಸತ್ಯಲೋಕ ಸಮೇತ ನಾನೂ ಕೆಳಗೆ ಬೀಳುವೆನೋ ಏನೋ ಎಂದು ಭಯದಿಂದ ನಡುಗುತ್ತಿದ್ದಾಗ, ಯಾವ ದಯಾಪರ ಸರ್ವಜ್ಞಮೂರ್ತಿಯಾದ ತ್ರಿವಿಕ್ರಮನು ಇಚ್ಛಾಮಾತ್ರದಿಂದ, ನನ್ನ ವಾಸಸ್ಥಾನವಾದ ಸತ್ಯಲೋಕವನ್ನು ಸ್ಥಿರವಾದದ್ದನ್ನಾಗಿ ಮಾಡಿ, ನನಗೆ ಅಭಯವನ್ನು ನೀಡಿ, ಮನಶ್ಯಾಂತಿ ಹೊಂದುವಂತೆ ಮಾಡಿದನೋ, ಅಂತಹ ಅಗಮ್ಯಮಹಿಮನಾದ ಪರಮಾತ್ಮನ ಅನಂತಾನಂತ, ಪಾರಗಾಣದ ಮಹಿಮೆಗಳನ್ನು, ಯಾವ ನಾನು ಪ್ರಯತ್ನಪಟ್ಟರೆ, ಈ ಭೂಮಂಡದಲ್ಲಿರುವ ಮಣ್ಣಿನ ಅಣುಗಳ ಸಂಖ್ಯೆಯು ಇಷ್ಟೇ ಎಂದು ಎಣಿಸಿ ಹೇಳಲು ಶಕ್ತನೋ, ಅಂತಹ ನನಗೂ ಎಣಿಸಲು ಶಕ್ಯವಲ್ಲ.

ನಿಮಗೆ ನಾಲ್ಕೇ ಮುಖ, ಶೇಷದೇವರಿಗೆ ಸಾವಿರ ಬಾಯಿಗಳಿವೆ, ಎರಡು ಸಾವಿರ ನಾಲಿಗೆಗಳಿವೆ, ಅವರಿಗೂ ಶಕ್ಯವಲ್ಲವೋ ಎಂದರೆ? ಶೇಷದೇವರೂ ಈಚೆಗೆ ನನ್ನಿಂದ ಸೃಷ್ಟಿಯಾದವರು. ಅವರೂ ಈಗಿನವರಿವಿಗೂ ಪರಮಾತ್ಮನ ಮಹಿಮೆಗಳನ್ನು ಗಣನೆಮಾಡಲು ಪ್ರಯತ್ನಿಸುತ್ತಾ, ಗಣನೆ ಮಾಡುತ್ತಿದ್ದರೂ ಇನ್ನೂ ಸ್ವಲ್ಪ ಭಾಗವನ್ನೂ ತಿಳಿದಿಲ್ಲ ಎಂದ ಮೇಲೆ ಯಾರೂ ಸಾಕಲ್ಯವಾಗಿ ಪರಮಾತ್ಮನ ಮಹಿಮೆಯ ಸ್ವರೂಪವನ್ನು ಚೆನ್ನಾಗಿ, ಪೂರ್ತಿಯಾಗಿ ತಿಳಿಯಲಾರರು.

ಹಾಗಾದರೇ ಭಗವನ್ಮಹಿಮೆ ಯಾರೂ ತಿಳಿಯಲಾರರೆ? ಅಂತಹ ಮಹಿಮೆಯಿಂದ ಏನು ಪ್ರಯೋಜನ? ಎಂದರೆ, ಸರ್ವರೂ ಪರಮಾತ್ಮನಲ್ಲಿ ಜ್ಞಾನಭಕ್ತಿಗಳಿಂದ ಆತನ ಉಪಾಸನೆಮಾಡಿ, ಅವನ ದಯೆಯಿಂದಲೇ ಅವರವರ ಯೋಗ್ಯತಾನುಸಾರ ದೇವರು ತೋರಿಸಿಕೊಟ್ಟಷ್ಟು ಮಹಿಮೆಗಳನ್ನು ತಿಳಿದು ಆನಂದಸಮುದ್ರದಲ್ಲಿ ಲೋಲ್ಯಾಡುತ್ತಾರೆ. ಆದುದರಿಂದ ಭಗವನ್ಮಹಿಮೆಗಳು ಆಗಮ್ಯಗಳಾದರೂ

ವ್ಯರ್ಥವಲ್ಲ. ಆದರೆ ಈ ನಾಯಿನರಿಗಳಿಂದ ತಿನ್ನಲ್ಪಡಲು ಯೋಗ್ಯವಾದ ಮನುಷ್ಯ ಶರೀರವನ್ನು ಹೊಂದಿದವರು ಯಾರು ಅಜ್ಞಾನದಿಂದ ದೇಹಪೋಷಣೆ ಮಾತ್ರ ಮಾಡುವವರಾಗಿ ವೃಥಾ ಪಶುಗಳಂತೆ ಜೀವಿಸುವರೋ ಅವರಿಗೆ ದೇವರೆಂದರೆ ಏನೆಂಬುದೂ ಗೊತ್ತಾಗುವುದಿಲ್ಲ. ದೇವರು ಜ್ಞಾನಿಗಮ್ಯ. ದುಷ್ಟರಿಗೆ ದೂರ. ದೇವರನ್ನು ವಿಶೇಷವಾಗಿ ನಾನು ಆತನ ಅನುಗ್ರಹದಿಂದಲೇ ತಿಳಿದಿರುವೆನು.

ಎಲೈ ನಾರದನೇ! ನೀನೂ ರುದ್ರನೂ, ಪ್ರಹ್ಲಾದನೂ, ಮನುಗಳೂ, ಮನುಪತ್ನೀ ಪುತ್ರರೂ, ಪ್ರಾಚೀನಬರ್ಹಿ, ಋಭು, ಅಂಗ, ಉತ್ತಾನಪಾದರಾಯ, ಧೃವ, ಇಕ್ಷ್ವಾಕು, ಐಲ, ಮುಚುಕುಂದ, ವಿದೇಹರಾಜ, ಗಾಧಿರಾಜ, ಅಂಬರೀಷ, ಸಗರ, ಗಯ, ನಹುಷ, ಮಾಂಧಾತ, ಅಲರ್ಕ, ಶತಧನ್ವ, ರಂತಿದೇವ, ದೇವವ್ರತ, ಬಲಿ, ದಿಲೀಪ, ಸೌಭರಿಋಷಿ, ಉದಂಕ, ಶಿಬಿ,ಚಕ್ರವರ್ತಿ, ದೇವಲ, ಪಿಪ್ಪ ಲ, ಸಾರಸ್ವತ, ಉದ್ಧವ, ಪರಾಶರ, ಭುರಿಷೇಣ, ವಿಭೀಷಣ, ಹನುಮ, ಉಪೇಂದ್ರ, ದತ್ತಾತ್ರೇಯ, ಅರ್ಜುನ, ಅರ್ಷ್ಟಿಷೇಣ, ವಿಧುರ, ಶೃತದೇವ ಮುಂತಾದವರೂ ಶ್ರೀಪರಮಾತ್ಮನ ಮಹಾಮಹಿಮೆಗಳನ್ನು ಯಥಾಯೋಗ್ಯವಾಗಿ ಬಲ್ಲರು. ಇವರೇ ಆ ಪರಮಾತ್ಮನ ಕೃಪಾಬಲದಿಂದ, ದೇವಮಾಯೆಯೆಂಬ ಅಜ್ಞಾನಾಖ್ಯ ಸಂಸಾರದಲ್ಲಿ ಬೀಳದೆ, ಸರ್ವದಾ ಜ್ಞಾನಭಕ್ತ್ಯಾದಿಗಳಿಂದ ಪರಮಾತ್ಮನನ್ನು ಅರ್ಚಿಸಿ, ಸಂಸಾರ ಸಮುದ್ರವನ್ನು ದಾಟುವರು.

ಕೇವಲ ಸ್ತ್ರೀಶೂದ್ರಾದಿಗಳೂ, ಹೂಣ, ಯವನಾದಿಗಳೂ ಕೂಡ ಯಾರ ನಾಮಾಶ್ರಯದಿಂದ ಪಾಪಮುಕ್ತರಾಗುವರೋ, ಅಂತಹ ಪರಮಾತ್ಮನ ಸೇವಾದಿಗಳನ್ನು ಭಕ್ತಿಯಿಂದ ಮಾಡುವ ಧನ್ಯರಿಗೆ ಯಾವ ಲೋಕ, ಯಾವ ದೇಶ, ಯಾವ ಕಾಲದಲ್ಲಿಯೇ ಆಗಲೀ ಸುಖವಿಲ್ಲದೇ ಹೋದೀತು? ಶಶ್ವದೇಕ ಪ್ರಕಾರನೂ, ಪೂರ್ಣಸುಖ ಸ್ವರೂಪನೂ, ನಿರ್ಭಯನೂ, ಸರ್ವಭಯಪ್ರದನೂ, ರಾಗದ್ವೇಷಮ್ಯಾದಿ ಸಮಸ್ತ ದೋಷದೂರನೂ, ನಿರ್ದೋಷಜ್ಞಾನ ಸ್ವರೂಪನೂ, ಸಮರಹಿತನೂ, ನಿಖಿಳ ಜಗದ್ವಿಲಕ್ಷಣ ಮಹಿಮನೂ, ಅವ್ಯಕ್ತಾದಿ ಸಮಸ್ತ ತತ್ವಗಳಲ್ಲೂ ಇದ್ದರೂ, ಅಹಂಮಮಾದಿ ಅಪೇಕ್ಷಾರಹಿತ ನಿತ್ಯತೃಪ್ತನೂ, ಆದ ಆತ್ಮಶಬ್ದವಾಚ್ಯ ಪರಮಾತ್ಮನ ಮುಂದೆ, ಸಕಲ ಸಂಸಾರ ಬಂಧನವನ್ನು ಕೊಡುವ ಸದಸತ್ಪ್ರವೃತ್ಯಭಿಮಾನಿಯಾದ ಲಕ್ಷ್ಮೀದೇವಿಯು ಎದುರಲ್ಲಿ ನಿಲ್ಲಲು ಲಜ್ಜೆಯಿಂದ, ದಾಸಿಯಂತೆ ಸೇವಿಸುತ್ತಿರುವಳೋ, ಅಂತಹ ಭಗವನ್ಮಾಯಾ ಶಬ್ದವಾಚ್ಯಳಾದ ಆ ಲಕ್ಷ್ಮಿಯು, ತನ್ನರಮಣನ ಪ್ರೀತಿಗೆ ಪಾತ್ರರಾದ ಭಕ್ತರನ್ನು ಹೇಗೆ ತಾನೇ ಮಾಯಾಪಾಶದಿಂದ ಬಂಧಿಸ್ಯಾಳು? ಆದುದರಿಂದ ಪರಮಾತ್ಮಭಕ್ತರಿಗೆ ಮಾಯಾಪಾಶದ ಭಯವಿಲ್ಲ.

ಇಂತಹ ಮಹಿಮೆಯುಳ್ಳ ಸರ್ವೋತ್ಕೃಷ್ಟಮಹಿಮನಾದ ಪರಮಾತ್ಮನನ್ನೂ,

ಸರ್ವಗುಣಪೂರ್ಣನೆಂದು, ಪೂರ್ಣಸುಖಾನಂದ ಸ್ವರೂಪನೆಂದೂ, ದುಃಖರಹಿತನೂ ಶೋಕನಾಶಕನೆಂದೂ ತಿಳಿದು, ಯಾವ ಜ್ಞಾನಿಗಳು ಹರಿಚರಣಕಮಲಗಳ ನ್ನಾಶ್ರಯಿಸಿರುತ್ತಾರೆಯೋ, ಅವರು ದೇವೇಂದ್ರನಂತೆ ನಿರಂತರ ಭಗವದ್ಗುಣಾನುಭವರೂಪ ಅಮೃತಪಾನ ಮಾಡುವವರಾಗುತ್ತಾರೆ. ಯಮನಯಾತನೆಗೆ ಒಳಗಾಗಲಾರರು. ಯಮನ ಪಟ್ಟಣವನ್ನೇ ನೋಡಲಾರರು.

ಹೀಗೆ ಅನಾದಿಕಾಲದಿಂದ ಪರಮಾತ್ಮನಲ್ಲಿ ಭಕ್ತಿಮಾಡುವ ಸಚ್ಚೇತನರಿಗೆ, ಪರಮಾತ್ಮನು ಒಲಿದು ಪ್ರತ್ಯಕ್ಷನಾಗುವನು. ಕರ್ಮಕ್ಷಯಾನಂತರ ಕೊನೆಯದೇಹವು ಬಿಡಲ್ಪಡುವಾಗ, ಜೀವನನ್ನು ಶಿರೋರಂಧ್ರವಾದ ಬ್ರಹ್ಮರಂಧ್ರವನ್ನು ಭೇಧಿಸಿ ಜ್ಯೋತಿರ್ಮಯಲೋಕಗಳಿಗೆ ಕರೆದುಕೊಂಡುಹೋಗಿ, ಅನೇಕ ವೈಭವ, ಸಂಪತ್ತುಳ್ಳ ಭೋಗಗಳನ್ನೂ ಕೊನೆಗೆ ಮುಕ್ತಿಯನ್ನೂ ಕೊಡುವನು. ದ್ವೇಷಿಗಳಿಗೆ, ನರಕಾದಿಗಳಲ್ಲಿ ಸ್ಥಾನಮಾಡಿ, ನಿರಂತರ ದುಃಖವನ್ನೂ, ಮಹಾಪಾಪಿಗಳಾದ ಕಲ್ಯಾದಿದೈತ್ಯರಿಗೆ ಅಂಧಂತಮಸ್ಸೆಂಬ ಘೋರನರಕ ಪ್ರಾಪ್ತಿಯನ್ನು ಉಂಟು ಮಾಡುವನು. ನರಕ, ಸ್ವರ್ಗ, ಮುಕ್ತಸ್ಥಾನಗಳಲ್ಲೆಲ್ಲಾ ವ್ಯಾಪಿಸಿ ಸರ್ವಕಾರ್ಯಗಳನ್ನೂ ಮಾಡುವನು.

ಎಲೈ! ನಾರದನೇ ನಾನು ಈ ವಾಕ್ಯಗಳಿಂದ ಭಗವತ್ಸ್ವರೂಪವನ್ನು ನಿನಗೆ ವಿವರ ಮಾಡಿರುತ್ತೇನೆ. ಒಟ್ಟಿನಲ್ಲಿ ಸರ್ವವೂ ಪರಮಾತ್ಮಾಧೀನವೂ, ಪರಮಾತ್ಮಾಧಿಷ್ಠಿತವೂ ಎಂದೂ, ಪರಮಾತ್ಮನು ಸರ್ವೋತ್ತಮನೆಂದೂ ತಿಳಿ. ಭಾಗವತದಲ್ಲಿ ಪ್ರತಿಪಾದಿಸಲ್ಪಟ್ಟ ಸಕಲ ವಿಷಯಗಳನ್ನೂ ಒಟ್ಟುಗೂಡಿಸಿ ಈಗ ನಿನಗೆ ಹೇಳಿರುವೆನು. ನೀನು ಇದನ್ನೂ ವಿಶದವನ್ನಾಗಿ ಮಾಡಿ ಲೋಕದಲ್ಲಿ ಪ್ರಸಿದ್ಧಿಮಾಡು. ಲೋಕದಲ್ಲಿ ಸರ್ವಸಾಮಾನ್ಯರಿಗೆ ಪರಮಾತ್ಮನಲ್ಲಿ ಹೇಗೆ ಭಕ್ತಿಯುಂಟಾಗುವುದೋ ಆ ರೀತಿಯಲ್ಲಿ ಇದನ್ನು ವರ್ಣಿಸು.

ನಾಶಹೊಂದುವ ನರಜನ್ಮದಲ್ಲಿ ಜೀವರಿಗೆ ಪರಮಾತ್ಮನಲ್ಲಿ ಭಕ್ತಿಮಾಡುವುದೇ ಜೀವಿತಕ್ಕೆ ಫಲ. ಕೇವಲ ಸ್ವರ್ಗಾದಿ ಪ್ರಾಪ್ತಿಗಾಗಿ ಪರಮಾತ್ಮನನ್ನಾರಾಧಿಸದಂತೆ, ಜೀವರನ್ನು ಹರಿನಿಷ್ಠೆಯುಳ್ಳವರನ್ನಾಗಿಯೇ ಮಾಡಲು ಯಾವ ಭಾಷೆಯಿಂದ ಬೋಧಿಸಿದರೆ ಸಾಧ್ಯವಾಗುತ್ತೋ ಅದರಂತೆ ತಿಳಿಸು. ಭಗವದ್ಭಕ್ತಿರಹಿತವಾದ, ವರ್ಣಾಶ್ರಮಧರ್ಮಗಳಿಂದಾಗಲೀ, ತಪಸ್ಸಿನಿಂದಾಗಲೀ, ದಾನಗಳಿಂದಾಗಲೀ ಏನು ಪ್ರಯೋಜನ? ಆದುದರಿಂದ ಸರ್ವಶ್ರೇಯಸ್ಸಿಗಾಗಿ ಭಗವದ್ಭಕ್ತಿಯನ್ನು ಸಂಪಾದಿಸತಕ್ಕದ್ದು.

ನಮ್ಮ ಸಂವಾದರೂಪವಾದ ಈ ಭಗವದವತಾರ ಚರಿತ್ರಾರೂಪವಾದ, ಪರಮಾತ್ಮನ ಅಚಿಂತ್ಯಾದ್ಭುತ ಮಾಯಾಶಕ್ತಿಯನ್ನು ವರ್ಣಿಸಿರುವಂತೆ, ಯಾರು ತಿಳಿಯುತ್ತಾರೊ, ಯಾರು ಈಗ ಹೇಳಿದ ಜ್ಞಾನವನ್ನು

ಅನುಮೋದಿಸುತ್ತಾರೋ ಮತ್ತು ನಿತ್ಯಪರಾಯಣಾದಿಗಳಿಂದ ಓದಿ, ಇತರರಿಗೆ ಪಾಠಹೇಳುತ್ತಾರೋ ಅವರು, ಭಗವನ್ಮಾಯಾದಿಂದ ಬಿಡಲ್ಪಟ್ಟವರಾಗಿ, ಸ್ವರೂಪ ನಿತ್ಯಸುಖಾವಿರ್ಭಾವರೂಪ ಮುಕ್ತಿಯನ್ನೂ, ಶ್ರೀಪರಮಾತ್ಮನ ನಿವಾಸಸ್ಥಾನವನ್ನೂ ಹೊಂದಿ ಪರಮ ಸುಖಿಗಳಾಗುವರು.

**ಇತಿ ಶ್ರೀಮದ್ಭಾಗವತ ದ್ವಿತೀಯಸ್ಕಂಧದ ಏಳನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು ॥**

## अथ अष्टमोऽध्यायः

राजोवाच

ब्रह्मणा चोदितो ब्रह्मन् गुणाख्यानेऽगुणस्य च ।
यस्मै यस्मै यथा प्राह नारदो देवदर्शनः ॥ १ ॥

एतद्वेदितुमिच्छामि तत्वं वेदविदां वर ।
हरेरद्भुतवीर्यस्य कथा लोकसुमङ्गलाः ॥ २ ॥

प्रथयस्व महाभाग यथाऽहमखिलात्मनि ।
कृष्णे निवेश्य निः सङ्गं मनस्त्यक्ष्ये कलेवरम् ॥ ३ ॥

शृण्वतः श्रद्धया नित्यं गृणतश्च स्वचेष्टितम् ।
कालेनानतिदीर्घेण भगवान् विशते हृदि ॥ ४ ॥

प्रविष्टः कर्णरन्ध्रेण स्वानां भावसरोरुहम् ।
धुनोति शमलं कृष्णः सलिलस्थं यथा शरत् ॥

धौतात्मा पुरुषः कृष्णपादमूलं न मुञ्चति ।
मुक्तसर्वपरिक्लेशः पान्थः स्वशरणं यथा ॥ ६ ॥

यदधातुमतो ब्रह्मन् देहारम्भोऽस्य धातुभिः ।
यदृच्छया हेतुना वा भवन्तो जानते यथा ॥ ७ ॥

आसीद्यदुदरात्पद्मं लोकसंस्थानलक्षणम् ।
यावानयं वै पुरुषः इयत्तावयवैः पृथक् ।
तावानसाविति प्रोक्तस्तथावयववानिव ॥ ८ ॥

## अथ अष्टमोऽध्यायः

अजः सृजति भूतानि भूतात्मा यदनुग्रहात् ।
ददृशे येन तद्रूपं नाभिपद्मसमुद्भवः ॥ ९ ॥

स चापि यत्र पुरुषो विश्वस्थित्युद्भवाप्ययः ।
मुक्त्वाऽऽत्ममायां मायेशः शेते सर्वगुणाश्रयः ॥ १० ॥

पुरुषावयवैर्लोकाः सपालाः पूर्वकल्पिताः ।
लोकैरमुष्यावयवाः सपालैरिति शुश्रुमः ॥ ११ ॥

यावान् कल्पो विकल्पो वा यथा कालोऽनुमीयते ।
भूतभव्यभवच्छब्द आयुर्मानञ्च यत्कृतम् ॥ १२ ॥

कालस्यानुगतिर्या तु लक्ष्यतेऽण्वी महत्यपि ।
यावतीः कर्मगतयो यादृशीर्द्विजसत्तम ॥ १३ ॥

यस्मिन् कर्मसमावापो यथा येनोपगृह्यते ।
गुणानां गुणिनां चैव परिमाणं सुविस्तरम् ॥ १४ ॥

भूपातालककुब्व्योमग्रहनक्षत्रभूभृताम् ।
सरित्समुद्रद्वीपानां सम्भवश्चैतदोकसाम् ॥ १५ ॥

प्रमाणमण्डकोशस्य बाह्याभ्यन्तरवस्तुनः ।
महताञ्चानुचरितं वर्णाश्रमविनिर्णयम् ॥ १६ ॥

अवतारानुचरितं यदाश्चर्यतमं हरेः ।
युगानि युगमानञ्च धर्मो यश्च युगे युगे ॥ १७ ॥

नृणां साधारणो धर्मः सविशेषश्च यादृशः ।
श्रेणीनां राजर्षीणाञ्च धर्मः कृच्छ्रेषु जीवताम् ॥ १८ ॥

तत्वानां परिसङ्ख्यानं लक्षणं हेतुलक्षणम् ।
पुरुषाराधनविधिः योगस्याध्यात्मिकस्य च ॥ १९ ॥

योगेश्वरैश्वर्यगतिं लिङ्गभङ्गञ्च योगिनाम् ।
वेदोपवेदधर्माणामितिहासपुराणयोः ॥ २० ॥

## अथ अष्टमोऽध्यायः

सम्भवः सर्वभूतानां विक्रमः प्रतिसङ्क्रमः ।
इष्टापूर्तस्य काम्यानां त्रिवर्गस्य च यो विधिः ॥ २१ ॥

यो वाऽनुशयिनां सर्गः पाखण्डस्य च सम्भवः ।
आत्मनो बन्धमोक्षौ च व्यवस्थानं स्वरूपतः ॥ २२ ॥

यथाऽऽत्मतन्त्रो भगवान् विक्रीडत्यात्ममायया ।
विसृज्य च यथा मायामुदास्ते साक्षिवद्विभुः ॥ २३ ॥

सर्वमेतच्च भगवान् पृच्छतो मेऽनुपूर्वशः ।
तत्वतोऽर्हस्युदाहर्तुं प्रपन्नाय महामुने ॥ २४ ॥

अत्र प्रमाणं हि भवान् परमेष्ठी यथाऽऽत्मभूः ।
अपरे ह्यनुतिष्ठन्ति पूर्वेषां पूर्वजैः कृतम् ॥ २५ ॥

न मेऽसवः परायन्ति ब्रह्मन्ननशनादमी ।
पिबतोऽच्युतपीयूषं त्वद्वाक्याद्धि विनिः सृतम् ॥ २६ ॥

**सूत उवाच**

स उपामन्त्रितो राज्ञा कथायामिति सत्पतेः ।
ब्रह्मरातो भृशं प्रीतो विष्णुरातेन संसदि ॥ २७ ॥

आह भागवतं नाम पुराणं ब्रह्मसम्मितम् ।
ब्रह्मणे भगवत्प्रोक्तं ब्रह्मकल्प उपागते ॥ २८ ॥

यद्यत्परीक्षिदृषभः पाण्डूनामनुपृच्छति ।
आनुपूर्व्येण तत्सर्वमाख्यातुमुपचक्रमे ॥ २९ ॥

**॥ इति श्रीमद्भागवते (द्वितीयस्कन्धे(*2) अष्टमोऽध्यायः ॥**

**॥ ಎಂಟನೆಯ ಅಧ್ಯಾಯ ॥**

## अथ अष्टमोऽध्यायः

## ಪರೀಕ್ಷಿತರ ಜ್ಞಾನದಾಹ

ಈ ಅಧ್ಯಾಯದಲ್ಲಿ ಪರೀಕ್ಷಿದ್ರಾಜರು ಶುಕಋಷಿಗಳನ್ನು, ಭಾಗವತ ಪ್ರತಿಪಾದಕ ವಿಷಯಗಳನ್ನು ತಿಳಿಯಲು, ಪ್ರಶ್ನೆ ಮಾಡುತ್ತಾರೆ. ಎಲೈ ಶುಕಋಷಿಗಳೇ! ಬ್ರಹ್ಮದೇವರಿಂದ ನಾರದರು ಕೇಳಿದ ತತ್ವವಿಚಾರಗಳನ್ನು ಬ್ರಹ್ಮದೇವರ ವಾಕ್ಯದಂತೆ, ಎಲ್ಲೆಲ್ಲಿ, ಯಾರ್ಯಾರಿಗೆ, ಯಾವ ಯಾವ ರೀತಿಯಾಗಿ ಭಗವತ್ತತ್ವಗಳನ್ನು ವಿವರಿಸಿ ಉಪದೇಶಿಸಿದರು? ನಾನೂ ಅವುಗಳನ್ನೇ ಕೇಳಲಪೇಕ್ಷಿಸುತ್ತೆನೆ. ಏಕೆಂದರೆ, ಪಾಪಪರಿಹಾರಕ ಸ್ವಾಮಿಯಾದ ಶ್ರೀಹರಿಯ ಪರಮಮಂಗಳ, ಲೋಕಕಲ್ಯಾಣಪ್ರದ ಮಹಿಮೆಗಳು ಅಲ್ಲಿ ಹೇಳಲ್ಪಡುತ್ತವೆ.ಎಲೈ! ಮಹಾಭಾಗ್ಯಶಾಲಿಗಳಾದ ಶುಕಮಹರ್ಷಿಗಳೇ, ಮರಣೋನ್ಮುಖನಾದ ನಾನು ಕೃಷ್ಣಪರಮಾತ್ಮನಲ್ಲಿ ಏಕಮನಸ್ಸಿಟ್ಟು, ಇತರ ಸರ್ವಸಂಗ ಪರಿತ್ಯಾಗಮಾಡಿ, ಹೇಗೆ ಈ ದೇಹವನ್ನು ಬಿಟ್ಟೇನೋ, ಆ ರೀತಿ ಮನಸ್ಸುಂಟಾಗುವಂತೆ ಈ ಕಥೆಯನ್ನು ತಾವು ನನಗೆ ಹೇಳಿ. ಕೃಷ್ಣಚರಿತೆಯೆಂಬ ಕಥಾಶ್ರವಣದಿಂದ ಆ ಪರಮಾತ್ಮನ ಮಹಾತ್ಮೆಗಳು ತಿಳಿಯಬಂದು, ಅದರಿಂದುಂಟಾಗುವ ಭಕ್ತಿಯೋಗದಿಂದ ಪರಮಾತ್ಮನು ನಮ್ಮ ಹೃತ್ಸ್ಥಲದಲ್ಲಿ ಹೊಳೆಯುವನು.

ಕಿವಿಗಳೆಂಬ ದ್ವಾರಗಳಿಂದ, ಭಗವತ್ಕಥಾರೂಪವಾಗಿ ಶ್ರೀಪರಮಾತ್ಮನು ಈ ದೇಹದೊಳಗೆ ಪ್ರವೇಶಿಸಿ, ನಮ್ಮ ಭಾವನಾ ತರಂಗಗಳೆಂಬ ಸರೋವರದಲ್ಲಿ ನೆಲೆಸಿ, ನಮ್ಮ ಮನೋಗತ ಸಕಲ ಕಲ್ಮಷಗಳನ್ನೂ ನಾಶಮಾಡಿ, ನಮ್ಮನ್ನು ಪವಿತ್ರರನ್ನಾಗಿ ಮಾಡುವನು. ಈ ರೀತಿ ಪವಿತ್ರನಾದ ಮನುಷ್ಯನು ನಿಖಿಲ ಪುರುಷಾರ್ಥಪ್ರದವಾದ ಶ್ರೀಕೃಷ್ಣನ ಪರಮಪಾವನ ಚರಣಾರವಿಂದದಲ್ಲಿ ನಿರಂತರ ಭಕ್ತಿಮಾಡದೇ ಬಿಡಲಾರನು. ಏಕೆಂದರೆ ಹೇಗೆ ಪ್ರಯಾಣಿಕನು ದೇಶದೇಶಗಳನ್ನು ಸಂಚರಿಸಿ ಅನೇಕ ಆಯಾಸಪಟ್ಟು, ನಂತರ ತನ್ನ ಸ್ವಂತ ಮನೆಗೆ ಬಂದ ಮೇಲೆ ನಿಶ್ಚಿಂತನಾಗಿ ಸುಖಿಯಗಿರುತ್ತಾನೋ, ಅದರಂತೆ ಮುಖ್ಯ ಆಶ್ರಯವಾದ ಶ್ರೀಪರಮಾತ್ಮನ ಪಾದಾರವಿಂದಗಳನ್ನು ಆಶ್ರಯಿಸಿದವನು ಸರ್ವಸುಖವನ್ನೂ ಹೊಂದುವನು.

ಜೀವನು ಪ್ರಕೃತಿ ಸಂಬಂಧವಿಲ್ಲದ ಚಿದ್ರೂಪನೆಂದೂ, ಇವನಿಗೆ ಪ್ರಾಕೃತ ಶರೀರ ಸಂಬಂಧವು, ಪಂಚಭೂತಗಳನ್ನು ಉಪಾದಾನಕಾರಣವನ್ನಾಗಿ ಮಾಡಿಕೊಂಡು, ಶ್ರೀಪರಮಾತ್ಮನ ಅಪೇಕ್ಷೆಯಂತೆ ಉಂಟಾಗಿ, ಜೀವರಿಗೆ ಸಂಸಾರಕಾರಣ ವಾಗುತ್ತೆಂದು ಪ್ರಾಜ್ಞರು ಹೇಳುತ್ತಾರೆ. ಭಗವದಿಚ್ಛೆಯಂತೆಯೇ ಕಾರಣವಾದರೂ, ಜೀವರನ್ನು ದೇಹಾದಿಗಳಿಂದ ಸೃಷ್ಟಿಸುವುದಕ್ಕೆ ಇತರ ಬೇರೆ ಕಾರಣವೂ ಉಂಟೆಂದು ನಾನು ತಿಳಿಯುತ್ತೇನೆ. ಈ ಬೇರೆ ಕಾರಣವ್ಯಾವುದೆಂಬುದನ್ನು ತಮ್ಮಂಥಾ ದಿವ್ಯಜ್ಞಾನಿಗಳು ತಿಳಿದಿದ್ದೀರಿ.

ನಮಗೆ ಸರಿಯಾಗಿ ತಿಳಿಯದು. ಆದುದರಿಂದ ಆ ವಿಷಯವನ್ನು ನಿಮ್ಮಿಂದ ತಿಳಿಯಲಪೇಕ್ಷಿಸುತ್ತೇನೆ.

ಪದ್ಮನಾಭದೇವರ ನಾಭಿಯಲ್ಲಿ ಉತ್ಪನ್ನವಾದ ಹದಿನಾಲ್ಕು ಲೋಕಾತ್ಮಕವಾದ ಹದಿನಾಲ್ಕು ದಳಗಳುಳ್ಳ ಕಮಲದಲ್ಲಿ ಬ್ರಹ್ಮದೇವರು ಉತ್ಪನ್ನರಾದರು. ನಂತರ 'ತಪ ' 'ತಪ 'ಎಂಬ ಭಗವದ್ವಾಕ್ಯವನ್ನು ಕೇಳಿದ ಬ್ರಹ್ಮದೇವರು ತಪಸ್ಸುಮಾಡಿ, ಪ್ರತ್ಯಕ್ಷ ಮಾಡಿ ಕೊಂಡ ಪುರುಷರೂಪನ ಅವಯವಗಳನ್ನೂ, ಅವಯವಗಳಲ್ಲಿರುವ ವಸ್ತುಗಳು, ದೇವತೆಗಳನ್ನೂ, ಪಾದಾದಿ ಶಿರಪರ್ಯಂತ ಅವಯವಗಳಿಂದ ಸೂಕ್ಷ್ಮರೂಪದಿಂದ ಸೃಷ್ಟಿಸಿದ್ದ ಹದಿನಾಲ್ಕುಲೋಕಗಳನ್ನೂ, ಅಂಗದೇವತೆಗಳನ್ನೂ, ನೋಡಿದವರಾಗಿಯೇ ತಾವು ನೋಡಿದಂತೆ, ಆ ಪರಮಾತ್ಮನ ಇಚ್ಛಾನುಸಾರ, ಅವನ ಆಜ್ಞೆಯಂತೆ, ಸ್ಥೂಲರೂಪದಿಂದ ಬ್ರಹ್ಮದೇವರು ಜಗತ್ತನ್ನೂ, ದಿಕ್ಪಾ ಲಕ, ತತ್ವಾಭಿಮಾನಿ ದೇವತೆಗಳನ್ನೂ, ಲೋಕಗಳನ್ನೂ ಇತರ ಸಮಸ್ತ ಚರಾಚರ ಪ್ರಾಣಿಗಳನ್ನೂ ಸೃಷ್ಟಿಸಿದರು ಎಂದು ಕೇಳಿದ್ದೇನೆ.

ಈ ಬ್ರಹ್ಮದೇವರ ಸೃಷ್ಟಿವಿಧಾನವನ್ನೂ, ಬ್ರಹ್ಮಕಲ್ಪ, ಬ್ರಹ್ಮದಿನ, ಮನುಕಲ್ಪ, ದೇವತೆಗಳ, ಮನುಷ್ಯ, ಪಶ್ವಾದಿಗಳ ಆಯಸ್ಸು ಪರಿಮಿತಿ, ಅಣು ಮಹತ್ಕಾಲಗಳ ಲಕ್ಷಣ, ಪರಿಮಿತಿ, ಕರ್ಮಸ್ವರೂಪ, ಕರ್ಮಗಳು ಎಷ್ಟುವಿಧ, ಯಾವ್ಯಾವ ಜೀವರು ಯಾವ್ಯಾವಕರ್ಮ ಮಾಡುತ್ತಾರೆ? ಆ ಕರ್ಮಗಳ ಸಂಖ್ಯೆ ಎಷ್ಟು? ಕರ್ಮಫಲಗಳೇನು? ಕರ್ಮಸಮವಾಯವೆಂದರೇನು? ಕರ್ಮಸಮವಾಯಕರ್ತನ್ಯಾರು? ಸತ್ವಾದಿಗುಣಗಳ ಪರಿಮಾಣವೇನು? ಮಹದಾದಿ ತತ್ವದೇವತೆಗಳ ಸಾಮರ್ಥ್ಯವೇನು?

ಭೂಮಿ, ಸ್ವರ್ಗ, ಪಾತಾಳಾದಿ ಲೋಕಗಳ ಪರಿಮಾಣವೆಷ್ಟು? ಇವುಗಳ ಉತ್ಪತ್ತಿ ಕ್ರಮವು ಹೇಗೆ? ಸಮಸ್ತವಸ್ತುಗಳ ಹೊರಗೆ ಅಣು ಬೃಹದ್ರೂಪಗಳಿಂದಿರುವ ಪರಮಾತ್ಮನ ರೂಪಗಳ ಪರಿಮಾಣವೆಷ್ಟು? ಮಹಾತ್ಮರಾದ ಮರೀಚಿ, ಕರ್ದಮಾದಿ ಪ್ರಜೇಶ್ವರರಿಂದ ನಿರ್ಧರಿಸಲ್ಪಟ್ಟ ವರ್ಣಾಶ್ರಮಧರ್ಮಗಳ ವಿಶೇಷಾಂಶಗಳೇನು? ಯುಗಯುಗಗಳಲ್ಲಿ ದೇವರುಮಾಡಿದ ಬೇರೆಬೇರೆ ಅವತಾರಗಳೂ, ಆ ಅವತಾರಕಾರ್ಯಗಳೂ ಏನು? ಜಾತಿಮಾತ್ರಕ್ಕೆ ಕೂಡಿದ ಸಾಧಾರಣಧರ್ಮಗಳೇನು? ವಿಶೇಷಧರ್ಮಗಳ ಸ್ವರೂಪವೇನು? ಪ್ರಿಯವ್ರತಾದಿ ರಾಜರ್ಷಿಗಳು ಆಚರಿಸಿದ ರಾಜಧರ್ಮಗಳೂ, ರಾಜ್ಯಾಂಗ, ಅಂಗರಕ್ಷಕಧರ್ಮ, ಯುದ್ಧದಲ್ಲಿ ಧರ್ಮ, ಇವುಗಳ್ಯಾವುವು? ಮಹದಾದಿಗಳ ಒಟ್ಟು ಸಂಖ್ಯೆಎಷ್ಟು? ಅವುಗಳ ಲಕ್ಷಣ, ವ್ಯಾವರ್ತಕ ಧರ್ಮ, ಹೇತು, ಇವುಗಳಿಗೆ ಕಾರಣನಾದ ಬ್ರಹ್ಮನಾಮಕ ವಿಷ್ಣುವಿನ ಲಕ್ಷಣವೇನು?

ಭಕ್ತಿಯೋಗದ ಲಕ್ಷಣಗಳೇನು? ಯೋಗಿಶ್ವರರ ಐಶ್ವರ್ಯಗಳೇನು? ಅವುಗಳ ಲಕ್ಷಣವೇನು?

## अथ अष्टमोऽध्यायः

ಯೋಗಿಗಳಿಗೆ ಶರೀರನಾಶಪ್ರಕಾರ, ಲಿಂಗಭಂಗ ಪ್ರಕಾರಗಳು ಹೇಗೆ? ವೇದ, ಪುರಾಣ, ಇತಿಹಾಸ, ವೈದ್ಯಶಾಸ್ತ್ರ ಇತ್ಯಾದಿಗಳ ವಿವರ ಮತ್ತು ಉತ್ಪತ್ತಿ ಕ್ರಮವು ಹೇಗೆ? ಪ್ರಪಂಚದ ಲಯಕ್ರಮವು ಹೇಗೆ? ಇಷ್ಟಾಪೂರ್ತಿ, ಕಾಮ್ಯಕರ್ಮಾನುಷ್ಠಾನಾದಿಗಳಲ್ಲಿ ನಿರತರಾದ ಸಂಸಾರಿಜೀವರ ಉತ್ಕ್ರಾಂತಿ ಮತ್ತು ಮೋಕ್ಷವು ಹೇಗೆ? .

ಪರಮಾತ್ಮನು ತನ್ನ ಸ್ವೇಚ್ಛೆ ಎಂಬ ತನ್ನ ಅಧೀನವಾದ ಚಿತ್ಪ್ರಕೃತಿ, ಜಡಪ್ರಕೃತಿಗಳಿಂದ, ಜೀವರಿಗೆ ದೇಹಾದಿಗಳನ್ನು ಕೊಟ್ಟು ಸೃಷ್ಟಿಸಿ, ಸ್ವಸ್ವರೂಪೇಚ್ಛೆ ಎಂಬ ಜ್ಞಾನ, ಭಕ್ತಿ, ವಿರಕ್ತಿ, ಬಲ, ಐಶ್ವರ್ಯಾದಿಗಳಿಂದ ಜೀವರಿಗೆ ತನ್ನ ವಿಷಯಕ ಜ್ಞಾನಹುಟ್ಟಿಸಿ, ಅವರಿಂದ ತನ್ನ ಉಪಾಸನೆ ಮಾಡಿಸಿ, ಅನೇಕ ಸುಖಗಳನ್ನು ಅವರಿಗೆ ಕೊಟ್ಟು ರಕ್ಷಿಸುತ್ತಲೂ, ತನಗೆ ವಿಮುಖರಾದ ದೈತ್ಯಾದಿ ಜೀವರಿಗೆ ದೃಗ್ಗೋಚರನಾಗದೇ ಇರುವುದರಿಂದ, ಅವರು ಅಂಧಕಾರವಾದ ತಮಸ್ಸಲ್ಲೇ ಬಿದ್ದು ಕಷ್ಟಪಡುವಂತೆಯೂ, ಜೀವರ ಯೋಗ್ಯತಾ ತಾರತಮ್ಯನುಸಾರ ಶ್ರೀಪರಮಾತ್ಮನ ಈ ವಿಚಿತ್ರ ಕ್ರೀಡೆಯ ಸ್ವರೂಪವೇನು?

ಜೀವರಿಗೆ ಅಂತರ್ಯಾಮಿಯಾಗಿದ್ದು ಬಂಧನ, ಮೋಕ್ಷಗಳನ್ನು ಹೇಗೆ ಉಂಟುಮಾಡಿ, ತಾನು ನಿರ್ಲೇಪನಾಗಿ ಸಾಕ್ಷಿಸ್ವರೂಪನಾಗಿ ದೇವರು ಇರುತ್ತಾನೆ? ಈ ವಿಚಾರಗಳನ್ನು ತಿಳಿಯಲಪೇಕ್ಷಿಸುವ, ನಿಮ್ಮನ್ನು ಶ್ರದ್ಧಾಭಕ್ತಿಯಿಂದ ಆಶ್ರಯಿಸಿರುವ ನನಗೆ ಕೃಪಾಳುಗಳೂ, ಅಸದೃಶ ಬ್ರಹ್ಮಜ್ಞಾನಿಗಳೂ, ಸಾಕ್ಷಾತ್ ಬ್ರಹ್ಮದೇವರ ವಾಕ್ಯಗಳು ಹೇಗೆ ಪ್ರಮಾಣ, ಅಂದರೆ ಸತ್ಯವಾದ ವಾಕ್ಯಗಳೋ ಅದರಂತೆಯೇ ತಾವೂ ಸಕಲವನ್ನೂ ಸರಿಯಾಗಿ ವೇದವ್ಯಾಸದೇವರ ಅನುಗ್ರಹದಿಂದ ತಿಳಿದಿರುವರಾದ್ದರಿಂದ ಪ್ರಮಾಣವಾಕ್ಯಸಂಪನ್ನರೂ ಆದ ತಾವು ನನಗೆ ತಿಳಿಸಬೇಕೆಂದು ಪ್ರಾರ್ಥಿಸಿದನು.

ಎಲೈ! ಶುಕಮಹರ್ಷಿಗಳೇ! ನಾನು ಉಪವಾಸವ್ರತವನ್ನು ಕೈಕೊಂಡಿದ್ದರೂ, ನಿಮ್ಮ ಅಮೃತವಾಣಿಯನ್ನು ಕೇಳುತ್ತಿದ್ದರೆ ನನಗೆ, ಹಶಿವು ನೀರಡಿಕೆಗಳು ಬಾಧಿಸುವುದೇ ಇಲ್ಲ. ಆದ್ದರಿಂದಲೂ ತಮ್ಮಿಂದ ಭಗವತ್ಕಥಾಮೃತಪಾನ ಮಾಡಲು ಅಪೇಕ್ಷಿಸುತ್ತೇನೆ! ಎಂದನು. ವಿಷ್ಣುರಾತನೆಂದು ಪ್ರಖ್ಯಾತನಾದ, ಭಾಗವತೋತ್ತಮನೂ, ಪಾಂಡವರ ಕುಲಕ್ಕೆ ರತ್ನಪ್ರಾಯನೂ, ಆದ ಪರೀಕ್ಷಿದ್ರಾಜನ ಪ್ರಶ್ನೆಗಳ ಸುರಿಮಳೆಯನ್ನು ಕೇಳಿದ ಬ್ರಹ್ಮರಾತರೆಂದು ಪ್ರಖ್ಯಾತರಾದ ಶುಕಮಹರ್ಷಿಗಳು ಬಹಳ ಸಂತೋಷಪಟ್ಟು, ಎಲೈ! ಪರೀಕ್ಷಿದ್ರಾಜನೇ! ನೀನು ನನ್ನನ್ನು ಅತ್ಯಂತ ಶ್ರೇಷ್ಠಗಳೂ, ರಹಸ್ಯಗಳೂ, ಆದ ಭಗವನ್ಮಹಿಮೆಗಳನ್ನು ಹೇಳುವುದಕ್ಕಾಗಿ ಪ್ರೇರಿಸಿ ಸಂತೋಷಪಡಿಸಿದ್ದೀಯೆ! ನಾನು ಸಂಕಲ್ಪಿ ಸಿದ್ದ ಆ ಭಾಗವತವನ್ನೇ ನಿನಗೆ ನಿನ್ನ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಹೇಳುತ್ತೇನೆ, ಕೇಳು, ಎಂದು ಹೇಳುವುದಕ್ಕೆ ಪ್ರಾರಂಭಿಸಿದರು ಎಂದು ಸೂತಪೌರಾಣಿಕರು ಶೌನಕಾದಿಋಷಿಗಳಿಗೆ ನಿರೂಪಿಸಿದರು.

ಶ್ರೀಮದ್ಭಾಗವತ ದ್ವಿತೀಯಸ್ಕಂಧದ ಎಂಟನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು ॥

# अथ नवमोऽध्यायः

**श्री शुक उवाच**

आत्ममायामृते राजन् परस्यानुभवात्मनः ।
न घटेतार्थसम्बन्धः स्वप्ने द्रष्टुरिवाञ्जसा ॥ १ ॥

बहुरूप इवाभाति मायया बहुरूपया ।
रममाणो गुणेष्वस्या ममाहमिति मन्यते ॥ २ ॥

यर्हि चायं महित्वे स्वे परस्मिन् कालमाययोः ।
रमते गतसंमोहस्त्यक्त्वोदास्ते तदोभयम् ॥ ३ ॥

आत्मतत्वविशुध्यर्थं यदाह भगवानृतम् ।
ब्रह्मणेऽदर्शयद्रूपमव्यलीकव्रताद्दृतः ॥ ४ ॥

स आदिदेवो भजतां परो गुरुः स्वधिष्ण्यमास्थाय सिसृक्षयैक्षत ।
तान्नाध्यगच्छद् दृशमत्र सम्मतां प्रपञ्चनिर्माणविधिर्यया भवेत् ॥ ५ ॥

सञ्चिन्तयन् द्व्यक्षरमेकदाम्भस्युपाशृणोद् द्विर्गदितं वचो विभुः ।
स्पर्शेषु यच्छोडशमेकविंशं निष्किञ्चनानां नृप यद्धनं विदुः ॥ ६ ॥

निशम्य तद्वक्तृदिदृक्षया दिशो विलोक्य तत्रान्यदपश्यमानः ।
स्वधिष्ण्यमास्थाय विमृश्य तद्धितं तपस्युपादिष्ट इवादधे मनः ॥ ७ ॥

दिव्यं सहस्राब्दममोघदर्शनो जितानिलात्मा विजितोभयेन्द्रियः ।
अतप्यत स्माखिललोकतापनं तपस्तपीयांस्तपतां समाहितः ॥ ८ ॥

तस्मै स्वलोकं भगवान् सभाजितः सन्दर्शयामास परं न यत्पदम् ।
व्यपेतसंक्लेशविमोहसाध्वसं सन्दृष्टवद्भिर्विबुधैरभिष्टुतम् ॥ ९ ॥

न वर्तते यत्र रजस्तमस्तयोः सत्वञ्च मिश्रं न च कालविक्रमः ।
न यत्र माया किमुतापरे हरेरनुव्रतायत्र सुरासुरार्चिताः ॥ १० ॥

श्यामावदाताः शतपत्रलोचनाः पिशङ्गवस्त्राः सुरुचः सुपेशसः ।

## अथ नवमोऽध्यायः

सर्वे चतुर्बाहव उन्मिषन्मणिप्रवेकनिष्काभरणाः सुवर्चसः ॥ ११ ॥

प्रवालवैदूर्यमृणालवर्चसां परिस्फुरत् कुण्डलमौलिमालिनाम् ।
भ्राजिष्णुभिर्यः परितो विराजते लसद्विमानावलिभिर्महात्मनाम् ।
विद्योतमानप्रमदोत्तमाभिः सविद्युदभ्रावलिभिर्यथा नभः ॥ १२ ॥

श्रीर्यत्र रूपिण्युरुगायपादयोः करोति मानं बहुधा विभूतिभिः ।
प्रेङ्खश्रिता याः कुसुमाकरानुगैर्विगीयमाना प्रियकर्म गायती ॥ १३ ॥

ददर्श तत्राखिलसात्वतां पतिं श्रियः पतिं यज्ञपतिं जगत्पतिम् ।
सुनन्दनन्दप्रबलार्हणादिभिः स्वपार्षदमुख्यैः परिसेवितं विभुम् ॥ १४ ॥

भृत्यप्रसादाभिमुखं दृगासवैः प्रसन्नहासारुणलोचनाननम् ।
किरीटिनं कुण्डलिनं चतुर्भुजं पीतांशुकं वक्षसि लक्षितं श्रिया ॥ १५ ॥

अध्यर्हणीयासनमास्थितं विभुं वृतं चतुष्षोडशपञ्चशक्तिभिः ।
युक्तं भगैः स्वैरितरत्र चाध्रुवैः स्व एव धामन् रममाणमीश्वरम् ॥ १६ ॥

तद्दर्शनाह्लादपरिप्लुतान्तरो हृष्यत्तनुः प्रेमभराश्रुलोचनः ।
ननाम पादाम्बुजमस्य विश्वसृक् यत्पारहंस्येन पथाऽधिगम्यते ॥ १७ ॥

तं प्रीयमाणं समुपस्थितं कविं प्रजाविसर्गे निजशासनार्हणम् ।
बभाष ईषत्स्मितशोचिषा गिरा प्रियः प्रियं प्रीतमनाः करे स्पृशन् ॥ १८ ॥

**भगवानुवाच**

त्वयाऽहं तोषितः सम्यग्वेदगर्भसिसृक्षया ।
चिरं भृतेन तपसा दुस्तोषः कूटयोगिनाम् ॥ १९ ॥

वरं वरय भद्रं ते वरेशं माऽभिवाञ्छितम् ।
सर्वश्रेयः परिश्रामः पुंसां मद्दर्शनावधिः ॥ २० ॥

मनीषितानुभावोऽयं मम लोकावलोकनम् ।
यदुपश्रुत्य रहसि चकर्थ परमं तपः ॥ २१ ॥

प्रत्यादिष्टं मया तत्र त्वयि कर्मविमोहिते ।

तपो मे हृदयं साक्षादात्माऽहं तपसोऽनघ॥ २२ ॥

सृजामि तपसैवेदं ग्रसामि तपसा पुनः।
बिभर्मि तपसा विश्वं वीर्यं मे दुस्तरं तपः ॥ २३ ॥

ब्रह्मोवाचभगवन् सर्वभूतानामध्यक्षोऽवस्थितो गुहाम्।
वेद ह्यप्रतिरुद्धेन प्रज्ञानेन चिकीर्षितम्॥ २४ ॥

अथापि नाथमानाय नाथ नाथय नाथितम्।
परावरे यथा रूपे जानीयां ते त्वरूपिणः ॥ २५ ॥

यथाऽऽत्ममायायोगेन नानाशक्त्युपबृंहितः।
विलुम्पन् विसृजन् गृह्णन् बिभ्रदात्मानमात्मना॥ २६ ॥

क्रीडस्यमोघसङ्कल्प ऊर्णनाभिर्यथोर्णुते।
तथा तद्विषयां धेहि मनीषां मयि माधव॥ २७ ॥

भगवच्छिक्षितमहं करवाणि ह्यतन्द्रितः।
नेहमानः प्रजासर्गं बध्येयं यदनुग्रहात्॥ २८ ॥

यावत्सखा सख्युरिवेशते कृतः प्रजाविसर्गे विभजामि भोजनम्।
अविक्लवस्ते परिकर्मणि स्थितो मा मे समुन्नद्धमदोऽजमानिनः ॥ २९ ॥

**भगवानुवाच**

ज्ञानं परमगुह्यं मे यद्विज्ञानसमन्वितम्।
सरहस्यं तदङ्गं च गृहाण गदितं मया॥ ३० ॥

यावानहं यथाभावो यद्रूपगुणकर्मकः।
तथैव तत्त्वविज्ञानमस्तु ते मदनुग्रहात्॥ ३१ ॥

अहमेवासमग्रे च नान्यद्यत्सदसत्परम्।
पश्चादहं त्वमेतच्च योऽवशिष्येत सोऽस्म्यहम्॥ ३२ ॥

ऋतेऽर्थं यत्प्रतीयेत न प्रतीयेत चात्मनि।
तद्विद्यादात्मनो मायां यथाभासो यथातमः ॥ ३३ ॥

## अथ नवमोऽध्यायः

यथा महान्ति भूतानि भूतेषूच्चावचेषु च।
प्रविष्टान्यप्रविष्टानि तथा तेषु न तेष्वहम्॥ ३४ ॥

एतावदेव जिज्ञास्यं तत्वजिज्ञासुनाऽऽत्मनः।
अन्वयव्यतिरेकाभ्यां यत्स्यात्सर्वत्र सर्वदा॥ ३५ ॥

एतन्मतं समातिष्ठ परमेण समाधिना।
भवान् कल्पविकल्पेषु न विमुह्यति कर्हिचित्॥ ३६ ॥

**शुक उवाच**

सम्प्रदश्र्यैवमजनो जनानां परमेष्ठिनः।
पश्यतस्तस्य तद्रूपमात्मनो न्यरुणद्धरिः ॥ ३७ ॥

अन्तर्हितेन्द्रियार्थाय हरयेऽवहिताञ्जलिः।
सर्वभूतमयो विश्वं ससर्जेदं स पूर्ववत्॥ ३८ ॥

प्रजापतिर्धर्मपतिरेकदा नियमान्यमान्।
भद्रं प्रजानामन्विच्छन्नातिष्ठत्स्वार्थकाम्यया॥ ३९ ॥

तं नारदः प्रियतमो रिक्थादानामनुव्रतः।
शुश्रूषमाणः शीलेन प्रश्रयेण दमेन च॥ ४० ॥

मायां विविदिषुर्विष्णोः मायेशस्य महामुनिः।
महाभागवतो राजन् पितरं पर्यतोषयत्॥ ४१ ॥

तुष्टं निशाम्य पितरं लोकानां प्रपितामहम्।
देवर्षिः परिपप्रच्छ भवान्यन्माऽनुपृच्छति॥ ४२ ॥

तस्मा इदं भागवतं पुराणं दशलक्षणम्।
प्रोक्तं भगवता प्राह प्रीतः पुत्राय भूतकृत्॥ ४३ ॥

नारदः प्राह मुनये सरस्वत्यास्तटे नृप।
ध्यायते ब्रह्म परमं व्यासायामिततेजसे॥ ४४ ॥

यदुताहं त्वया पृष्टो वैराजात्पुरुषादिदम्।
यथाऽऽसीत्तदुपाख्यास्ये प्रश्नानन्यांश्च कृत्स्नशः ॥ ४५ ॥

अथ नवमोऽध्यायः

## ॥ इति श्रीमद्भागवते (द्वितीयस्कन्धे(*2) नवमोऽध्यायः ॥

### ॥ ಒಂಭತ್ತನೆಯ ಅಧ್ಯಾಯ ॥

ಈ ಅಧ್ಯಾಯದಲ್ಲಿ ಚತುರ್ಮುಖ ಬ್ರಹ್ಮದೇವರಿಗೆ ಪರಮಾತ್ಮನ ಅನುಗ್ರಹದಿಂದ ಪರಮಾತ್ಮನ ಲೋಕದ ದರ್ಶನವೂ, ಅಲ್ಲಿ ಪರಮಾತ್ಮನ ರೂಪದರ್ಶನವೂ, ಪ್ರಕೃತ್ಯಾದಿ ನಿಖಿಳ ಜಗತ್ತೂ ಭಗವದಧಿ ೀನವೆಂದೂ, ದೇವರು ಸರ್ವೋತ್ತಮನೆಂದೂ, ದೇವರಲ್ಲಿ ಭಕ್ತಿಮಾಡಿದರೆ ದೇವರ ಮನಸ್ಸಿನಲ್ಲಿ, ಭಕ್ತಿ ಮಾಡುವವರ ಮೇಲೆ ಪ್ರೀತಿಯುಂಟಾಗುವುದೆಂದೂ, ಆ ಪ್ರೀತಿಯಿಂದ ಭಗವದನುಗ್ರಹವೂ, ಮೋಕ್ಷವೂ ಲಭಿಸುವುದೆಂದು ಪ್ರತಿಪಾದಿಸಲ್ಪಡುತ್ತದೆ.

ಹಿಂದಿನ ಅಧ್ಯಾಯದಲ್ಲಿ ಪರೀಕ್ಷಿದ್ರಾಜನು ಮಾಡಿದ ಪ್ರಶ್ನೆಗಳಿಗೆ ಶುಕಋಷಿಗಳು ಉತ್ತರಗಳನ್ನು ಹೇಳುತ್ತಾರೆ:- ಎಲೈ ಪರೀಕ್ಷಿದ್ರಾಜನೇ! ಪ್ರಕೃತ್ಯಾದಿ ಗುಣಗಳಿಗೆ ಬೇರೆಯಾದ ಸ್ವಾನುಭವ ವುಳ್ಳ ಜ್ಞಾನಸ್ವರೂಪನಾದ ಜೀವನಿಗೆ, ಈ ಪಂಚಭೂತಾತ್ಮಕ ಶರೀರ ಸಂಬಂಧವೂ, ಈ ಸಂಬಂಧದಿಂದ ಹಶಿವು, ತೃಷೆ, ಆಲಸ್ಯ, ಶೀತೋಷ್ಣ, ಜರೆ, ರೋಗ, ನೋವು ಮುಂತಾದ ಭೂತಸಂಬಂಧವಾದ ವ್ಯಥೆಗಳೂ, ಸತ್ವರಜಸ್ತಮಾದಿ ಗುಣಗಳ ಸಂಬಂಧದಿಂದ ಸುಖದುಃಖಾನುಭವಗಳೂ, ಶ್ರೀಪರಮಾತ್ಮನ ಇಚ್ಛೆಯಿಂದಲೂ, ಗುಣ ಸಹಿತವಾದ ಪ್ರಕೃತಿಗೆ ಅಭಿಮಾನಿಯಾದ ಲಕ್ಷ್ಮೀದೇವಿಯ ಇಚ್ಛೆಯಿಂದಲೂ ಉಂಟಾಗುತ್ತವೆ. ಸ್ವಪ್ನದಲ್ಲಿ ನೋಡುವ ಪದಾರ್ಥಗಳು ಬೇರೆ ಬೇರೆ ಸತ್ಯವಾಗಿ ಕಾಣುವುದಾದರೂ, ಸ್ವಪ್ನ ನೋಡುವವನಿಗೆ ಹೇಗೆ ಸಂಬಂಧವಿಲ್ಲದೇ ಬೇರೆ ಬೇರೆ ಇರುವುವೋ, ಅದರಂತೆ ಬೇರೆ ಶರೀರರಹಿತನಾದವನೂ, ಜ್ಞಾನಮಯ ಸ್ವರೂಪಶರೀರ ವುಳ್ಳವನೂ ಆದ ಜೀವನಿಗೆ, ಈ ಪ್ರಕೃತಿಮಯವಾದ ಪಂಚಭೂತಾದಿ ಪದಾರ್ಥಗಳ ಸಂಬಂಧವು ದೇಹರೂಪದಿಂದ ಪರಮಾತ್ಮನ ಇಚ್ಛಾದಿಂದ ಉಂಟಾಗಬೇಕೇ ಹೊರತು ಅನ್ಯಥಾ ಪ್ರಕೃತಿ ಪದಾರ್ಥಗಳು ಜೀವನನ್ನು ಮುಟ್ಟಲು ಸಮರ್ಥಗಳಲ್ಲ.

ಜೀವನು ಅನಾದಿಕಾಲದಿಂದ ತ್ರಿಗುಣಾತ್ಮಕವಾದ ಷೋಡಶಕಲೆಗಳಿಂದ ಕೂಡಿದ ಲಿಂಗಶರೀರವೆಂಬ ಪ್ರಕೃತಿಬಂಧನದಲ್ಲಿ ಸಿಕ್ಕಿ, ಲಿಂಗದೇಹ ಸಂಬಂಧದಿಂದ ನಾನು, ನನ್ನದು ಎಂಬ ಅಹಂಭಾವನೆಯಿಂದ ಕೂಡಿರುವುದರಿಂದಲೂ, ಜೀವನು ಚೇತನಸ್ವರೂಪನಾಗಿ ಮಾನಸಿಕ ಜ್ಞಾನೇಚ್ಛಾಕ್ರಿಯಾದಿಗಳನ್ನು ಮಾಡಿ ಅನಾದಿಯಿಂದ ಕರ್ಮಸಹಿತನಾಗಿ, ಅಭಿವ್ಯಕ್ತಿ ಇಲ್ಲದೇ ಇದ್ದದ್ದರಿಂದ ಈ ಜೀವರು ಅನಾದಿ ಸ್ವಭಾವಾನುಸಾರವಾಗಿ, ದೇವಮಾನವ, ದೈತ್ಯ, ಖೇಚರ, ಭೂಚರ, ಜಲಚರ, ತಿರ್ಯಗ್ಜನ್ಮರೂಪಗಳಾದ

ಅನಂತಾನಂತ ದೇಹಗಳನ್ನು ವಿಕಾರಹೊಂದುವ ಸ್ವಭಾವವುಳ್ಳ ಪ್ರಕೃತಿಯಿಂದ ಸೃಷ್ಟಿಸಿ, ಬೇರೆ ಬೇರೆ ಜೀವರಿಗೆ ಸಂಬಂಧಮಾಡುವನು. ಈ ಶರೀರಸಂಬಂಧವೇ ಜೀವರಿಗೆ ಹುಟ್ಟುವಿಕೆ ಎನ್ನಿಸುತ್ತದೆ.

ಹೀಗೆ ಶರೀರಸಹಿತನಾಗಿ ಹುಟ್ಟಿದ ಜೀವನು ಜ್ಞಾನಭಕ್ತಿವೈರಾಗ್ಯಗಳನ್ನು ಸಂಪಾದಿಸಿ, ಶ್ರೀಪರಮಾತ್ಮನನ್ನು ಆರಾಧಿಸಿ, ಆತನ ಪ್ರಸಾದದಿಂದ ತಾನು ಶ್ರೀಪರಮಾತ್ಮನ ಭೃತ್ಯನೆಂದೂ, ಸಚ್ಚಿದಾನಂದ ಸ್ವರೂಪನೆಂದೂ, ಉಪಾಸನೆ ಮಾಡಿ ತಿಳಿದರೆ, ಅನಂತರ ಈ ಶರೀರಸಂಬಂಧದಿಂದ ಬಿಡುಗಡೆ ಹೊಂದಿ ಮುಕ್ತನಾಗುವನು. ಜೀವನು ತಿಳಿಯಬೇಕಾದ ಜ್ಞಾನ, ಭಕ್ತಿ, ವೈರಾಗ್ಯಗಳ ಸ್ವರೂಪವನ್ನು ಆದಿಯಲ್ಲಿ ಭಾಗವತವೆಂಬ ಸರ್ವವೇದಾರ್ಥ ಸ್ವರೂಪವಾದ ಜ್ಞಾನವನ್ನು ಶ್ರೀಪರಮಾತ್ಮನು ಬ್ರಹ್ಮದೇವರಿಗೆ ಉಪದೇಶಿಸಿದನು.

## ಚತುರ್ಮುಖ ಬ್ರಹ್ಮದೇವರ ತಪಸ್ಸು

ಪದ್ಮನಾಭನಾದ ನಾರಾಯಣನು ಚತುರ್ಮುಖ ಬ್ರಹ್ಮದೇವರನ್ನು ತನ್ನ ನಾಭಿಕಮಲದಲ್ಲಿ ಸೃಷ್ಟಿಸಿ, ತನ್ನ ಲೋಕವನ್ನು ಬ್ರಹ್ಮದೇವರಿಗೆ ದರ್ಶನಮಾಡಿಸಿ, ನಂತರ ಜಗತ್ಸೃಷ್ಟಿ ಮಾಡೆಂದು ಬ್ರಹ್ಮದೇವರಿಗೆ ಹೇಳಿ ಅದೃಶ್ಯನಾದನು. ನಂತರ ಬ್ರಹ್ಮದೇವರು ಕಮಲಮಧ್ಯದಲ್ಲಿ ಕುಳಿತು, ದೇವರು ಜಗತ್ಸೃಷ್ಟಿ ಮಾಡೆಂದು ಹೇಳಿದ್ದನ್ನು ಹ್ಯಾಗೆ ಮಾಡಬೇಕೆಂದು ಯೋಚಿಸುತ್ತಾ ಕುಳಿತಿದ್ದರು. ಆವಾಗ ಅಶರೀರವಾಣಿಯಿಂದ ಹದಿನಾರನೆಯ ಸ್ಪರ್ಶಾಕ್ಷರವಾದ 'ತ 'ಎಂದೂ, ಇಪ್ಪತ್ತೊಂದನೆಯ ಸ್ಪರ್ಶಾಕ್ಷರವಾದ 'ಪ 'ಎಂದೂ, ಎಂದರೆ 'ತಪ 'ಎಂದು ಶಬ್ದವಾಯಿತು.

ಬ್ರಹ್ಮದೇವರು ಎಲ್ಲಾ ದಿಕ್ಕುಗಳಲ್ಲೂ ನೋಡಿ ಯಾರನ್ನೂ ಕಾಣದೆ, ಈ ಶಬ್ದವು ಅಶರೀರವಾಣಿ ಎಂದು ತಿಳಿದರು. ನಂತರ ಪರಮಾತ್ಮನು ತಮ್ಮನ್ನು ತಪಸ್ಸು ಮಾಡೆಂದಾಜ್ಞಾಪಿಸಿರುವನೆಂದರಿತು, ದಿವ್ಯ ಸಹಸ್ರವರ್ಷಗಳು ಘೋರವಾದ ತಪಸ್ಸನ್ನು ಮಾಡಿದರು. ಜ್ಞಾನೇಂದ್ರಿಯ ಕರ್ಮೇಂದ್ರಿಯ ಮನಸ್ಸುಗಳನ್ನು ನಿಶ್ಚಲವಾಗಿ ಭಗವಂತನ ಧ್ಯಾನದಲ್ಲೇ ಇಟ್ಟು, ಹಿಂದಿನ ಬ್ರಹ್ಮಕಲ್ಪದಲ್ಲಿ ಜಗತ್ಸೃಷ್ಟಿಯು ಹೇಗೆ ಮಾಡಲ್ಪಟ್ಟಿತ್ತು ಎಂಬುವುದನ್ನು ಧ್ಯಾನಿಸಿ ಸಾಕ್ಷಾತ್ಕಾರ ಮಾಡಿಕೊಂಡರು. ನಂತರ ಶ್ರೀಪರಮಾತ್ಮನು ಇವರ ತಪಸ್ಸಿಗೆ ಮೆಚ್ಚಿ ತನ್ನ ಲೋಕದ ದರ್ಶನವನ್ನು ಕೊಟ್ಟನು.

## ಬ್ರಹ್ಮದೇವರಿಗೆ ಭಗವದ್ದರ್ಶನ

ಹೃತ್ಕಮಲದಲ್ಲಿ ಅತ್ಯಂತ ಉತ್ತಮವಾಗಿ ಪರಮಾತ್ಮನ ಸಂದರ್ಶನವನ್ನು ಮಾಡುತ್ತಿದ್ದ ಇವರಿಗೆ ದೇಹಾಯಾಸವಾಗಲೀ, ರಾಗದ್ವೇಷಗಳೆಂಬ ಅವಿದ್ಯಾಸಂಬಂಧಗಳಾದ ಕ್ಲೇಶಗಳಾಗಲೀ, ಇಂದ್ರಿಯ

## अथ नवमोऽध्यायः

ಕುಗ್ಗುವಿಕೆ ಎಂಬ ಮೌಢ್ಯವಾಗಲೀ, ವ್ಯಾಕುಲವಾಗಲೀ ಇರಲಿಲ್ಲ. ಕಾರಣವೇನೆಂದರೆ? ಪರಮಾತ್ಮನಿಂದ ಬ್ರಹ್ಮದೇವರಿಗೆ ತೋರಿಸಲ್ಪಟ್ಟ ತನ್ನ ಲೋಕದಲ್ಲಿ, ರಜಸ್ತಮೋಮಿಶ್ರ ಸತ್ವ, ಸತ್ವತಮೋಮಿಶ್ರ ರಜ, ಸತ್ವರಜೋಮಿಶ್ರಿತ ತಮಸ್ಸಾಗಲೀ ಇಲ್ಲ. ಕಾಲಕೃತ ಉತ್ಪತ್ತಿಕ್ಷಯಾದಿ ಲಕ್ಷಣಗಳೂ ಈ ಲೋಕದಲ್ಲಿಲ್ಲ. ಆದುದರಿಂದ ಆ ಲೋಕದರ್ಶನದಿಂದ ಬ್ರಹ್ಮದೇವರಿಗೆ ಭಕ್ತ್ಯುದ್ರೇಕವಾದ ಪರಮ ಆನಂದ ಮಾತ್ರವೇ ಇತ್ತು. ಸಕಲದೇವತೆಗಳಿಂದಲೂ, ದೈತ್ಯರಿಂದಲೂ ಅರ್ಚಿತರಾದ ನಿರ್ದೋಷರಾದ, ನಿರ್ಮಲವಾದ ಇಂದ್ರನೀಲಮಣಿ ಸದೃಶದೇಹಕಾಂತಿಯುಳ್ಳವರೂ, ಸುಕುಮಾರತರಶರೀರರೂ, ಕಮಲದಳದಂತೆ ಕಣ್ಣುಳ್ಳವರೂ, ರತ್ನಗಳಂತೆ ಹೊಳೆಹೊಳೆಯುವ ದೃಷ್ಟಿಯುಳ್ಳವರೂ, ವರ್ಚಸ್ವಿಗಳೂ, ನಿಷ್ಕಾಭರಣಧಾರಿಗಳೂ, ನಾಲ್ಕು ಭುಜ ವುಳ್ಳವರೂ, ಆದ ಸಾರೂಪ್ಯವನ್ನು ಹೊಂದಿದವರೇ ಅಲ್ಲಿ ಪ್ರಜೆಗಳಾಗಿದ್ದರು.

ಅವರಲ್ಲಿ ಕೆಲವರು ಸ್ವಚ್ಛವಾದ ಹವಳಕಾಂತಿಯಂತೆಯೂ, ಕೆಲವರು ವೈಢೂರ್ಯಕಾಂತಿಯಂತೆಯೂ, ಕೆಲವರು ರತ್ನದಂತೆ ದೇಹಕಾಂತಿಯುಳ್ಳವರಾಗಿದ್ದರು. ಹೊಳೆಹೊಳೆಯುವ ಕಿರೀಟಕುಂಡಲಾದಿಗಳಿಂದ ಶೋಭಿಸುತ್ತ, ಪರಮಸುಂದರರಾದ ಸರ್ವಾಭರಣಭೂಷಿತೆಯರಾದ ಯೌವ್ವನವತಿಯರಾದ, ಆಕಾಶದಲ್ಲಿ ಮಿಂಚುಗಳೋ ಎಂಬಂತೆ ಪ್ರಕಾಶಮಾನರಾದ ತರುಣಿಯರಿಂದ ಸಹಿತರಾಗಿ ಅನೇಕ ದಿವ್ಯವಿಮಾನಗಳಲ್ಲಿ ಇವರು ಕುಳಿತು ಸಂಚಾರ ಮಾಡುತ್ತಿದ್ದರು.

ರತ್ನಖಚಿತವಾದ ದಿವ್ಯಾಲಂಕಾರ ಪುಷ್ಪಗಳಿಂದ ಜಾಜ್ವಲ್ಯಮಾನವಾಗಿ ಹೊಳೆಯುತ್ತಿದ್ದ ಉಯ್ಯಾಲೆಯ ಮೇಲೆ ಶ್ರೀಪರಮಾತ್ಮನು, ತನ್ನ ಪಾದಸೇವೆಯನ್ನು ನಾನಾ ವಿಧವಾಗಿ ಮಾಡಲು ಉತ್ಸಾಹದಿಂದ ಅನೇಕ ರಮಣೀಯ, ಕಮನೀಯ, ಸಾರಸೌಂದರ್ಯ ಮನೋಹರ ದಿವ್ಯರೂಪಗಳಿಂದ ಇರುವ ಶ್ರೀದೇವಿಯರಿಂದ ಸಹಿತನಾಗಿ, ಸುಖಮಯ ಪರ್ಯಂಕದಲ್ಲಿ ಮಲಗಿದ್ದನು. ಪರಮಾತ್ಮನ ಪಾದಕಮಲಕ್ಕೆ ಭೃಂಗರೋ ಎಂಬಂತೆ, ಪೂರ್ವಕಲ್ಪದ ಬ್ರಹ್ಮವಾಯ್ವಾದಿಗಳು, ಲಕ್ಷ್ಮೀದೇವಿಯರ ಪತಿಯೂ, ತಮ್ಮ ಪ್ರಿಯತಮ ಸ್ವಾಮಿಯೂ, ಆದ ಲೋಕಪತಿ, ಯಜ್ಞಪತಿಯಾದ ಶ್ರಿಯಃಪತಿಯ ಗುಣಕರ್ಮಕ್ರಿಯಾದಿಗಳ ವರ್ಣನಾರೂಪ ವೇದಗಾನವನ್ನು ಸುಸ್ವರ, ತಾಳ, ಲಯ, ಗತ್ತುಗಳಿಂದ ಇಂಪಾಗಿ ಮಾಡುತ್ತಿದ್ದುದನ್ನು, ಅನೇಕರೂಪದಿಂದ ಇದ್ದ ಶ್ರೀದೇವಿಯರು ಕೇಳುತ್ತಾ, ತಾವೂ ಅದೇ ರೀತಿಯಲ್ಲಿ ಪರಮಾತ್ಮನನ್ನು ಸ್ತುತಿಸುತ್ತಿದ್ದರು. ಇಂತಹ ಶ್ವೇತದ್ವೀಪವೆಂಬ ಮುಕ್ತನಿವಾಸಸ್ಥಾನವನ್ನೂ, ಅಲ್ಲಿನ ವೈಭವಗಳನ್ನೂ, ತನ್ನನ್ನೂ ಬ್ರಹ್ಮದೇವರ ದೃಷ್ಟಿಗೆ ಗೋಚರವಾಗುವಂತೆ ದೇವರು ಮಾಡಿದನು.

## अथ नवमोऽध्यायः

ಸುನಂದ, ನಂದ, ಪ್ರಬಲಾದಿ ದ್ವಾರಪಾಲಕರುಗಳೂ ಸುತ್ತಲೂ ನಿಂತು ಸೇವಿಸುತ್ತಿದ್ದರು. ಶ್ರೀಪರಮಾತ್ಮನು ಪ್ರಸನ್ನವಾದ, ಮಂದಹಾಸದಿಂದ ಕೂಡಿ, ತನ್ನ ಪರಮಪ್ರಿಯ ಭಕ್ತನಾದ ಬ್ರಹ್ಮದೇವರಲ್ಲಿ ಅತ್ಯುತ್ತಮ ಪ್ರಸಾದಮಾಡಲು ಇಚ್ಚಿಸಿರುವ, ಅರುಣಕಾಂತಿಯಂತೆ ಕೆಂಪಾಗಿರುವ ಮುಖ ವುಳ್ಳವನಾಗಿಯೂ, ದೃಷ್ಟಿಗೆ ಪಾತ್ರರಾದವರ ಮೇಲೆ ಅಮೃತವೃಷ್ಟಿಯನ್ನು ಕರೆಯುವವೋ ಎಂಬಂತೆ ಇದ್ದ ಕಣ್ಣಿನ ನೋಟದಿಂದಲೂ, ಬ್ರಹ್ಮದೇವರನ್ನು ನೋಡಿದನು.

ಶ್ರೀಪರಮಾತ್ಮನು ದಿವ್ಯ ಕಿರೀಟ, ಕುಂಡಲಧಾರಿಯಾಗಿಯೂ, ನಾಲ್ಕು ಭುಜಗಳುಳ್ಳವನಾಗಿಯೂ, ಪೀತಾಂಬರಧಾರಿಯಾಗಿ, ವಕ್ಷದಲ್ಲಿ ಲಕ್ಷ್ಮೀ ವಾಸಸ್ಥಳವಾದ ಶ್ರೀವತ್ಸಚಿನ್ಹೆಯಿಂದ ಕೂಡಿದವನಾಗಿಯೂ, ಇಚ್ಛಾ, ಜ್ಞಾನ, ಬಲ, ಕ್ರಿಯಾ ಎಂಬ ನಾಲ್ಕು ಶಕ್ತಿಗಳಿಂದಲೂ ಪ್ರಹ್ವೀ, ಸತ್ಯಾ, ಈಶಾನಾ, ಅನುಗ್ರಹಾ ಮತ್ತು ಅಂತರಾತ್ಮ, ಜ್ಞಾನಾತ್ಮ, ಪರಮಾತ್ಮ ಎಂಬ ನಾಲ್ಕು ನಾಲ್ಕು ಶಕ್ತಿಗಳಿಂದಲೂ, ವಾಸುದೇವಾದಿ ದಾಮೋದರಾಂತ ಹದಿನಾರು ಶಕ್ತಿಗಳಿಂದಲೂ, ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಯೋಗ, ಕ್ರಿಯಾ ಎಂಬ ಐದುಶಕ್ತಿಗಳಿಂದಲೂ, ಚಾಮರ, ವ್ಯಜನ, ದಂಡಾದಿಗಳಿಂದ ಸುತ್ತಲೂ ಸೇವಿಸಲ್ಪಡುತ್ತಿದ್ದನು. ಈ ರೀತಿಯಾಗಿ ಸ್ವಮೂರ್ತಿಗಣಮಧ್ಯನಾಗಿಯೂ, ಪೂರ್ಣಷಡ್ಗುಣೈಶ್ವರ್ಯ ಸಂಪನ್ನನಾಗಿಯೂ, ತಾನೇ ತನ್ನ ಅನೇಕ ರೂಪಗಳಿಂದ ಸೇವಕಸೇವ್ಯ ಸ್ವರೂಪನಾಗಿ, ದಿವ್ಯ ವಜ್ರವೈಢೂರ್ಯಾದಿ ರಚಿತ ಪೀಠದಲ್ಲಿ ಮಲಗಿರುವ ದೇವರನ್ನು ಬ್ರಹ್ಮದೇವರು ನೋಡಿ, ಭಕ್ತಿ ಉದ್ರೇಕ ವುಳ್ಳವರಾಗಿ, ಆನಂದಬಾಷ್ಪ ಗಳಿಂದ ತುಂಬಿದ ಕಣ್ಣುಗಳುಳ್ಳವರಾಗಿ, ಪರಮಪ್ರೇಮ ಭರಿತವಾದ ಉತ್ಸಾಹದಿಂದ ದೇವರಿಗೆ ನಮಸ್ಕರಿಸಿದರು. ಶ್ರೀಪರಮಾತ್ಮನು ತನ್ನ ಕರಕಮಲದಿಂದ ಬ್ರಹ್ಮದೇವರ ಶಿರಸ್ಸನ್ನು ಮುಟ್ಟಿ ಸವರಿ, ನಂತರ ಈ ರೀತಿ ಮಾತನಾಡಿದನು:-

## ಬ್ರಹ್ಮದೇವರಿಂದ ಸೃಷ್ಟಿಗಾಗಿ ಆಜ್ಞಾಪನೆ

ಎಲೈ! ಬ್ರಹ್ಮನೇ! ನಿನ್ನಅನುಪಮವಾದತಪಸ್ಸಿಗೂ, ಭಕ್ತಿಗೂನಾನುಪ್ರಸನ್ನನಾಗಿಸಂತೋಷಪಟ್ಟಿದ್ದೇನೆ! ನೀನು ಸೃಷ್ಟಿಮಾಡಬೇಕೆಂದಿರುವ ಸಕಲ ಪ್ರಪಂಚದ ವಸ್ತುಗಳೂ ನಿನ್ನಿಂದ ನಿರ್ವಿಘ್ನದಿಂದ ಸೃಷ್ಟಿಸಲ್ಪಡಲಿ. ನನ್ನಿಂದ 'ಸೃಷ್ಟಿಮಾಡು! 'ಎಂದಾಜ್ಞಾಪಿಸಲ್ಪಟ್ಟ ನೀನು ಸಕಲ ಸೃಷ್ಟಿ ಮಾಡುವುದಕ್ಕೂ ಯೋಗ್ಯನಾಗಿದ್ದೀಯೆ! ಪ್ರಸನ್ನನಾದ ನನ್ನಿಂದ ನಿನಗೆ ಬೇಕಾದ ವರಗಳನ್ನು ಬೇಡು, ಕೊಡುತ್ತೇನೆ. ಉತ್ಕೃಷ್ಟವಾದ ತಪಸ್ಸಿಗೆ ಉತ್ತಮೋತ್ತಮ ಫಲವು ನನ್ನ ದರ್ಶನವು ಆಗಿರುತ್ತದೆ. ನನ್ನ ದರ್ಶನವೇ ಸಮಸ್ತ ತಪಸ್ಸುಗಳಿಗೂ ಕೊನೆಯಗಿರುತ್ತೆ. ಅಂತಹ ದಿವ್ಯದರ್ಶವನ್ನು ನೀನು ಹೊಂದಿರುತ್ತಿ. ನನ್ನಿಂದ ಪ್ರಜಾಸೃಷ್ಟಿ ಮಾಡೆಂದು ಆಜ್ಞಾಪಿಸಲ್ಪಟ್ಟ ನೀನು, ಕರ್ತವ್ಯಮೂಢನಂತೆ ಯೋಚನಾಪರನಾಗಿದ್ದಾಗ, 'ತಪ 'ಎಂದು ನಾನು

ಹೇಳಿದ ಮಾತಿನಲ್ಲಿ ಶ್ರದ್ಧೆ ಇಟ್ಟವನಾಗಿ ನೀನು ಮಹಾತಪಸ್ಸು ಮಾಡಿ, ತಪೋಸ್ವರೂಪನಾದ ನನ್ನನ್ನೂ, ಈ ನನ್ನ ಲೋಕವನ್ನೂ ನೋಡಿರುತ್ತೀಯೆ. ತಪಸ್ಸು ನನಗೆ ಅತ್ಯಂತ ಪ್ರಿಯವಾದದ್ದು. ನಾನೇ ಸ್ವಯಂ ತಪಸ್ಸು ಮಾಡಿ ಸಕಲ ಸೃಷ್ಟಿ, ಸ್ಥಿತಿ, ಪ್ರಲಯ, ಸರ್ಗವೆಂಬ ಜೀವರಿಗೆ ಪ್ರಕೃತಿಸಂಬಂಧ, ಮಹಾವಿಭೂತಿ, ವೃತ್ತಿ, ಜ್ಞಾನಪ್ರಕಾಶ, ಆವೃತಿ ಎಂಬ ವ್ಯಾಪ್ತಿ, ನಿಯಮ, ಬಂಧನ, ಮೋಕ್ಷಗಳನ್ನುಂಟು ಮಾಡುವೆನು. ತಪಸ್ಸೇ ನನ್ನ ಅಚಿಂತ್ಯಾದ್ಭುತಶಕ್ತಿಯು ಎಂದನು.

## ವಿನಯಪೂರ್ವಕ ವರ ಬೇಡಿಕೆ

ನಂತರ ಬ್ರಹ್ಮದೇವರು-ಎಲೈ! ಸರ್ವಭೂತಾಂತರ್ಯಾಮಿಯಾಗಿ, ಸರ್ವಜೀವರ ಹೃದಯದಲ್ಲಿದ್ದು, ಸರ್ವಜ್ಞನಾದ ನೀನು ನನ್ನ ಮನಸ್ಸಿನ ಬಯಕೆ ಏನೆಂಬುದನ್ನು ಸಂಪೂರ್ಣವಾಗಿ ತಿಳಿದಿದ್ದೀಯೆ! ಆದರೂ ಲೋಕವಿಡಂಬನೆಯನ್ನನುಕರಿಸಿ ವರವನ್ನು ಬೇಡಿಕೋ! ಎಂದು ನನ್ನನ್ನು ಆಜ್ಞಾಪಿಸುತ್ತಿದ್ದಿ. ನಿನ್ನ ಆಜ್ಞೆಯಂತೆ ಬೇಡಿದಂತೆ ವರಗಳನ್ನು ಕೊಡುವ ನಿನ್ನನ್ನು ಪ್ರಾರ್ಥಿಸುತ್ತೇನೆ ಪ್ರಜೆಗಳನ್ನೂ, ಲೋಕಗಳನ್ನೂ ನಾನು ಸೃಷ್ಟಿಸಲು ಅನುಕೂಲವಾಗುವಂತೆ, ನನಗೆ ನಿನ್ನ ಹದಿನಾಲ್ಕು ಲೋಕಗಳನ್ನೂ ಧರಿಸಿರುವ ವಿರಾಡ್ರೂಪವನ್ನೂ, ನಿನ್ನಿಂದ ಪ್ರತ್ಯೇಕಗಳಾದ ಆ ಹದಿನಾಲ್ಕು ಲೋಕಗಳನ್ನೂ, ಅಲ್ಲಿರುವ ಸಮಸ್ತ ವಸ್ತುಗಳನ್ನೂ ಧ್ಯಾನಗೋಚರವಾಗುವಂತೆ ಮಾಡಿ ಅನುಗ್ರಹಿಸು.

ಎರಡನೆಯದಾಗಿ ಈ ಬ್ರಹ್ಮಾಂಡದ ಹೊರಭಾಗದಲ್ಲಿ ನವಾವರಣಗಳಲ್ಲೂ ವ್ಯಾಪ್ತವಾದ ನಿನ್ನ ರೂಪದರ್ಶನವನ್ನನುಗ್ರಹಿಸು. ಮೂರನೆಯದಾಗಿ, ಜನ್ಮಾದಿದೋಷರಹಿತನೂ, ಅಪ್ರಾಕೃತನೂ ಆದ ನೀನು ಯಾವ ರೀತಿಯಲ್ಲಿ ಚಿತ್ಪ್ರಕೃತಿಯನ್ನೂ ಜಡಪ್ರಕೃತಿಯನ್ನೂ ನಿನ್ನಧೀನವನ್ನಾಗಿ ಮಾಡಿಕೊಂಡು, ಪ್ರಾಕೃತ ಸತ್ವಾದಿಗುಣರಹಿತನಾದ ನೀನು, ಸತ್ತ್ವರಜಸ್ತಮೋಗುಣಗಳಲ್ಲಿ ಪ್ರವೇಶಿಸಿ, ಅವ್ಯಕ್ತತತ್ವದಿಂದ, ಮಹದಹಂಕಾರ ತತ್ವಗಳನ್ನೂ, ಭೂತೇಂದ್ರಿಯ ಮನಸೃಷ್ಟಿಯನ್ನೂ, ಸಕಲ ದೇವ, ದಾನವ, ಋಷಿ, ಮನುಷ್ಯ ತಿರ್ಯಗ್ರೂಪಗಳನ್ನೂ ಯಾವ ರೀತಿ ಸೃಷ್ಟಿಸುತ್ತಿದ್ದೀಯೋ, ಆ ವಿಧಾನವೆಲ್ಲವೂ ನನ್ನ ದೃಷ್ಟಿಗೆ ಗೋಚರವಾಗುವಂತೆ ಅನುಗ್ರಹಿಸು.

ಈ ರೀತಿ ನಿನ್ನಿಂದ ಶಿಕ್ಷಿತನಾದ ನಾನು, ನಿನ್ನ ಆಜ್ಞಾನುಸಾರ, ನಿನ್ನಿಂದ ಕೊಡಲ್ಪಟ್ಟ ಸೃಷ್ಟಿ ಮಾಡುವ ಅಧಿಕಾರದಿಂದ ನಿನ್ನ ಪ್ರೀತ್ಯರ್ಥವಾಗಿ ನಿನ್ನ ಪ್ರಜಾರೂಪವಾಗಿ, ಸಕಲ ಪದಾರ್ಥಗಳ ಸೃಷ್ಟಿಯನ್ನು ಮಾಡುವಾಗ, ನನಗೆ ನಾನೇ ಸೃಷ್ಟ್ಯಾದಿ ಕರ್ತ ಎಂಬ ಅಜ್ಞಾನವೂ, ದುರಭಿಮಾನವೂ ಬಾರದಿರಲಿ! ನನ್ನ ವಿಜ್ಞಾನವು ಸದಾ ನಿನ್ನ ವಿಷಯಕವಾಗಿಯೇ ಇದ್ದು, ಈ ಪ್ರಾಕೃತಸೃಷ್ಟ್ಯಾದಿ ಕರ್ಮಗಳು ನನಗೆ

ಬಂಧಕವಾಗದಿರಲಿ! ಎಂದನು.

ಇದನ್ನು ಕೇಳಿ ಶ್ರೀಪರಮಾತ್ಮನು, ಎಲೈ! ಬ್ರಹ್ಮನೇ! ನೀನು ಕೇಳಿದ ವರಗಳಂತೆ ನಾನು ಅನುಗ್ರಹಿಸಿ ನಿನಗೆ ತೋರಿಸುವ ನನ್ನ ವಿರಾಡ್ರೂಪಾದಿ, ಮೂರು ರೂಪಗಳ ಸ್ವರೂಪವನ್ನೂ, ಮಹಿಮೆಗಳನ್ನೂ ಸಹ ನೀನು ಚೆನ್ನಾಗಿ ತಿಳಿಯುವುದಕ್ಕೆ ಸಹಕಾರಿಯಾದ, ಸರ್ವವೇದಸಾರರೂಪ ರಹಸ್ಯ ಪ್ರಮೇಯಗಳನ್ನೂ ನಿನಗೆ ಸೂಕ್ಷ್ಮವಾಗಿ ಬೋಧಿಸುತ್ತೇನೆ, ಕೇಳು ಎಂದು ಹೇಳಿ ಈ ರೀತಿ ಉಪದೇಶ ಮಾಡಿದನು:- ಎಲೈ! ಬ್ರಹ್ಮನೇ! ಈಗ ನಾನು ಹೇಳುವುದು ಬಹಳ ಏಕಾಂತವಾದ ರಹಸ್ಯಜ್ಞಾನವು. ವಿಜ್ಞಾನಸ್ವರೂಪವು. ಇವುಗಳನ್ನು ತಿಳಿಸುವ ಅಂಗಗಳನ್ನೂ ಸಹ ನಿರೂಪಿಸುತ್ತೇನೆ. ಇದರಿಂದ ನಾನು ಸ್ವರೂಪತಃ ಹೇಗಿರುವೆನೆಂಬುದೂ ನನ್ನ ಸ್ವಭಾವ, ಗುಣ, ರೂಪ, ಕ್ರಿಯಾದಿಗಳ ಲಕ್ಷಣವೇನೆಂಬುದೂ ನಿನಗೆ ತಿಳಿಯುತ್ತೆ.

## ಚತುಶ್ಲೋಕೀ ಭಾಗವತ

ಚತುಃ ಶ್ಲೋಕೇ ಭಾಗವತ ಸೃಷ್ಟಿಗೆ ಪೂರ್ವದಲ್ಲಿ ನಾನೊಬ್ಬನೇ ಇದ್ದೆನು. ನನ್ನಧೀನವಾಗಿ ಅನಾದಿಯಿಂದ ಕಾಲವೂ, ಸತ್, ಅಸತ್‌ಗಳೆಂಬ ಚಿತ್, ಜಡಪ್ರಕೃತಿಗಳೂ, ಅವುಗಳಿಗೆ ನಿಯಾಮಕಳೂ, ಅಭಿಮಾನಿಯಾದ ಮಾಯಾಶಬ್ದವಾಚಳಾದ ನನ್ನ ಪತ್ನಿಯಾದ ಲಕ್ಷ್ಮೀದೇವಿಯೂ ಸಹ ಇದ್ದರು. ನಂತರ ನಾನು ನಿನ್ನನ್ನು ಸೃಷ್ಟಿಸಿದೆನು. ಈ ಸೃಷ್ಟಿಯ ನಂತರ ನಾನು, ನೀನು ಎಂಬ ಭಾವಗಳೂ, ನಾನೇ ಕರ್ತಾ, ನಾನೇ ಭೋಕ್ತಾ ಎಂಬ ವಿಪರೀತಜ್ಞಾನವೂ, ಪ್ರಕೃತಿವಿಕಾರಗುಣಗಳಿಂದ ಹುಟ್ಟಿದವು. ಲಯಕಾಲದಲ್ಲಿ ಸರ್ವವನ್ನೂ ಸೂಕ್ಷ್ಮರೂಪಕ್ಕೆ ಲಯ ಹೊಂದಿಸಿ, ನಾನೇ ಸ್ವತಂತ್ರನಾಗಿರುವೆನು. ಆದುದರಿಂದ ಭೂತಭವಿಷ್ಯದ್ವರ್ತಮಾನಗಳೆಂಬ ತ್ರಿಕಾಲಗಳಲ್ಲಿಯೂ ಸರ್ವ ಸ್ವತಂತ್ರನು ನಾನೊಬ್ಬನೇ, ನೀನೂ ಮೊದಲಾಗಿ ಸರ್ವರೂ ನನ್ನಧೀನರು. ಸ್ವತಂತ್ರರಲ್ಲ.

ಅಸ್ವತಂತ್ರವಾದ ನನ್ನಧೀನವಾದ ಪ್ರಕೃತಿಯ ಲಕ್ಷ್ಮಣಗಳನ್ನು ಹೇಳುತ್ತೇನೆ ಕೇಳು. ಆ ಪ್ರಕೃತಿಯು ಆಪ್ತಕಾಮನಾದ ನನಗೋಸ್ಕರವೇ ನನ್ನ ಆಶ್ರಯಪೇಕ್ಷೆಯಿಂದಲೇ ಇರತಕ್ಕದ್ದು. ಸಮಸ್ತವೇದಾದಿಗಳಲ್ಲಿದ್ದು ನನ್ನನ್ನು ಮುಖ್ಯವಾಗಿ ಪ್ರತಿಪಾದಿಸತಕ್ಕದ್ದು. ನನಗೆ ಯಾವ ದೇಶಕಾಲಗಳಲ್ಲೂ ವಿರೋಧವಾಗದೇ ಇರತಕ್ಕದ್ದು, ಅಂದರೆ ಸದಾ ಅನುಕೂಲ ವ್ಯಾಪಾರ ವುಳ್ಳದ್ದು. ಈಶ್ವರ, ಜೀವ, ಪ್ರಕೃತಿ ಇವುಗಳಿಗೂ ಪರಸ್ಪರ ಬಾಧೆಯನ್ನು ಅಂದರೆ ಪ್ರತಿಕೂಲವನ್ನು ಮಾಡದೇ ಇರತಕ್ಕದ್ದು. ಇಂತಹ ಪ್ರಕೃತಿಯು ನನ್ನ ಇಚ್ಛೆಯಂತೆ ಜೀವಜಡ ಸರ್ಗ, ಜೀವಈಶ್ವರ ಸರ್ಗ, ಜಡ ಈಶ್ವರ ಸರ್ಗಗಳೆಂಬ ಬಂಧನತ್ರಯಗಳಿಂದ

ಸರ್ವಸೃಷ್ಟಿ, ಸ್ಥಿತಿ, ಪ್ರಳಯ, ಮೋಕ್ಷಾದಿಗಳನ್ನು ಮಾಡತಕ್ಕದ್ದು.

ಈ ಜೀವ, ಜಡ, ಪ್ರಕೃತಿ, ಕಾಲಗಳು ನನ್ನಧೀನಗಳಾಗಿ, ನನ್ನ ಆಧಾರದಿಂದಲೇ ನನ್ನೊಳಗೇ ಆಶ್ರಯಿಸಿಕೊಂಡು ಇದ್ದರೂ, ಹೇಗೆ ರಥದ ಮೇಲಿರುವ ಛತ್ರಿ ಹಿಡಿಯುವರೂ, ಚಾಮರ ಬೀಸುವವರೂ, ರಥಿಕರೆಂದು ರಥದ ಮೇಲೆಯೇ ಇದ್ದರೂ ಕರೆಯಲ್ಪಡುವಿದಿಲ್ಲವೋ, ಅದರಂತೆ ಸರ್ವಕಾಲದಲ್ಲಿಯೂ ನನ್ನಿಂದ ಭಿನ್ನರು. ನಾನೇ ಆ ಸ್ವರೂಪನಾಗಿಲ್ಲ. ನಾನು, ದೇಶ, ಕಾಲ, ಕರ್ಮ, ಪ್ರಕೃತಿಗಳನ್ನು ಬಂಧಿಸತಕ್ಕವನೇ ಹೊರತು, ಅವುಗಳು ನನ್ನನ್ನು ಬಂಧಿಸಲಾರವು. ಜೀವನಂತೆ ಶರೀರಪ್ರಾಪ್ತಿ, ಶರೀರವಿಯೋಗ, ದುಃಖಪ್ರಾಪ್ತಿ, ನ್ಯೂನತೆ ಎಂಬ ನಾಲ್ಕು ನಾಶವಿಲ್ಲದವನು. ಜೀವರು, ಪ್ರಕೃತಿಯಿಂದ ಬದ್ಧರು. ಆದುದರಿಂದ ನಾನು ಸರ್ವವಸ್ತುವಿಲಕ್ಷ್ಣಣ ಸ್ವರೂಪನು. ಹೇಗೆ ಪೃಥುವ್ಯಾದಿ ಪಂಚಭೂತಗಳು ಸರ್ವಪ್ರಾಣಿಗಳ, ಸರ್ವವಸ್ತುಗಳ ಒಳಗೂ ಹೊರಗೂ ವ್ಯಾಪಿಸಿದ್ದು, ಅವುಗಳಿಂದ ಪ್ರತ್ಯೇಕವಾಗಿಯೇ ಸ್ವತಂತ್ರವಾಗಿರುತ್ತವೆಯೋ! ಅದರಂತೆ ನಾನು, ದೇಶ, ಕಾಲ, ಪ್ರಾಣಿಗಳು, ವಸ್ತುಗಳೂ ಮತ್ತೂ ಈ ಪಂಚಭೂತಗಳೊಳಹೊರಗೆಲ್ಲಾ ಇದ್ದು, ಇವುಗಳನ್ನು ಕಾರ್ಯಗಳಲ್ಲಿ ನಿಯಮಿಸುತ್ತಾ, ಸ್ವತಂತ್ರವಾಗಿ ಪಂಚಭೂತಾತ್ಮಕವಾದ ಮಹತ್ತತ್ವಾವರಣ, ಅಪ್ರಾಕೃತಗಳಾದ ಅವ್ಯಕ್ತತತ್ವ, ಅಪ್ರಾಕೃತಾಕಾಶಾದಿಗಳನ್ನು ಮೀರಿದ ಅಗಮ್ಯ ವ್ಯಾಪ್ತಿಯುಳ್ಳವನೂ, ಸರ್ವತ್ರ ಅಪರಿಚ್ಛಿನ್ನವ್ಯಾಪ್ತಿಯುಳ್ಳವನೂ ಆಗಿರುತ್ತೇನೆ. ಆದುದರಿಂದ ಸಮಸ್ತ ವಸ್ತುಗಳ ಸದ್ಭಾವ, ಅಸದ್ಭಾವಗಳೆಂಬ, ಅನ್ವಯ ವ್ಯತಿರೇಕ ಪ್ರಕಾರಗಳಿಂದ, ಸರ್ವ ದೇಶಕಾಲಗಳಲ್ಲಿ ಏಕಪ್ರಕಾರವಾಗಿ ಗುಣಕ್ರಿಯಾದಿಗಳಲ್ಲಿ ಸದಾ ವ್ಯಾಪ್ತನಾದ ಸ್ವರೂಪನೆಂದು ನನ್ನನ್ನು ತಿಳಿದು, ನೀನು ವಿಶೇಷವಾಗಿ, ಎಲ್ಲರಿಗಿಂತಲೂ ಅತ್ಯಂತ ಶ್ರೇಷ್ಠವಾಗಿ ಉಪಾಸನೆ ಮಾಡು.

ಈಜ್ಞಾನವನ್ನುನೀನುಮನಸ್ಸಿನಲ್ಲಿಧರಿಸಿ,ಉತ್ಕೃಷ್ಟವಾದಸಮಾಧಿಯೋಗದಿಂದನನ್ನನ್ನುಧ್ಯಾನಿಸಿದರೆ, ನಾನು ನಿನಗೆ ನೀನು ಕೇಳಿದ ವಿರಾಡ್ರೂಪಾದಿ ಮೂರು ರೂಪಗಳಿಂದ ದರ್ಶನವಿಷಯನಾಗುತ್ತೇನೆ. ನಿನಗೆ ಸೃಷ್ಟಿ, ಸ್ಥಿತಿ, ಲಯಕಾಲಗಳಲ್ಲಿ ಎಂದಿಗೂ ಅಜ್ಞಾನಾದಿಗಳುಂಟಾಗುವುದಿಲ್ಲ ಎಂದು ಹೇಳಿ ಜನನಮರಣಾದಿಶೂನ್ಯನೂ, ಜಗದ್ವಿಲಕ್ಷಣನೂ ಆದ ಶ್ರೀಪರಮಾತ್ಮನು, ರುದ್ರಾದಿಗಳಿಂದಲೂ ನೋಡಲಸಾಧ್ಯವಾದ ರೀತಿಯಲ್ಲಿ ಬ್ರಹ್ಮದೇವರಿಗೆ ತೋರಿಸಿದ ತನ್ನ ದಿವ್ಯ ಮಂಗಳಮೂರ್ತಿಯನ್ನು ನೋಡುತ್ತಿದ್ದ ಹಾಗೆಯೇ ಬ್ರಹ್ಮದೇವರಿಗೆ ಕಾಣಿಸದಂತೆ ಅದೃಶ್ಯನಾದನು ಎಂದು ಶುಕಋಷಿಗಳು ಹೇಳಿ, ನಂತರ ಬ್ರಹ್ಮದೇವರು ಏನು ಮಾಡಿದರೆಂದುಬುವುದನ್ನೂ, ಭಾಗವತಪ್ರಚಾರ ಪ್ರಕಾರವನ್ನೂ ನಿರೂಪಿಸುತ್ತಾರೆ:-

ಇಂದ್ರಿಯಗಳಿಗೆ ಶ್ರೀಪರಮಾತ್ಮನು ಗೋಚರನಾಗದೇ ಅದೃಶ್ಯನಾಗಲು, ಆ ಅದೃಶ್ಯನಾದ

अथ दशमोऽध्यायः

ಶ್ರೀಪರಮಾತ್ಮನಲ್ಲಿ ಭಕ್ತಿಭಾವ ವುಳ್ಳ ಬ್ರಹ್ಮದೇವರು, ಬದ್ಧಾಂಜಲಿಯಿಂದ ಕೂಡಿದವರಾಗಿ ಶ್ರೀಪರಮಾತ್ಮನಿಗೆ ನಮಸ್ಕರಿಸಿದರು. ನಂತರ ದೇವರ ಉಪದೇಶದಂತೆ ಅಸಂಪ್ರಜ್ಞಾತ ಸಮಾಧಿಯಿಂದ ವಿರಾಟ್ಪು ರುಷನನ್ನು ತಮ್ಮ ದೇಹದಲ್ಲಿ ಧ್ಯಾನಿಸಿ, ಪ್ರತ್ಯಕ್ಷನಾದ ಆ ವಿರಾಡ್ರೂಪನ ಅಪರಿಮಿತ ಶಕ್ತಿಯಿಂದ ಸರ್ವಭೂತಮಯವಾದ ಈ ಪ್ರಪಂಚವನ್ನು ಸೃಷ್ಟಿಮಾಡಿದರು. ನಂತರ ಒಂದು ದಿನ, ಸಕಲ ರುದ್ರಾದಿ ಪ್ರಜೆಗಳಿಗೂ ಪಾಲಕರೂ, ಶ್ರೇಷ್ಠರೂ, ಸಂಪತ್ಕಾಲ ವಿಪತ್ಕಾಲಗಳಲ್ಲಿ ಜೀವರು ತಮ್ಮ ಶ್ರೇಯಸ್ಸಿಗಾಗಿ ಅನುಷ್ಠಿಸಬೇಕಾದ ವಿಹಿತ ಧರ್ಮಗಳನ್ನು ಬೋಧಿಸಿದವರೂ, ಆ ಧರ್ಮ ಸಂರಕ್ಷಕರೂ ಆದ ಬ್ರಹ್ಮದೇವರು, ತಮ್ಮಿಂದ ಸೃಷ್ಟರಾದ ಜೀವರಿಗೆ ಕಲ್ಯಾಣ ಪ್ರಾಪ್ತಿಗಾಗಿ, ಯಮ ನಿಯಮಾದಿಗಳನ್ನೂ, ಉಪಾಸನಾ ಕ್ರಮಗಳನ್ನೂ ತಿಳಿಸಲು ಇಚ್ಛಿಸಿದವರಾಗಿ, ಯೋಚಿಸುತ್ತಾ ಕುಳಿತಿದ್ದರು.

ಯಮಗಳೂ, ನಿಯಮಗಳೂ ಹತ್ತು, ಹತ್ತು ಪ್ರಕಾರವಾದವುಗಳು. ಹೀಗೆ ಬ್ರಹ್ಮದೇವರು ಕುಳಿತಿದ್ದಾಗ, ಮಹಾ ಭಾಗವತೋತ್ತಮರೂ, ಬ್ರಹ್ಮದೇವರಿಗೆ ಪ್ರಿಯತಮರೂ, ಬ್ರಹ್ಮದೇವರ ಉಪದೇಶದಂತೆ ಅತ್ಯಂತ ವಿಧೇಯತೆಯಿಂದ ಯಾವಾಗಲೂ ನಡೆದುಕೊಂಡು ಇರತಕ್ಕವರೂ ಆದ ದೇವರ್ಷಿಗಳಾದ ನಾರದರು, ತಮ್ಮ ತಂದೆಯಾದ ಬ್ರಹ್ಮದೇವರನ್ನು ಭಕ್ತಿಯಿಂದ ಸಮೀಪಿಸಿ, ನಮಸ್ಕಾರಮಾಡಿ, ಅನೇಕ ವಿಧವಾಗಿ ಶುಶ್ರೂಷೆಯನ್ನು ಮಾಡುತ್ತಿದ್ದರು. ಇವರ ಗುಣಕ್ಕೆ ಮೆಚ್ಚಿದ ಬ್ರಹ್ಮದೇವರು ಒಂದು ದಿನ ಇವರನ್ನು ಪ್ರಸನ್ನ ದೃಷ್ಟಿಯಿಂದ ನೋಡುತ್ತಿರುವಾಗ, ನಾರದರು ಪ್ರಧಾನನೂ, ಮಾತೃಸ್ವರೂಪನೂ, ಜ್ಞೇಯನೂ, ಜ್ಞಾನಗಮ್ಯನೂ ಆದ್ದರಿಂದ ಮಾಯೇಶ ನಾಮಕನಾದ ಪರಮಾತ್ಮನ ಸ್ವರೂಪವನ್ನು ತಿಳಿಸಬೇಕೆಂದು, ಕೈಮುಗಿದು ಪ್ರಾರ್ಥಿಸಿದರು. ಆಗ ನಾರದರಿಗೆ ಬ್ರಹ್ಮದೇವರು ಪರಮಾತ್ಮನಿಂದ ತಮಗೆ ಉಪದಿಷ್ಟವಾಗಿದ್ದ ಭಾಗವತ ತತ್ವರಹಸ್ಯವನ್ನು ಉಪದೇಶಿಸಿದರು.

ಅದನ್ನೇ ನಾರದರು ಮೊದಲು, ಸರ್ವಜ್ಞರಾದ ಶ್ರೀವೇದವ್ಯಾಸದೇವರಲ್ಲಿ ನಿವೇದಿಸಿ, ನಂತರ ಸರಸ್ವತೀ ತೀರದಲ್ಲಿ ಋಷಿಗಳಿಗೆ ಉಪದೇಶಿಸಿದರು. ಶ್ರೀವ್ಯಾಸರು ಪುತ್ರನಾದ ನನಗೆ ಉಪದೇಶಿಸಿದರು. ಅದನ್ನೇ ಹತ್ತು ಲಕ್ಷಣಗಳಿಂದ ಕೂಡಿರುವ ಈ ಭಾಗವತ ತತ್ವರಹಸ್ಯವನ್ನು ಕೇಳು! ಎಂದರು.

**ಇತಿ ಶ್ರೀಮದ್ಭಾಗವತ ದ್ವಿತೀಯಸ್ಕಂಧದ ಒಂಭತ್ತನೆಯ ಅಧ್ಯಾಯವು ಮುಗಿಯಿತು. ಶ್ರೀಕೃಷ್ಣಾರ್ಪಣಮಸ್ತು**

## अथ दशमोऽध्यायः

**श्रीशुक उवाच**

अत्र सर्गो विसर्गश्च स्थानं पोषणमूतयः ।

## अथ दशमोऽध्यायः

मन्वन्तरेशानुकथा निरोधो मुक्तिराश्रयः ॥ १ ॥

दशमस्य विशुध्यर्थं नवानामिह लक्षणम् ।
वर्णयन्ति महात्मानः श्रुतेनार्थेन चाञ्जसा ॥ २ ॥

भूतमात्रेन्द्रियधियां जन्मसर्ग उदाहृतः ।
ब्रह्मणो गुणवैषम्याद्विसर्गः पौरुषः स्मृतः ॥ ३ ॥

स्थितिर्वैकुण्ठविजयः पोषणं तदनुग्रहः ।
मन्वन्तराणि सद्धर्मा ऊतयः कर्मवासनाः ॥ ४ ॥

अवतारानुचरितं हरेश्चास्यानुवर्तिनाम् ।
पुंसामीशकथा प्रोक्ता नानाख्यानोपबृंहिताः ॥ ५ ॥

निरोधोऽस्यानुशयनमात्मनः सह शक्तिभिः ।
मुक्तिर्हित्वाऽन्यथारूपं स्वरूपेण व्यवस्थितिः ॥ ६ ॥

आभासश्च निरोधश्च यतस्तत्त्रयमीयते ।
स आश्रयः परं ब्रह्म परमात्मेति शब्द्यते ॥ ७ ॥

आध्यात्मिको यः पुरुषः सोऽसावेवाधिदैविकः ।
यस्तत्रोभयविच्छेदः स स्मृतो ह्याधिभौतिकः ॥ ८ ॥

एतदेकतमाभावे यदा नोपलभामहे ।
त्रितयं तत्र यो वेद स आत्मा स्वाश्रयाश्रयः ॥ ९ ॥

पुरुषोऽण्डं विनिर्भिद्य यदाऽसौ स विनिर्गतः ।
आत्मनोऽयनमन्विच्छन्नपोऽस्राक्षीच्छुचिः शुचीः ॥ १० ॥

तास्ववात्सीत्स्वसृष्टासु सहस्रपरिवत्सरान् ।
तेन नारायणो नाम यदापः पुरुषोद्भवाः ॥ ११ ॥

द्रव्यं कर्म च कालश्च स्वभावो जीव एव च ।
यदनुग्रहतः सन्ति न सन्ति यदुपेक्षया ॥ १२ ॥

एको नानात्वमन्विच्छन् योगतल्पात्समुत्थितः ।

## अथ दशमोऽध्यायः

वीर्यं हिरण्मयं देवो मायया व्यसृजत्त्रिधा ॥ १३ ॥

अधिदैवमथाध्यात्ममधिभूतमिति प्रभुः ।
पुनस्तत्पौरुषं वीर्यं त्रिधा भिद्यत तच्छृणु ॥ १४ ॥

अन्तः शरीर आकाशे पुरुषस्य विचेष्टतः ।
ओजः सहो बलं जज्ञे ततः प्राणो महानभूत् ॥ १५ ॥

अनुप्राणन्ति यं प्राणाः प्राणन्तं सर्वजन्तुषु ।
अपानन्तमपानन्ति नरदेवमिवानुगाः ॥ १६ ॥

प्राणेन क्षिपता क्षुत्तृडन्तरा जायते विभोः ।
पिपासतो जक्षतश्च प्राङ्मुखं निरभिद्यत ॥ १७ ॥

मुखतस्तालु निर्भिन्नं जिह्वा तत्रोपजायते ।
ततो नानारसो यज्ञे जिह्वया योऽधिगम्यते ॥ १८ ॥

विवक्षोर्मुखतो भूम्नो वह्निर्वाग्व्याहृतं तयोः ।
जले वै तस्य सुचिरं निरोधः समजायत ॥ १९ ॥

नासिके निरभिद्येतां दोधूयति नभस्वति ।
तत्र वायुर्गन्धवहो घ्राणो नसि जिघृक्षतः ॥ २० ॥

यदात्मनि निरालोक आत्मानञ्च दिदृक्षतः ।
निर्भिन्ने अक्षिणी तस्य ज्योतिश्चक्षुर्गुणग्रहः ॥ २१ ॥

बोध्यमानस्य ऋषिभिरात्मनस्तज्जिघृक्षतः ।
कर्णौ च निरभिद्येतां दिशः श्रोत्रं गुणग्रहः ॥ २२ ॥

वस्तुनो मृदुकाठिन्यलघुगुर्वुष्णशीतताम् ।
जिघृक्षतस्त्वनिर्भिन्ना तस्यां रोममहीरुहाः
तत्र चान्तर्बहिर्व्याप्तस्त्वचा लब्धगुणावृतः ॥ २३ ॥

हस्तौ रुरुहतुस्तस्य नानाकर्मचिकीर्षया ।
तयोस्तु बलवानिन्द्र आदानमुभयाश्रयम् ॥ २४ ॥

## अथ दशमोऽध्यायः

गतिं चिकीर्षतः पादौ रुरुहातेऽभिकामतः।
पद्भ्यां हव्यं स्वयं यज्ञः कर्म यत्क्रियते नृभिः ॥ २५ ॥

निरभिद्यत शिश्नो वै प्रजानन्दामृतार्थिनः।
उपस्थ आसीत्कामानां प्रियं तदुभयाश्रयम् ॥ २६ ॥

उत्सिसृक्षोर्धातुमलं निरभिद्यत वै गुदम्।
ततः पायुस्ततो मित्र उत्सर्ग उभयाश्रयः ॥ २७ ॥

आसिसृक्षोः पुरः पुर्यां नाभिद्वारमपावृतम्।
ततोऽपानस्ततो मृत्युः पृथक्त्वमुभयाश्रयम् ॥ २८ ॥

आदित्सोरन्नपानानाम् असृक्कुक्ष्यन्त्रनाडिके (क्ष्यान्त्रनाडयः )।
नद्यः समुद्राश्च तयोस्तुष्टिः पुष्टिस्तदाश्रये ॥ २९ ॥

निदिध्यासोरात्ममायां हृदयं निरभिद्यत।
ततो मनश्चन्द्र इति सङ्कल्पः काम एव च ॥ ३० ॥

त्वक्चर्ममांसरुधिरमेदोमज्जास्थिधातवः।
भूम्यप्तेजोमयाः सप्त प्राणो व्योमाम्बुवायुभिः ॥ ३१ ॥

गुणात्मकानीन्द्रियाणि भूतादिप्रभवा गुणाः।
मनः सर्वविकारात्मा बुद्धिर्विज्ञानरूपिणी ॥ ३२ ॥

एतद्भगवतो रूपं स्थूलं ते व्याहृतं मया।
मह्यादिभिश्चावरणैरष्टभिर्बहिरावृतम् ॥ ३३ ॥

अतः परं सूक्ष्मतममव्यक्तं निर्विशेषणम्।
अनादिमध्यनिधनं नित्यं वाङ्मनसोः परम् ॥ ३४ ॥

अमुनी भगवद्रूपे मया ते ह्यनुवर्णिते।
उभे अपि न गृह्णन्ति मायासृष्टेऽविपश्चितः ॥ ३५ ॥

स वाच्यवाचकतया भगवान् ब्रह्मरूपधृक्।
नामरूपक्रिया धत्ते सकर्माकर्मकः परः ॥ ३६ ॥

## अथ दशमोऽध्यायः

प्रजापतीन् मनून् देवानृषीन् पितृगणान् पृथक् ।
सिद्धचारणगन्धर्वान् विद्याधासुरगुह्यकान् ॥ ३७ ॥

किन्नराप्सरसो नागान् सर्पान् किम्पुरुषानपि ।
मातृरक्षः पिशाचांश्च प्रेतभूतविनायकान् ॥ ३८ ॥

कूष्माण्डोन्मादतवेतालान् यातुधानान् ग्रहानपि ।
खगान् मृगान् पशून् वृक्षान् गिरीन् नृप सरीसृपान् ॥ ३९ ॥

द्विविधाश्चतुर्विधाश्चान्ये जलस्थलनभौकसः ।
कुशलाकुशलमिश्राणां कर्मणां गतयस्त्विमाः ॥ ४० ॥

सत्वं रजस्तम इति तिस्रः सुरनृनारकाः ।
तत्राप्येकैकशो राजन् भिद्यन्ते गतयस्त्रिधा ॥ ४१ ॥

यदैवैकतमोऽन्याभ्यां स्वभाव उपहन्यते ।
तदैवेदं जगद्धाता भगवान् धर्मरूपधृक् ।
पुष्णाति स्थापयन् विश्वं तिर्यग्नरसुरात्मभिः ॥ ४२ ॥

ततः कालाग्निरुद्रात्मा यत्सृष्टमिदमात्मनः ।
सन्नियच्छति तत्काले घनानीकमिवानिलः ॥ ४३ ॥

इत्थम्भावेन कथितो भगवान् भगवत्तमः ।
नेत्थम्भावेन हि परं द्रष्टुमर्हन्ति सूरयः ॥ ४४ ॥

न चास्य जन्मकर्माणि परस्य न विधीयते ।
कर्तृत्वं प्रतिषेधार्थं माययाऽऽरोपितं हि तत् ॥ ४५ ॥

अयं ते ब्रह्मणः कल्पः सविकल्प उदाहृतः ।
विधिः साधारणो यत्र सर्गाः प्राकृतवैकृताः ॥ ४६ ॥

परिमाणञ्च कालस्य कल्पलक्षणविग्रहम् ।
यथा परस्ताद्व्याख्यास्ये पाद्मं कल्पमिमं शृणु ॥ ४७ ॥

## अथ दशमोऽध्यायः

**शौनक उवाच**

यदाह नो भवान् सूत क्षत्ता भागवतोत्तमः ।
चचार तीर्थानि भुवस्त्यक्त्वा बन्धून् सुदुस्त्यजान् ॥ ४८ ॥

कुत्र कौषारवेस्तस्य संवादोऽध्यात्मसम्भवः ।
यद्वा स भगवांस्तस्मै पृष्टस्तत्वमुवाच ह ॥ ४९ ॥

ब्रूहि नस्तदिदं सौम्य विदुरस्य विचेष्टितम् ।
बन्धुत्यागनिमित्तं च यथैवागतवान् पुनः ॥ ५० ॥

सूत उत्ताचराज्ञा परीक्षिता पृष्टो यदवादीन्महामुनिः ।
तद्वोऽभिधास्ये शृणुत राज्ञः प्रश्नानुसारतः ॥ ५१ ॥

**॥ इति श्रीमद्भागवते (द्वितीयस्कन्धे(*2) दशमोऽध्यायः ॥**

**॥ इति श्रीमद्भागवते महापुराणे वैयासक्यामष्टादशसाहस्र्यां पारमहंस्यां संहितायां द्वितीयस्कन्धः ॥**

**॥ ಹತ್ತನೆಯ ಅಧ್ಯಾಯ ॥**

## ಭಾಗವತದ ದಶ ಲಕ್ಷಣಗಳು

ಈ ಅಧ್ಯಾಯದಲ್ಲಿ ವೈರಾಜನಾಮಕ ವಿರಾಡ್ರೂಪ ಶ್ರೀಹರಿಯಿಂದ, ಸಕಲಜಗತ್ಸೃಷ್ಟಿಯೂ ಆಗುತ್ತೆಂದೂ, ಭಾಗವತದ ಹತ್ತುಲಕ್ಷಣಗಳಾದ (೧)ಸರ್ಗ (೨)ವಿಸರ್ಗ (೩)ಸ್ಥಾನ (೪)ಪೋಷಣ (೫)ಊತಿಗಳೆಂಬ ಜೀವರಕರ್ಮವಾಸನಾಸ್ವರೂಪವೂ, (೬)ಮನ್ವಂತರಗಳು (೭)ಈಶಾನುಕಥಾ (೮)ನಿರೋಧ (೯) ಮುಕ್ತಿ (೧೦)ಆಶ್ರಯಗಳೂ ವಿವರಿಸಲ್ಪಡುತ್ತವೆ.

ಇಲ್ಲಿ ಮುಕ್ತಾಮುಕ್ತ ಪ್ರಪಂಚಕ್ಕೆ ಆಧಾರನಾದಕಾರಣ, ಆಶ್ರಯನೆಂದು ಕರೆಯಲ್ಪಡುವ, ಭಾಗವತದ ಹತ್ತನೆಯ ಲಕ್ಷಣದಿಂದ ಪ್ರತಿಪಾದ್ಯನಾದ ಶ್ರೀಪರಮಾತ್ಮನ ಮಹಿಮೆಗಳು, ಈ ಸರ್ಗಾದಿ ಒಂಭತ್ತು ಲಕ್ಷಣಗಳಿಂದ ಚೆನ್ನಾಗಿ ವರ್ಣಿಸಲ್ಪಡುತ್ತವೆಯಾಗಿ, ಸರ್ಗಾದಿ ನವಲಕ್ಷಣಗಳು ಯಾವುವೆಂದು ಮೊದಲು ತಿಳಿಸುತ್ತಾರೆ:-

## अथ दशमोऽध्यायः

ಈ ನವಲಕ್ಷಣಗಳಿಂದ ಅನಂತವೇದಪ್ರತಿಪಾದ್ಯನೂ, ಸರ್ವಗುಣಪೂರ್ಣನೂ, ಸರ್ವೋತ್ತಮನೂ ಶ್ರೀಪರಮಾತ್ಮನೆಂಬ ಜ್ಞಾನವು ಉಪಾಸಕರಿಗೆ ಹುಟ್ಟುವುವೆಂಬ ಪ್ರಯೋಜನದಿಂದ, ಬ್ರಹ್ಮರುದ್ರಾದಿಗಳು ಉಪದೇಶ ಪ್ರಾರಂಭದಲ್ಲಿ ಈ ಸರ್ಗಾದಿಗಳ ಲಕ್ಷಣವನ್ನು ಸೂಕ್ಷ್ಮವಾಗಿ ವಿಸ್ತರಿಸುತ್ತಾರೆ:-

ಇಲ್ಲಿ ಮೊದಲನೆಯದಾದ ಸರ್ಗವೆಂದರೆ, ಸೃಷ್ಟಿಕಾಲದಲ್ಲಿ ಪರಬ್ರಹ್ಮನಿಂದ ಗುಣವೈಷಮ್ಯಗಳು ಮಾಡಲ್ಪಟ್ಟು ಅದರಿಂದ ಮಹತ್ತತ್ವವನ್ನೂ, ಮಹತ್ತತ್ವದಿಂದ ಅಹಂಕಾರತತ್ವದ್ವಾರಾ, ಪಂಚಭೂತಗಳು, ಪಂಚತನ್ಮಾತ್ರಗಳು, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಮನಸ್ಸು, ಬುದ್ಧಿತತ್ವಗಳೂ ಸೃಷ್ಟಿಸಲ್ಪಡುವ ಕ್ರಮಕ್ಕೆ ಸರ್ಗವೆಂದು ಹೆಸರು.

(೨)ವಿಸರ್ಗವೆಂದರೆ, ಬ್ರಹ್ಮಾಂಡದೊಳಗೆ ಪಂಚಭೂತಸಮುದಾಯಗಳಿಂದ ಸೃಷ್ಟಿಸಲ್ಪಟ್ಟ ಸಾತ್ವಿಕಾದಿ ಸ್ವಭಾವ ವುಳ್ಳ ಜೀವರ ಮತ್ತು ಕಾಠಿಣ್ಯ, ಮೃದುಸ್ವಭಾವ ವುಳ್ಳ ಪದಾರ್ಥಗಳ ಸೃಷ್ಟಿಯೂ ಮತ್ತು ಆಯಾ ವಸ್ತುಗಳಲ್ಲಿ ಆಯಾ ರೂಪಗಳಿಂದ ಪ್ರವೇಶಿಸಿ, ಆಯಾ ಪದಾರ್ಥಗಳ ಕಾರ್ಯ ಮಾಡಿಸುವ ಒಬ್ಬನೇ ಆದ ಶ್ರೀಪರಮಾತ್ಮನ, ಅನೇಕ ಅಂತರ್ಯಾಮಿ ರೂಪಗಳ ಸ್ವೀಕಾರವೆಂಬ ಎರಡನೆಯ ಸೃಷ್ಟಿಯು.

(೩) ವೈಕುಂಠನಾಮಕ ಪರಮಾತ್ಮನ ಅವತಾರಗಳಿಂದ ಶಿಷ್ಟರಕ್ಷಣ, ದುಷ್ಟಶಿಕ್ಷ್ಷಣೆಯನ್ನು ಮಾಡುವುದೇ ಸ್ಥಿತಿ ಎಂದು ಕರೆಯಲ್ಪಡುತ್ತೆ.

(೪) ಪರಮಾತ್ಮನು ಭಕ್ತರ ಉಪಾಸನಾ ಭಕ್ತ್ಯಾದಿಗಳಿಂದ ಅನುಗ್ರಹೋನ್ಮುಖನಾಗಿ, ಭಕ್ತರನ್ನು ವಿಶೇಷವಾಗಿ ರಕ್ಷಿಸುವುದೇ ಪೋಷಣವು.

(೫) ಮನ್ವಂತರ ಕಾಲವಿಶೇಷಗಳಲ್ಲಿ ಸಜ್ಜನರು ಅನುಷ್ಠಿಸುವ ಸದ್ಧರ್ಮಗಳು ಮನ್ವಂತರಗಳೆಂದು ಕರೆಸುವವು.

(೬) ನಾನಾ ಜೀವರ ಅನಾದಿ ಕರ್ಮಗಳೂ ಆ ಕರ್ಮಗಳಿಂದ ಜೀವರಿಗುಂಟಾಗುವ ಸಂಸ್ಕಾರವಿಶೇಷಗಳೂ, ಜೀವರಿಗೆ ನಾನಾ ಜನ್ಮಪ್ರಾಪ್ತಿಗೆ ಕಾರಣಗಳಾದ್ದರಿಂದ ಊತಿಗಳೆಂದು ಕರೆಯಲ್ಪಡುತ್ತವೆ.

(೭) ಶ್ರೀಪರಮಾತ್ಮನ ದಶಾವತಾರಾದಿಗಳಲ್ಲಿ ಮಾಡಿದ ಕಾರ್ಯಗಳನ್ನೂ, ಆ ಅವತಾರಕಾಲಗಳಲ್ಲಿ, ಬ್ರಹ್ಮಾದಿದೇವತೆಗಳೂ, ಪರಮಾತ್ಮನ ಭಕ್ತರೂ ಅವತರಿಸಿ, ಅವರು ಮಾಡಿದ ಕಾರ್ಯಗಳನ್ನೂ

ನಿರೂಪಿಸುವ ಪುರಾಣೇತಿಹಾಸಗಳು ಈಶಾನುಕಥೆಗಳು.

(೮) ಜೀವರನ್ನು ಸ್ವರೂಪಜ್ಞಾನೇಚ್ಛಾದಿಗಳಿಲ್ಲದವರಂತೆ ಮಾಡಿ, ಶ್ರೀನಾಮಕ ಲಕ್ಷ್ಮೀದೇವಿಯು, ಆ ಜೀವರ ಸಮೇತ ಪರಮಾತ್ಮನ ಸಮೀಪಕ್ಕೆ ಹೋಗಿ, ಆ ಕಾಲದಲ್ಲಿ ಜೀವರಿಗೆ ಗಾಢನಿದ್ರೆ ಉಂಟುಮಾಡುವುದೇ ನಿರೋಧ.

(೯) ಗಾಢನಿದ್ರೆಯಿಂದ ಜೀವನು ಎದ್ದು, ತನ್ನ ಸ್ವರೂಪೇಚ್ಛಾಕ್ರಿಯಾದಿಗಳನ್ನು, ಭಗವದ್ಭಕ್ತಿ, ವಂದನಾ, ಕೀರ್ತನ, ಸ್ಮರಣ, ಉಪಾಸನಾದಿಗಳಿಂದ ಅಭಿವ್ಯಕ್ತಿಮಾಡಿ, ಪರಮಾತ್ಮನ ಪ್ರಸಾದಪಡೆದು, ಪ್ರಾಕೃತ ವೈಕೃತ ಸೂಕ್ಷ್ಮಸ್ಥೂಲೇಂದ್ರಿಯಾದಿಗಳನ್ನು ತ್ಯಜಿಸಿ, ಲಿಂಗಭಂಗ ಹೊಂದಿ, ಸ್ವಸ್ವರೂಪಾವಿರ್ಭಾವ ಸುಖರೂಪವನ್ನು ಪಡೆಯುವುದೇ ಮುಕ್ತಿ.

(೧೦)ಸೃಷ್ಟಿಸ್ಥಿತಿ ರೂಪಗಳಲ್ಲಿರುವ ನಿಖಿಳ ಬ್ರಹ್ಮ, ಪಿಪೀಲಿಕಾಂತ ಜಗತ್ತು, ಯಾವ ಶ್ರೀಪರಮಾತ್ಮನ ಆಭಾಸ, ಆಭಾಸ ಪ್ರತಿಬಿಂಬ ರೂಪಗಳೋ, ಯಾರ ಆಧಾರದಿಂದ ಇವೆಯೋ, ಆ ಪರಮಾತ್ಮನಿಗೆ ' ಆಶ್ರಯ 'ನೆಂದು ಹೆಸರು.

ಈ ರೀತಿಯಾಗಿ ಹತ್ತು ವಿಧ ಪ್ರಾಮುಖ್ಯತೆಯಿಂದ ಭಾಗವತವು ಭಗವನ್ಮಹಿಮೆಗಳನ್ನು ಪ್ರತಿಪಾದಿಸುವುದರಿಂದ, ಭಾಗವತವು ಹತ್ತು ಲಕ್ಷಣ ವುಳ್ಳದ್ದೆಂದು ಹಿಂದೆ ಹೇಳಲ್ಪಟ್ಟಿತು.

ಪರಮಾತ್ಮನು ಅಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ ಎಂಬ ಮೂರು ರೂಪಗಳಿಂದ ಸರ್ವೇಂದ್ರಿಯ, ಸರ್ವದೇಹಗಳಲ್ಲಿದ್ದು ಆಶ್ರಯರೂಪನಾಗಿರುವನೆಂದೂ ತಿಳಿಯಬೇಕು. ಚಕ್ಷುರಾದಿ, ದೇಹಸಂಬಂಧ ವುಳ್ಳ ಇಂದ್ರಿಯಗಳಲ್ಲಿದ್ದು, ಆ ಇಂದ್ರಿಯಗಳು ವಿಷಯಾದಿಗಳಲ್ಲಿ ಪ್ರವೇಶಿಸಿ ತಮ್ಮ ವ್ಯಾಪಾರಮಾಡಲು ಶಕ್ತಿಕೊಡುತ್ತಾ ದೇವರು ಆಧ್ಯಾತ್ಮನೆಂದು ಕರೆಸಲ್ಪಡುತ್ತಾನೆ-

ಚಕ್ಷುರಭಿಮಾನಿಯದ ಸೂರ್ಯನಲ್ಲಿದ್ದು, ಹೊರಗಿನ ಪದಾರ್ಥಗಳನ್ನು ಪ್ರಕಾಶದಿಂದ ಗ್ರಹಿಸುವಂತೆ ಕಣ್ಣಿಗೆ ಶಕ್ತಿಕೊಡುವವನಾಗಿ ಆಧಿದೈವಿಕರೂಪನೆಂದು ಕರೆಸುತ್ತಾನೆ. ಹೊರಗಿನ ರೂಪಕ್ಕೆ ವಿಷಯಗಳಾದ ಪದಾರ್ಥಗಳಲ್ಲಿದ್ದು, ಆ ಪದಾರ್ಥಕ್ಕೂ ಕಣ್ಣಿಗೂ, ಸಂಬಂಧ ಉಂಟುಮಾಡಿ, ಆ ಪದಾರ್ಥದ ರೂಪಗ್ರಹಣ ಶಕ್ತಿಯನ್ನು ಕಣ್ಣಿಗೆ ಕೊಡುತ್ತಾರೆ. ಇದು ಅಧಿಭೂತರೂಪ. ಈ ರೀತಿಯಲ್ಲಿಯೂ, ಮೂರು ರೂಪಗಳಿಂದ ಸರ್ವಾಶ್ರಯನಾಗಿರುತ್ತಾನೆ.

ದೇವರು ಅಧ್ಯಾತ್ಮರೂಪದಿಂದ ಕಣ್ಣಿಲ್ಲಿರದೇ ಹೋದರೆ, ಕಣ್ಣಿನ ಗೋಳಕವು ನಾಶವಾಗಿ

ಕಾರ್ಯಮಾಡ ಲಶಕ್ತವಾಗುತ್ತದೆ. ಕಣ್ಣಿನೊಳಗೆ ಇರುವ ಸೂರ್ಯನಲ್ಲಿ ಅಧಿದೈವ ರೂಪವು ಇಲ್ಲದಿದ್ದರೆ, ಕಣ್ಣು ಚೆನ್ನಾಗಿದ್ದರೂ ಕಾಣಿಸುವುದಿಲ್ಲ. ಅಧಿಭೂತವೆಂಬ ಹೊರಗಿನ ರೂಪವಸ್ತುಗಳಲ್ಲಿ ದೇವರ ರೂಪವು ಇಲ್ಲದೇ ಹೋದರೆ, ದೃಷ್ಟಿಗೆ ವಿಷಯವಾದ ವಸ್ತುಗಳಿಲ್ಲದೇ ಕಣ್ಣಿಗೆ ಪ್ರಯೋಜನವಿರುವುದಿಲ್ಲ. ಈ ರೀತಿಯಲ್ಲಿಯೂ, ಚಕ್ಷುರಾದಿ ಕ್ರಿಯೆಗಳೂ, ಜೀವನ ಅಧೀನಗಳಲ್ಲ ಅಂತರ್ಯಾಮಿ ಅಧ್ಯಾತ್ಮ, ಅಧಿದೈವ, ಅಧಿಭೂತ ರೂಪ ಪರಮಾತ್ಮನ ಇಚ್ಛೆ, ಸ್ವತಂತ್ರತೆಂದಲೇ ನಡೆಯುವುವೆಂದು, ಈ ರೀತಿ ಬಾಕೀ ಇಂದ್ರಿಯ ವ್ಯಾಪಾರಗಳಲ್ಲಿಯೂ ಅನುಸಂಧಾನದಿಂದ, ಭಗವದ್ರೂಪಗಳನ್ನು ಚಿಂತಿಸತಕ್ಕದ್ದು.

## ವೈರಾಜರೂಪವರ್ಣನೆ

ಜೀವನಿಗೆ ಜಾಗ್ರದವಸ್ಥೆಯಲ್ಲಿ ಈ ರೀತಿ ಸ್ಥೂಲೇಂದ್ರಿಯ ವ್ಯಾಪಾರಗಳು ಪರಮಾತ್ಮನ ಅದಿಭೂತ, ಅಧಿದೈವ, ಆಧ್ಯಾತ್ಮ ರೂಪಗಳಿಂದ ನಡೆಯುತ್ತವೆಂದು ವಿವರಿಸಿ, ನಂತರ ಶ್ರೀಪರಮಾತ್ಮನು ಆತ್ಮ ಎಂಬ ಶಬ್ದವಾಚ್ಯನಾಗಿಯೂ, ಜೀವ ಶರೀರಗಳಲ್ಲಿದ್ದು ಈ ಬಹಿರಿಂದ್ರಿಯಗಳ ಸಹಾಯವನ್ನಪೇಕ್ಷಿಸದೇ, ಸ್ವಪ್ನಾದಿಗಳಲ್ಲಿ, ಹೊರಗಿನ ಪದಾರ್ಥಗಳನ್ನೂ ಅಪೇಕ್ಷಿಸದೆ, ಜೀವನ ಸ್ವರೂಪೇಂದ್ರಿಯಗಳಾದ ಚಕ್ಷುಗಳಿಗೆ, ಮನಸ್ಸಿನ ದ್ವಾರವಾಗಿ, ವಾಸನಾ ಪದಾರ್ಥಗಳನ್ನು ಸೃಷ್ಟಿಸಿ, ಸ್ವಪ್ನದಲ್ಲಿ ಜೀವರಿಗೆ ತೋರಿಸುತ್ತಾನೆಂದೂ, ಈ ಆತ್ಮರೂಪವೂ ಆಶ್ರಯರೂಪವೆಂದೂ ನಿರೂಪಿಸಿ, ನಂತರ ವೈರಾಜರೂಪ ಪರಮಾತ್ಮನನ್ನು ವರ್ಣಿಸುತ್ತಾರೆ.

ಬ್ರಹ್ಮದೇವರಸೃಷ್ಟಿಗೆ ಕಾರಣನಾದ ಈ ವೈರಾಜಾಖ್ಯ ಪುರುಷರೂಪನು, ತನ್ನಿಂದ ಸೃಷ್ಟವಾದ ಸುವರ್ಣ ಬ್ರಹ್ಮಾಂಡವನ್ನು ಭೇಧಿಸಿಕೊಂಡು ಒಳಗೆ ಪ್ರವೇಶಿಸಿ, ಅಲ್ಲಿ ಪುರುಷರೂಪದಿಂದ ಅಭಿವ್ಯಕ್ತನಾಗಿ, ಮೊದಲು ತನ್ನ ಪೂಜಾಸಾಧನವಾಗಿ ಜಲವನ್ನು ಸೃಷ್ಟಿಮಾಡಿ, ಆ ಜಲದಮೇಲೆ, ಬ್ರಹ್ಮಾಂಡದ ಹೊರಗೆ ಸೃಷ್ಟರಾಗಿದ್ದ ಸಾತ್ವಿಕಹಂಕಾರ ಶರೀರ ವುಳ್ಳ ಶೇಷದೇವರನ್ನು ಹಾಸಿಗೆಯನ್ನಾಗಿ ಮಾಡಿಕೊಂದು, ಅವರಲ್ಲಿ ಶೇಷರೂಪದಿಂದ ತಾನೂ ಇದ್ದು, ಆ ಶೇಷಪರ್ಯಂಕದ ಮೇಲೆ ಒಂದು ಸಾವಿರ ದಿವ್ಯವರುಷಗಳು ಮಲಗಿದ್ದನು.

ದೋಷರಹಿತನೂ, ನಾಶವಿಲ್ಲದವನೂ ಆದುದರಿಂದ ಪರಮಾತ್ಮನು ನರನೆಂದು ಕರೆಯಲ್ಪಡುತ್ತಾನೆ. ಈ ನರನಾಮಕ ಪರಮಾತ್ಮನಿಂದ ಜಲವು ಹುಟ್ಟಿದ್ದರಿಂದ ಇದಕ್ಕೆ ನಾರಾ ಎಂದು ಹೆಸರಾಯಿತು. ನಾರಾ ಎಂಬ ಜಲವನ್ನು ಅಯನ ಎಂದರೆ ಆಶ್ರಯಮಾಡಿಕೊಂಡು ದೇವರು ಮಲಗಿದ್ದರಿಂದ, ಅವನಿಗೆ ನಾರಾಯಣನೆಂದು ಹೆಸರಾಯಿತು. ಪೃಥುವ್ಯಾದಿ ದ್ರವ್ಯಗಳೂ, ಮನೋವಾಕ್ಕಾಯ ಸಕಲ ಕರ್ಮಗಳೂ,

ಲವ, ತೃಟಿ ಮೊದಲು ಬ್ರಹ್ಮಕಲ್ಪ ಕೊನೆಯಾಗಿ, ಅಳೆಯಲ್ಪಡುವ ಅನಾದ್ಯನಂತಕಾಲವೂ, ಸ್ವಭಾವವೆಂಬ ತ್ರಿಗುಣಾತ್ಮಕ ಪ್ರಕೃತಿಯೂ, ಜೀವನೂ ಸಹ ಶ್ರೀಪರಮಾತ್ಮನ ಆಶ್ರಯದಿಂದಲೇ ಇರುತ್ತವೆ. ದೇವರು ಉಪೇಕ್ಷೆ ಮಾಡಿದ ಕಾಲದಲ್ಲಿ ಇವುಗಳು ಏನೂ ಕಾರ್ಯಮಾಡಲಾರದೇ ಜಡಸದೃಶಗಳಾಗಿರುತ್ತವೆ.

## ಬ್ರಹ್ಮದೇವರ ಸೃಷ್ಟಿ ವಿವರಣೆ

ಸಹಸ್ರ ಪರಿವತ್ಸರಗಳ ನಂತರ ಈ ನಾರಾಯಣನು, ನಾನಾ ರೂಪಗಳನ್ನು ಸೃಷ್ಟಿಸಿ, ಅವುಗಳಲ್ಲಿ ನಾನಾ ರೂಪಗಳಿಂದ ಪ್ರವೇಶಿಸಿ ಕ್ರೀಡೆಮಾಡುತ್ತೇನೆಂದಪೇಕ್ಷಿಸಿ, ಆ ಶೇಷನಾಮಕ ಯೋಗತಲ್ಪದಿಂದ ಮೇಲಕ್ಕೆದ್ದು, ತನ್ನ ಪತ್ನಿಯಾದ ಮಾಯಾವಾಚ್ಯಳಾದ ಲಕ್ಷ್ಮೀದೇವಿಗೆ ಸುಖ ಕೊಡುವುದಕ್ಕಾಗಿ, ತನ್ನ ಇಚ್ಛಾರೂಪವಾದ ತನ್ನ ಸ್ತ್ರೀರೂಪವನ್ನು ಲಕ್ಷ್ಮೀದೇವಿಯರಲ್ಲಿಟ್ಟು, ತನ್ನ ರೂಪದಲ್ಲಿ ತಾನು ರತಿಕ್ರೀಡೆ ಮಾಡುವುದರಿಂದ, ಲಕ್ಷ್ಮೀದೇವಿಯರಿಗೆ ರತಿಸುಖ ಕೊಟ್ಟು, ಹಿರಣ್ಮಯಾತ್ಮಕವಾದ ತನ್ನ ವೀರ್ಯವನ್ನು ಲಕ್ಷ್ಮೀದೇವಿಯರಲ್ಲಿ ಅಂಡರೂಪವಾಗಿ, ಮೂರು ವಿಧದಿಂದ ಇಟ್ಟನು. ಈ ಮೂರು ವಿಧಗಳೇ ಅಧಿದೈವ, ಅಧ್ಯಾತ್ಮ, ಅಧಿಭೂತ ರೂಪಗಳೆಂದು ಕರೆಯಲ್ಪಡುತ್ತವೆ.

ಪುನಃ ಗರ್ಭಗತ ವೀರ್ಯವನ್ನು ಮೂರು ಭಾಗಗಳಾಗಿ ಮಾಡಿದನು. ಅಂಡದಿಂದ ಬ್ರಹ್ಮದೇವರ ಶರೀರ ಉತ್ಪತ್ತಿಯಾಯಿತು. ಈ ಬ್ರಹ್ಮದೇವರ ಶರೀರದೊಳಗೆ ಆಕಾಶವೆಂಬ ಅವಕಾಶವನ್ನು ಉತ್ಪತ್ತಿ ಮಾಡುವುದಕ್ಕಾಗಿ, ಅಪರಿಮಿತ ಶಕ್ತಿಸ್ವರೂಪನಾದ ನಾರಾಯಣನೇ ಒಂದು ರೇತೋಭಾಗದಿಂದ ಓಜ ಎಂಬ ಹೆಸರಿನಿಂದಲೂ, ಬಲ ಎಂಬ ಪ್ರಾಣದೇವರಿಂದಲೂ, ಬ್ರಹ್ಮದೇವರ ಮಹತ್ತತ್ವಾತ್ಮಕ ಶರೀರದಿಂದಲೂ ಸಹಿತನಾಗಿ, ಮೂರು ವಿಧದಿಂದ ರೇತೋರೂಪನಾಗಿ ಪ್ರವೇಶಿಸಿದನು. ಪೂರ್ವದಲ್ಲಿ ಮೂರು ವಿಧವಾಗಿ ಅಧಿದೈವ, ಅಧ್ಯಾತ್ಮ, ಅಧಿಭೂತ ರೂಪಗಳಿಂದಲೇ ಈ ಓಜ ಎಂಬ ನಾರಾಯಣನ ರೂಪವೂ, ಬ್ರಹ್ಮರೂಪವೂ, ಪ್ರಾಣರೂಪವೂ ಪುನಃ ಮೂರು ಪ್ರಕಾರಗಳಾದವೆಂದು ತಿಳಿಯಬೇಕು.

ಅಂಡಾಕಾರವಾಗಿದ್ದ ಬ್ರಹ್ಮಶರೀರದಲ್ಲಿ ನಾರಾಯಣನ ಇಚ್ಛೆಯಂತೆ, ಪ್ರಾಣನು ಪಾನ, ಅಪಾನ ಎಂಬ ಎರಡು ರೂಪ ಹೊಂದಿ, ಅಂಡದ ಎಡ ಬಲ ಭಾಗಗಳಲ್ಲಿದ್ದ ಇಡಾ, ಪಿಂಗಳಾ ನಾಡಿಗಳನ್ನು ಪ್ರವೇಶಿಸಿ, ಪ್ರಾಣನು ಇಡಾ ನಾಡಿಯಿಂದ ಮೇಲ್ಭಾಗಕ್ಕೂ, ಅಪಾನನು ಪಿಂಗಳಾನಾಡಿಯಿಂದ ಕೆಳಭಾಗಕ್ಕೂ ಸಂಚರಿಸಲಾಗಿ, ಆ ಬ್ರಹ್ಮಜೀವನಿಗೆ ಹಶಿವು, ಬಾಯಾರಿಕೆಗಳು ಉಂಟಾಗಿ, ಆ ಅಂಡರೂಪಕ್ಕೆ ಮುಖದ ಆಕೃತಿಯು ಹುಟ್ಟಿತು. ಆ ಮುಖದ ಆಕೃತಿಯಲ್ಲಿ ಪ್ರಾಣವಾಯುವು ಪ್ರವೇಶಿಸಲಾಗಿ, ಕಾಲು ಪ್ರದೇಶವೂ, ನಾಲಿಗೆಯೂ, ನಾಲಿಗೆಯಲ್ಲಿ ರಸನೇಂದ್ರಿಯವೂ, ತದಭಿಮಾನಿ ವರುಣನೂ,

ಷಡ್ರಸಗಳೂ ಉತ್ಪನ್ನವಾದವು. ಅಲ್ಲಿಯೇ ವಾಗಿಂದ್ರಿಯವೂ, ಅಗ್ನಿಯೂ, ವಾಕ್ಪ್ರವೃತ್ತಿಯೂ ಹುಟ್ಟಿದವು.

ನಂತರ ಬಲವಾಗಿ, ವೇಗವಾಗಿ, ಕೆಳಕ್ಕೂ ಮೇಲಕ್ಕೂ ಸಂಚರಿಸುವ ಪ್ರಾಣಾಪಾನ ವಾಯುಗಳ ವೇಗದಿಂದ, ಅಂಡದೊಳಗೆ ವಾಯುನಿರೋಧವಾಗಿ, ಅಲ್ಲಿದ್ದ ಬ್ರಹ್ಮ, ಪ್ರಾಣರಿಗೆ ಹಿಂಸೆಯಾಯಿತು. ಆವಾಗ, ನಾಸಿಕವೆಂಬ ಉಸಿರಾಡಲು ಅನುಕೂಲ ವುಳ್ಳ ಘ್ರಾಣೇಂದ್ರಿಯವೂ, ಅಶ್ವಿನೀದೇವತೆಗಳೂ, ಗಂಧವೂ ಹುಟ್ಟಿದವು. ನಾಸಿಕ್ಯಪ್ರಾಣನೂ ಹುಟ್ಟಿದನು. ಅಂಡದಲ್ಲಿದ್ದ ಬ್ರಹ್ಮನಿಗೆ, ತನ್ನನ್ನೂ ಇತರರನ್ನೂ ನೋಡಲಪೇಕ್ಷೆ ಉಂಟಾದಾಗ, ಕಣ್ಣುಗಳು ಉತ್ಪನ್ನವಾದವು, ಅಲ್ಲಿ ಪ್ರಕಾಶನೂ, ಸೂರ್ಯನೂ, ರೂಪವೂ ಹುಟ್ಟಿದವು.

ಋಷಿಗಳು ಅಗ್ನ್ಯಾದಿ ಸಾಧನಗಳಿಂದ ಯಜ್ಞಾದಿಗಳನ್ನು ಮಾಡುವವರಾಗಿ, ತದಂಗ ವೇದಘೋಷ ಮಾಡುವುದನ್ನು ಕೇಳಬೇಕೆಂದಿಚ್ಛಿಸಿದ ಬ್ರಹ್ಮನ ಅಂಡ ಶರೀರದಲ್ಲಿನ ಮುಖದಲ್ಲಿ ಕಿವಿಗಳೂ, ಶ್ರೋತ್ರೇಂದ್ರಿಯವೂ, ಶಬ್ದವೂ, ದಿಗ್ದೇವತೆಗಳೂ ಹುಟ್ಟಿದರು. ವಸ್ತುಗಳ ಮೃದುತ್ವ, ಕಠಿಣತ್ವ, ಶೀತ, ಉಷ್ಣಾದಿಗಳನ್ನು ತಿಳಿಯಲಪೇಕ್ಷಿಸಿದ ಬ್ರಹ್ಮನ ಅಂಡ ಶಿರಕ್ಕೆ ತ್ವಗೀಂದ್ರಿಯವೂ, ರೋಮಗಳೂ ಉತ್ಪನ್ನವಾದವು. ರೋಮಗಳಿಂದ ಮಹಾವೃಕ್ಷಗಳು ಹುಟ್ಟಿದವು. ಸ್ಪರ್ಶಗುಣವೂ ಸ್ಪರ್ಶವಾಯುವೂ ಉತ್ಪನ್ನರಾದರು. ಕರ್ಮಗಳನ್ನು ಮಾಡಲಪೇಕ್ಷಿಸಲು ಕೈಗಳೂ ಅಭಿಮಾನಿ ಇಂದ್ರನೂ ಹುಟ್ಟಿದರು. ತೆಗೆದುಕೊಳ್ಳುವುದು, ಕೊಡುವುದು ಎಂಬ ಕರ್ಮಗಳೂ ಹುಟ್ಟಿದವು. ಸಂಚಾರಾಪೇಕ್ಷೆಯಿಂದ ಕಾಲುಗಳು ಹುಟ್ಟಿದವು. ಗಮನಾಗಮನಶಕ್ತಿಯೂ, ಹವಿಸ್ಸುಯಜ್ಞಗಳಭಿಮಾನಿ ಉಪೇಂದ್ರನೂ ಹುಟ್ಟಿದರು.

ಪ್ರಜೆಗಳ ಉತ್ಪತ್ತಿಯನ್ನೂ ಆನಂದವನ್ನೂ ಅಪೇಕ್ಷಿಸಲು, ಜನನೇಂದ್ರಿಯವೂ, ಪ್ರಜಾಪತಿಯೂ, ಜನನಕ್ರಿಯೆಯೂ ಹುಟ್ಟಿದವು. ರತಿಸುಖ ಅಪೇಕ್ಷಿಸಲು ಉಪಸ್ಥವೂ ಉತ್ಪನ್ನವಾಯಿತು. ವಿಸರ್ಜನಾದಿಗಳನ್ನು ಮಾಡಲಪೇಕ್ಷಿಸಲು, ಗುದೇಂದ್ರಿಯವೂ ಮಿತ್ರನಾಮಕ ಸೂರ್ಯ, ಯಮನೆಂಬ ಮೃತ್ಯುವೂ ಹುಟ್ಟಿದರು. ದೇಹವನ್ನು ಬಿಟ್ಟು ಬೇರೆ ದೇಹಕ್ಕೆ ಹೋಗಲು ಮಾರ್ಗವನ್ನು ಬ್ರಹ್ಮನು ಅಪೇಕ್ಷಿಸಿದಾಗ, ನಾಡಿಗಳೂ, ನದನದ್ಯಭಿಮಾನಿಗಳೂ, ಸಮುದ್ರವೂ, ತೃಪ್ತಿ, ತುಷ್ಟಿ ಎಂಬ ದೇವತೆಗಳೂ ಹುಟ್ಟಿದರು, ನಾಭಿಸ್ಥಾನವೂ ಹುಟ್ಟಿತು. ಅನ್ನಪಾನಾದಿಗಳನ್ನು ತೆಗೆದುಕೊಳ್ಳಬೇಕೆಂದಪೇಕ್ಷಿಸಲು, ಹೊಟ್ಟೆಯ ಉತ್ಪನ್ನವಾಯಿತು. ಸೃಷ್ಟ್ಯಾದಿಗಳನ್ನು ಮಾಡುವ ಪರಮಾತ್ಮನ ಮಹಿಮೆಗಳನ್ನು ತಿಳಿಯಲಪೇಕ್ಷಿಸಲು, ಹೃದಯವೂ, ಮನಸ್ಸೂ, ಚಂದ್ರನೂ, ಸಂಕಲ್ಪವಿಕಲ್ಪಗಳೂ ಹುಟ್ಟಿದವು.

## अथ दशमोऽध्यायः

ಈ ಶರೀರವು ಇರಲು ಸಾಧನೀಭೂತಗಳಾದ ತ್ವಕ್, ಚರ್ಮ, ಮಾಂಸ, ರುಧಿರ, ಮೇಧ ಮಜ್ಜ ಅಸ್ಥಿಗಳೆಂಬ ಧಾತುಗಳೂ, ಈ ಸಪ್ತಧಾತುಗಳಿಗೆ ಅಭಿಮಾನಿಯಾದ ಜಡಪ್ರಾಣನು ಮುಖ್ಯಪ್ರಾಣನಿಂದ ಅಭಿಮಾನಿಸಲ್ಪಟ್ಟು ಭೂಮಿ, ಅಪ್ಪು , ತೇಜಸ್ಸು, ವಾಯು, ಆಕಾಶಮಯಗಳಾಗಿ, ಸಪ್ತಪ್ರಾಣಗಳೆಂದು ಕರೆಯಲ್ಪಟ್ಟು ಹುಟ್ಟಿದವು. ಈ ಜಡಪ್ರಾಣನ ಶರೀರವು, ಆಕಾಶ, ವಾಯು, ಜಲತತ್ವಗಳಿಂದ ಸೃಷ್ಟಿಸಲ್ಪಟ್ಟದ್ದು. ಇಂದ್ರಿಯಗಳೂ ಭೂತ ಪಂಚಕ ತನ್ಮಾತ್ರ ್ರಪಂಚಕಗಳನ್ನು ಉತ್ಪತ್ತಿ ಮಾಡಿದ ಸತ್ತ್ವರಜಸ್ತಮೋಗುಣಗಳಿಂದ ಸನ್ನಿಹಿತಗಳಾದವುಗಳೂ, ಮನಸ್ಸು ವಿಕಾರ ಉಳ ್ಳಸಂಕಲ್ಪ, ವಿಕಲ್ಪ ಸ್ವರೂಪವಾದದ್ದು. ನಿಶ್ಚಯಜ್ಞಾನವೆಂಬ ವಿಜ್ಞಾನಸ್ವರೂಪವಾದದ್ದು ಬುದ್ಧಿ, ಇಂತಹ ಪಂಚಭೂತ ಅಹಂಕಾರ ತತ್ವ ಮಹತ್ತತ್ವ ಪ್ರಕೃತಿಗಳೆಂಬ ಎಂಟು ಆವರಣಗಳಿಂದ ಕೂಡಿದ ಈಗ ವಿಸ್ತರಿಸಲ್ಪಟ್ಟ ಬ್ರಹ್ಮ ಶರೀರವು ಶ್ರೀಪರಮಾತ್ಮನಿಗೆ ಪ್ರತಿಮಾರೂಪವೆಂದು ತಿಳಿ.

ಶಂಖಚಕ್ರಾದ್ಯಾಯುಧಗಳಿಂದ ಭಕ್ತರ ಹೃತ್ಸ್ಥಲದಲ್ಲಿ ಗೋಚರಿಸುವ ಭಗವಂತನ ರೂಪವು ಸೂಕ್ಷ್ಮರೂಪವು. ಪರಮಾತ್ಮನ ನಿಜಸ್ವರೂಪವು, ಅಣುವಿಗಿಂತ ಅಣುವಾದದ್ದೂ, ಮಹತ್ತಿಗಿಂತಾ ಮಹತ್ತಾದದ್ದೂ, ಶಾಶ್ವತವಾದದ್ದು, ಸರ್ವತ್ರ ವ್ಯಾಪ್ತವಾದದ್ದೂ, ಆದಿಮಧ್ಯಾಂತ್ಯಗಳಿಲ್ಲದೆ ಅಪರಿಚ್ಛಿನ್ನವಾದದ್ದೂ, ಅವ್ಯಕ್ತಸ್ವರೂಪವಾದದ್ದೂ, ಸಾಕಲ್ಯವಾಗಿ ಯಾವ ವಿಶೇಷಣಗಳಿಂದಲೂ ಪೂರ್ಣವಾಗಿ ಹೇಳಲಸಾಧ್ಯವಾದದ್ದೂ, ಆದ್ದರಿಂದ ಬ್ರಹ್ಮರುದ್ರಾದಿಗಳ ವಾಙ್ಮನಸ್ಸುಗಳಿಗೂ ತಿಳಿಯಲಸಾಧ್ಯವಾದ, ಅತ್ಯಾಶ್ಚರ್ಯ ಅತ್ಯದ್ಭುತಸ್ವರೂಪವೆಂದು ತಿಳಿಯಬೇಕು. ನನ್ನಿಂದ ವರ್ಣಿಸಲ್ಪಟ್ಟ ಪರಮಾತ್ಮನ ಈ ಸ್ಥೂಲಸೂಕ್ಷ್ಮರೂಪಗಳು, ಭಗವದಿಚ್ಛಾರೂಪ ಮಾಯೆ ಎಂಬ ಪ್ರಕೃತಿಂದ ಸೃಷ್ಟಿಮಾಡಲ್ಪಟ್ಟಂಥಾದ್ದನ್ನು ಅಜ್ಞಾನಿಗಳು ತಿಳಿಯುವುದಿಲ್ಲ. ಜ್ಞಾನಿಗಳು ತಮ್ಮತಮ್ಮ ಯೋಗ್ಯತಾನುಸಾರ ತಿಳಿಯುತ್ತಾರೆ. ಪೂರ್ತಿಯಾಗಿ ಯಾರೂ ತಿಳಿಯಲಾರರು.

ವೇದಾದಿಗಳಿಂದ ವಾಚ್ಯನೂ, ಬ್ರಹ್ಮಾದಿಗಳಿಗೆ ವೇದಾದಿಗಳನ್ನು ಉಪದೇಶಿಸಿದವನಾಗಿ ವಾಚಕ ನಾಮಕನೂ, ಆಗಿ ಬ್ರಹ್ಮರೂಪವನ್ನು ಸೃಷ್ಟಿಸಿ ಆ ರೂಪದಲ್ಲಿ ಪ್ರವೇಶಿಸಿ ಧಾರಕನೂ ಆಗಿರುತ್ತಾನೆ! ಆ ವಾಚ್ಯ ವಾಚಕ ರೂಪಗಳಿಂದಲೂ, ಕಾರ್ಯ ಕಾರಣ ರೂಪಗಳಿಂದಲೂ, ನಾಮ ರೂಪ ಕ್ರಿಯಾದಿಗಳನ್ನು ಹೊಂದುತ್ತಾನೆ. ಆದುದರಿಂದ ಕರ್ಮನೆಂದೂ, ಕರ್ಮದ ಫಲಾಪೇಕ್ಷೆಯಿಲ್ಲದೆ ಕರ್ಮ ಪ್ರೇರಕನಾದ ಕಾರಣ ಅಕರ್ಮನೆಂದೂ ಕರೆಯಲ್ಪಡುತ್ತಾನೆ. ಪ್ರಜಾಪತಿಗಳ, ಮನುಗಳ, ದೇವತೆಗಳ, ಪಿತೃಗಳ, ಸಿದ್ಧ ಚಾರಣ ಗಂಧರ್ವ ವಿದ್ಯಾಧರ ಸ್ಮರ ಗುಹ್ಯರುಗಳ, ಕಿನ್ನರ, ಅಪ್ಸರ, ನಾಗರ, ಸರ್ಪ, ಕಿಂಪುರುಷರುಗಳ, ನಾಮ ರೂಪ ಕ್ರಿಯಾದಿಗಳನ್ನೂ ಬೇರೆ ಬೇರೆಯಾಗಿ ಧರಿಸಿ, ಅವರಲ್ಲಿದ್ದು ನಿಯಮಿಸುತ್ತಾನೆ.

## अथ दशमोऽध्यायः

ಅದಿತಿ, ಬ್ರಾಹ್ಮೀ ಮೊದಲಾದ ಮಾತೃಗಳಲ್ಲಿಯೂ, ರಾಕ್ಷಸ, ಘಂಟಾಕರ್ಣಾದಿ ಪಿಶಾಚಿಗಳು, ಪ್ರೇತಗಳು, ರುಕ್ಮಾಂಡ್ವಾದಿ ಕೂಷ್ಮಾಂಡಗಳು, ಕಾಲಕರ್ಣಾದಿ ಉನ್ಮಾದರೂ, ಯಾತುಧಾನರೆಂಬ ರಾಕ್ಷಸವಿಶೇಷರು, ಭೇತಾಲಗಳು, ನವಗ್ರಹಗಳು, ಹದಿನೆಂಟು ಉಪಗ್ರಹಗಳು, ಇವುಗಳಲ್ಲೂ ನಾಮರೂಪಕ್ರಿಯೆಗಳನ್ನು ಅಭಿವ್ಯಕ್ತಿಮಾಡುತ್ತಾ ಅಂತರ್ಯಾಮಿಯಾಗಿರುತ್ತಾನೆ.

ಗರುಡಾದಿಪಕ್ಷಿಗಳು ಸಿಂಹ, ವ್ಯಾಘ್ರ, ಗಜ, ಪಶು ಮೊದಲಾದ ಮೃಗಗಳು, ಅಶ್ವತ್ಥಾದಿವೃಕ್ಷಗಳು, ಮೇರ್ವಾದಿ ಪರ್ವತಗಳು, ಪ್ರಿಯವ್ರತಾದಿ ರಾಜರುಗಳು, ಸಹಸ್ರ ಕಾಲುಳ್ಳ ಜರಿ ಮುಂತಾದ ಪ್ರಾಣಿಗಳು, ಇವುಗಳಲ್ಲೂ ನಾಮಕ್ರಿಯಾರೂಪಗಳಿಂದ ಶ್ರೀಪರಮಾತ್ಮನು ಆಶ್ರಯನಾಗಿರುತ್ತಾನೆ.

ಸ್ತ್ರೀ ಪುರುಷ ಭೇದಗಳಿಂದ ಎರಡು ವಿಧರೂ, ಭೂ, ಜಲ, ವಾಯು, ಆಕಾಶ ಚರರೆಂಬ ಭೇದದಿಂದಾಗಲೀ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಆಯಾಯ ಜೀವರ ಶುಭ, ಅಶುಭಕರ್ಮ ವೈಚಿತ್ರ್ಯಗಳೇ, ನಾಮರೂಪ ವೈಚಿತ್ರ್ಯಗಳಿಗೆ ಕಾರಣಗಳಾಗಿರುತ್ತವೆ. ಉಕ್ತ ನಾಲ್ಕು ವಿಧ ಜಾತಿಗಳಲ್ಲಿಯೂ, ಪ್ರತಿ ಜಾತಿಯಲ್ಲಿಯೂ, ಪ್ರತಿ ವ್ಯಕ್ತಿಯಲ್ಲಿಯೂ, ಸತ್ತ್ವ, ರಜಸ್ತಮೋಗುಣ ಭೇದಗಳಿಂದ ಮೂರು ಮೂರು ವಿಧ ಜೀವರು ಬೇರೆ ಬೇರೆಯಗಿ ಇರುತ್ತಾರೆ.

## ಸಾತ್ವಿಕ-ರಾಜಸ-ತಾಮಸವಿಭಾಗ

ಅವರು ಯಾವ ರೀತಿ ಇರುತ್ತಾರೆಂದರೆ:- ಸಾತ್ವಿಕರು ದೇವತೆಗಳೆಂದೂ, ರಾಜಸರು ಮನುಷ್ಯರೆಂದೂ, ತಾಮಸರು ದೈತ್ಯ, ರಕ್ಷ, ಪಿಶಾಚಿ, ಮನುಷ್ಯಾಧಮರೆಂದೂ ನರಕಯೋಗ್ಯರೆಂದೂ ಕರೆಸುತ್ತಾರೆ. ಸಾತ್ವಿಕರಾದ ಸುರರು ಪುಣ್ಯಕರ್ಮಮಾಡಿ ಸುಖಿಗಳಾಗುವ ಸ್ವಭಾವದವರು. ಮನುಷ್ಯರು ರಜೋಗುಣಪ್ರಚುರದಿಂದ ಪುಣ್ಯಪಾಪಕರ್ಮಗಳನ್ನು ಮಾಡಿ, ಸ್ವರ್ಗ, ಭೂ, ನರಕಾದಿಗಳನ್ನು ಅನುಭವಿಸುವ ಸ್ವಭಾವವುಳ್ಳವರು. ಈ ಸತ್ವರಜಸ್ತಮ ಮೂರು ಗುಣ ವುಳ್ಳ ಸುರ, ನರ, ಅಸುರರು, ತಮ್ಮತಮ್ಮಲ್ಲಿ ಪುನಃ ಮೂರು ಮೂರು ವಿಧ ಅವಾಂತರ ಭೇದವುಳ್ಳವರು.

ಸೃಷ್ಟ್ಯಾರಂಭದಿಂದಲೂ ಪ್ರಧಾನ ಅಸುರರು ತಾಮಸತಾಮಸಗುಣ ವುಳ್ಳವರು. ಪ್ರಧಾನ ಅಸುರರುಗಳ ಸೇವಕರಾದ ಸುರರು ತಾಮಸ ರಾಜಸರು. ಅಪ್ರಸಿದ್ಧ ಅಸುರರು ತಾಮಸಸಾತ್ವಿಕರು. ಕೇವಲ ಪಾಪಕಾರ್ಯಗಳನ್ನೇ ಮಾಡುವ ಮನುಷ್ಯರು ರಾಜಸತಾಮಸರು. ಪುಣ್ಯಪಾಪಕರ್ಮಮಾಡುವ ಮನುಷ್ಯರು ರಾಜಸರಾಜಸರು. ಪುಣ್ಯಕರ್ಮಗಳನ್ನೇ ಮಾಡುವ ಮನುಷ್ಯರು ರಾಜಸಸಾತ್ವಿಕರು.

## अथ दशमोऽध्यायः

ಅಪ್ರಸಿದ್ಧದೇವತೆಗಳಲ್ಲಿ ಉತ್ತಮರು ಸಾತ್ವಿಕತಾಮಸರು. ತತ್ವಾಭಿಮಾನಿಗಳಲ್ಲದ ಇತರ ಪ್ರಸಿದ್ಧ ದೇವತೆಗಳು ಸಾತ್ವಿಕರಾಜಸರು. ತತ್ವದೇವತೆಗಳು ಸಾತ್ವಿಕಸಾತ್ವಿಕರು. ಅವರಿಗಿಂತಲೂ ಸಾತ್ವಿಕರು ಗರುಡ, ರುದ್ರ, ಶೇಷರೂ, ಅವರ ಪತ್ನಿಯರಾದ ಸೌಪರ್ಣಿ, ಗಿರಿಜೆ, ವಾರುಣೀದೇವಿಯರು. ಇವರಿಗಿಂತಲೂ ಸಾತ್ವಿಕೀಯರು ಸರಸ್ವತಿ, ಭಾರತಿದೇವಿಯರು ಎಂಬ ಬ್ರಹ್ಮ, ವಾಯುದೇವರ ಪತ್ನಿಯರು. ಬ್ರಹ್ಮವಾಯುಗಳು ಸತ್ವಸತ್ವಮಹಾಸತ್ವ ಸೂಕ್ಷ್ಮಸತ್ವಶರೀರ ವುಳ್ಳ, ಸಾಧುಗುಣಸಂಪೂರ್ಣರು.

ತಾಮಸತಾಮಸರೆಂದು ಹೇಳಲ್ಪಟ್ಟ ಅಪ್ರಧಾನ ದೈತ್ಯರು, ದೇವತೆಗಳಿಗೆ ಶತೃಗಳು. ದೈತ್ಯರು ತಮ್ಮ ಆಸ್ಮರೀ ಸ್ವಭಾವದಿಂದ ದೇವ, ಋಷಿ, ಮನುಷ್ಯರನ್ನು ಹಿಂಸಿಸಿ, ಸಂಹಾರ ಮಾಡಲೆತ್ನಿಸಿ, ಸದ್ಧರ್ಮ ಕಂಟಕರಾದಾಗ, ಧರ್ಮಸ್ಥಾಪನೆ ಮಾಡುವುದಕ್ಕಾಗಿಯೂ, ಸಾತ್ವಿಕರಾದ ಭಕ್ತರನ್ನೂ, ಲೋಕವನ್ನೂ ಅಭಯವಿತ್ತು ಕಾಪಾಡುವುದಕ್ಕಾಗಿಯೂ, ಶ್ರೀಪರಮಾತ್ಮನ ಮತ್ಸ್ಯಕೂರ್ಮಾದಿ ಅನೇಕ ಅವತಾರಗಳು ಧರಿಸಲ್ಪಡುತ್ತವೆ. ಈ ರೀತಿ ಅವತಾರಗಳನ್ನು ಧರಿಸಿ ಶ್ರೀಪರಮಾತ್ಮನು ದುಷ್ಟದೈತ್ಯರನ್ನು ಸಂಹಾರಮಾಡಿ, ಧರ್ಮಸ್ಥಾಪಕನಾಗಿ ಜಗತ್ತನ್ನು ನಿಯಮದಿಂದ ರಕ್ಷಿಸುತ್ತಾನೆ.

ಜಗತ್ತಿಗೆ ಈ ರೀತಿಯಾದ ಸ್ಥಿತಿಕಾಲವು ಮುಗಿದು ಯುಗಾವಸಾನ, ಮನ್ವಂತರಾವಸಾನ, ದಿನಕಲ್ಪಾ ವಸಾನ, ಬ್ರಹ್ಮಕಲ್ಪ ಪ್ರಳಯಗಳೆಂಬ, ಅವಾಂತರಪ್ರಳಯಗಳ ಮತ್ತು ಮಹಾಪ್ರಳಯಕಾಲಗಳು ಪ್ರಾಪ್ತವಾದಾಗ, ಮೃತ್ಯುನಾಮಕ ಕಾಲರೂಪ ಯಮದೇವರ ಅಂತರ್ಯಾಮಿಯೂ, ಮಹಾರುದ್ರದೇವರ ಅಂತರ್ಯಾಮಿಯಾದ ಶ್ರೀಸಂಕರ್ಷಣ, ಶ್ರೀನೃಸಿಂಹರೂಪಗಳಿಂದ ನೇತ್ರಾಗ್ನಿಜ್ವಾಲೆ ಎಂಬ ಕಾಲಾಗ್ನಿಯನ್ನು ಹುಟ್ಟಿಸಿ, ಸಕಲಪದಾರ್ಥಗಳನ್ನೂ ನಾಶಮಾಡಿ, ಲಯ ಹೊಂದಿಸಿ, ಅಂದರೆ ಪುನಃ ಸರ್ವಜಗತ್ತನ್ನೂ ತನ್ನುದರದೊಳಗೆ ಧರಿಸುವನು.

ಶ್ರೀಪರಮಾತ್ಮನು ಪುರುಷರೂಪದಿಂದ ಬ್ರಹ್ಮ, ರುದ್ರಾದಿ ಸರ್ವಜಗತ್ತನ್ನೂ ಸೃಷ್ಟಿಸಿ, ದೈತ್ಯರ ಉಪದ್ರವಗಳಿಂದ ಮತ್ಸ್ಯ, ರಾಮ, ಕೃಷ್ಣಾದ್ಯವತಾರಗಳೆಂಬ ಬೇರೆ ಬೇರೆ ರೂಪಗಳಿಂದ ಕಾಲಗಳಲ್ಲಿ ಜಗತ್ತನ್ನೂ ಜಗಜ್ಜೀವರನ್ನೂ ಸಂರಕ್ಷಿಸಿ, ಸಂಕರ್ಷಣಾತ್ಮಕ ಶ್ರೀನೃಸಿಂಹರೂಪದಿಂದ ಜಗತ್ತನ್ನು ಸಂಹರಿಸಿ, ಪುನಃ ಸರ್ವವನ್ನೂ ತನ್ನ ಉದರದಲ್ಲೇ ಸೂಕ್ಷ್ಮರೂಪದಿಂದ ಧರಿಸಿ, ಸತ್ಯವಾದ ಶಾಶ್ವತವಾದ ಜಗತ್ತನ್ನೇ ಕಾಲಭೇದಗಳಿಂದ ಸೃಷ್ಟಿ, ಪಾಲನಾ, ಸಂಹಾರಾದಿಗಳನ್ನು ಮಾಡುವುದರಿಂದ, ಬ್ರಹ್ಮ, ರುದ್ರಾದಿಗಳಾಗಲೀ, ಜಡ, ಚೇತನರಾಗಲೀ ಪರಮಾತ್ಮ ಸ್ವರೂಪರಲ್ಲ. ಆತನಿಂದ ಅತ್ಯಂತ ಭಿನ್ನರು, ಆತನ ಕೃಪಾಪೋಷಿತರು, ಸರ್ವದಾ ಪರಮಾತ್ಮಾಧೀನರು. ಪರಮಾತ್ಮನೊಬ್ಬನೇ ರಮಾ, ಬ್ರಹ್ಮಾದಿ ಸರ್ವ ದೇವೋತ್ತಮೋತ್ತಮನೆಂದು ಸ್ಪಷ್ಟವಾಯಿತು.

## अथ दशमोऽध्यायः

ಈ ಜ್ಞಾನವು ಜೀವರಿಗೆ ಮೋಕ್ಷಸಾಧನಾ ತಳಹದಿ ಎಂದು ತಿಳಿಯಬೇಕು. ಈ ಜ್ಞಾನಕ್ಕೆ ಬೇರೆಯಾದದ್ದು ಅಜ್ಞಾನ, ತಮೋರೂಪ, ನರಕರೂಪವಾದದ್ದು. ಜ್ಞಾನವನ್ನಾಶ್ರಯಿಸಿ ವಿವೇಕಿಗಳು ಪರಮಾತ್ಮನ ದರ್ಶನಹೊಂದಿ, ಆತನ ಅನುಗ್ರಹದಿಂದ ಲಿಂಗದೇಹ ಭಂಗವನ್ನು ಹೊಂದಿ ಶಾಶ್ವತ ಸುಖಾವಿರ್ಭಾವರೂಪ ಸ್ವಸ್ವರೂಪದೇಹಗಳಿಂದ ಪ್ರಕಾಶಿಸುವರು. ಅಜ್ಞಾನವನ್ನಾಶ್ರಯಿಸಿ, ತಮಸ್ಸಿನಿಂದ ದೇವರನ್ನು ಸ್ವಪ್ನದಲ್ಲೂ ತಿಳಿಯದೆ ಕೊನೆಗೆ ಪ್ರಾಣದೇವರ 'ಹೂಂ 'ಕಾರದಿಂದಾಗಲೀ, ಗದಾಪ್ರಹಾರದಿಂದಾಗಲೀ ಲಿಂಗಭಂಗಹೊಂದಿ ಶಾಶ್ವತಮಿಶ್ರಸುಖವನ್ನಾಗಲೀ, ಪೂರ್ಣದುಃಖವನ್ನಾಗಲೀ ಪಡೆಯುವರು. ಇದರಿಂದ ಶ್ರೀಪುರುಷನಾಮಕ ಪರಮಾತ್ಮನ ಬ್ರಹ್ಮದೇಹ ಸೃಷ್ಟಿಯೂ, ಬ್ರಹ್ಮಕಲ್ಪ ಸೃಷ್ಟಿಯು, ವಿಕಲ್ಪಸಹಿತ ವರ್ಣಿಸಲ್ಪಟ್ಟಿತು.

ಇನ್ನು ಕಾಲಪರಿಮಾಣಾದಿಗಳನ್ನೂ, ಕಲ್ಪಾ ದಿಪ್ರಮಾಣಗಳನ್ನೂ ಮುಂದೆ ಹೇಳುವ ಪಾದ್ಮಸೃಷ್ಟಿಯಲ್ಲಿ ವಿವರಿಸುತ್ತೇನೆ. ದೇವರಿಗೆ ಈ ಸೃಷ್ಟ್ಯಾದಿ ವ್ಯಾಪಾರಗಳಿಂದ ಆಯಾ ಕರ್ಮಸಂಬಂಧವಾದ ಕರ್ಮಫಲಗಳು ಲೇಪಿಸಲಾರವು. ಏಕೆಂದರೆ ದೇವರು ಸರ್ವಶಕ್ತನೂ, ನಿರ್ಲೆಪಾಭಿಮಾನಿಯೂ, ಸರ್ವಸ್ವತಂತ್ರನೂ ಆದುದರಿಂದ, ಕರ್ಮಫಲಗಳೂ ಅವನ ಅಧೀನಗಳೇ! ಈ ಸೃಷ್ಟ್ಯಾದಿ ಕರ್ಮಗಳೂ, ಫಲಗಳ ಉತ್ಪತ್ತಿಯೂ, ಪರಮಾತ್ಮನ ಅಧೀನರಾದ ಬ್ರಹ್ಮಾದಿ ಸಕಲ ಜೀವರ ಶ್ರೇಯಸ್ಸಿಗೂ, ಸುಖಸಾಧನಕ್ಕಾಗಿಯೂ, ಕರುಣದಿಂದ ಪರಪ್ರಯೋಜನಾರ್ಥವಾಗಿ ಪರಮಾತ್ಮನಿಂದ ಮಾಡಲ್ಪಡುತ್ತವೆ. ಇದು ದೇವರ ಸ್ವಭಾವ. ದೇವರು ಆಪ್ತಕಾಮನಾದ್ದರಿಂದ ಅವನೇ ಸುಖಸ್ವರೂಪ, ಬೇರೆ ಸುಖಾಪೇಕ್ಷೆ ದೇವರಿಗಿಲ್ಲ ಎಂದು ಬ್ರಹ್ಮದೇವರು ನಾರದರಿಗೆ ಉಪದೇಶಿಸಿದ್ದನ್ನು ಶುಕರು ಪರೀಕ್ಷಿದ್ರಾಜನಿಗೆ ಬೋಧಿಸಿದರೆಂದು, ಸೂತಪುರಾಣಿಕರು ಶೌನಕಾದಿಗಳಿಗೆ ಹೇಳಿದರು.

ಆಗ ಶೌನಕರು ಎಲೈ! ಪೂಜ್ಯಶ್ರೇಷ್ಠರಾದ ಸೂತಪುರಾಣಿಕರೆ! ವಿದುರನು ಏಕೆ ಬಂಧುಗಳನ್ನೂ ರಾಜ್ಯವನ್ನೂ ಬಿಟ್ಟು, ತೀರ್ಥಯಾತ್ರೆಗೆ ಹೊರಟನು? ತೀರ್ಥಯಾತ್ರಾನಂತರ ಹಿಂತಿರುಗುತ್ತಿದ್ದಾಗ, ವಿದುರನು ಏನುಕಾರಣ ಎಲ್ಲಿ, ಮೈತ್ರೇಯರನ್ನು ಸಂಧಿಸಿ, ಈ ಭಾಗವತಕಥಾಶ್ರವಣ ಮಾಡಿದನು? ಅದನ್ನೂ ಕೃಪೆಯಿಂದ ನಮಗೆ ಹೇಳಿರಿ! ಎಂದು ಪ್ರಾರ್ಥಿಸಿದರು. ಅದಕ್ಕೆ ಸೂತರು, ಎಲೈ! ಶೌನಕಾದಿಋಷಿಗಳಿರಾ, ಇದೇ ಪ್ರಶ್ನೆಗಳನ್ನೇ ಪರೀಕ್ಷಿದ್ರಾಜನು ಶುಕರನ್ನು ಕುರಿತು ಕೇಳಿರುತ್ತಾನೆ. ಅವನ ಪ್ರಶ್ನೆಗಳಿಗೆ ಶುಕರು ಯಾವರೀತಿ ಉತ್ತರ ಹೇಳಿದರೋ ಅದನ್ನೇ ನಿಮಗೆ ಹೇಳುವೆನು, ಕೇಳಿರಿ! ಎಂದರು.

**ಇತಿ ಶ್ರೀಮದ್ಭಾಗವತ ಮಹಾಪುರಾಣ ದ್ವಿತೀಯಸ್ಕಂಧದ ಹತ್ತನೆಯ ಅಧ್ಯಾಯವು ಮುಗಿಯಿತು.**

**ಶ್ರೀಕೃಷ್ಣಾರ್ಪಣಮಸ್ತು.**